# ಜನಶಕ್ತಿ




ಕನ್ನಡ ವಾರಪತ್ರಿಕೆ

Blog janashakthi.wordpress.com e-mail js_weekly@yahoo.com

ಸಂಪುಟ 7 ಸಂಚಿಕೆ 39

ಸೆಪ್ಟೆಂಬರ್ 29, 2013


ಪುಟ 16 ರೂ. 10/-






## ದೌರ್ಜನ್ಯ ಮುಕ್ತ ಬದುಕು ಮಹಿಳೆಯರ ಹಕ್ಕು






## 'ಕಾರ್ಪೋರೇಟ್ ಧೂರ್ತರು ತೋಡಿದ ಖೆಡ್ಡಾಕ್ಕೆ ಬೀಳಬೇಡಿ.




## 'ಕಾರ್ಮಿಕರ ಬದುಕನ್ನು ಲೆಕ್ಕಕ್ಕಿಡಿ' – ರಾಜ್ಯವ್ಯಾಪಿ ಆಗ್ರಹ



## ಕಾಂಗ್ರೆಸ್‌ನಲ್ಲಿ ಶಕ್ತಿ ಕೇಂದ್ರಕ್ಕಾಗಿ ಹಣಾಹಣೆ ಆರಂಭ



## ಸಂಕಷ್ಟದಲ್ಲಿ ಅಡಿಕೆ ಬೆಳೆಗಾರರು




# ಶೋಷಕ ವ್ಯವಸ್ಥೆಯ ಎದುರು ಸಡ್ಡುಹೊಡೆದು ನಿಲ್ಲಲು-ನಿಂತು ಸೆಣೆಸಲು

ಎಂ. ರತ್ನಾಕರ ಶೆಟ್ಟಿ, ಭಾಗ-6

ಒಟ್ಟಾರೆಯಾಗಿ ಯೂರೋಪಿಯನ್ ಸಮುದಾಯದ ಆರ್ಥಿಕತೆ ತೀವ್ರವಾಗಿ ಕುಸಿದಿದೆ. ಭೀಕರವಾದ ತಲ್ಲಣಗಳಿಂದ ಜನರ ಬದುಕು ಅಸ್ತವ್ಯಸ್ತವಾಗುತ್ತಿದೆ. ಗ್ರೀಸಿನ ರಾಜಧಾನಿ ಏಥೆನ್ಸ್‌ನ ಸರ್ಕಾರಿ ಮಾಧ್ಯಮಿಕ ಶಾಲೆಯಲ್ಲಿ ಮಾಹಿತಿ ತಂತ್ರಜ್ಞಾನ (ಐಟಿ)ದ ಶಿಕ್ಷಕಿಯೊಬ್ಬಳಿಗೆ, ಅವಳ ವೇತನದಲ್ಲಿ ಶೇ.30 ರಷ್ಟು ಕಡಿತವಾದದ್ದಲ್ಲದೆ ನೆರೆಯ ಅಲ್ಬೇನಿಯಾದ ಗಡಿಯ ಅಂಚಿಗೆ ವರ್ಗಾವಣೆಯಾಗಿ, ತನ್ನವರೆಲ್ಲರನ್ನು ತೊರೆದು ಏಕಾಂಗಿಯಾಗಿ ಅಲ್ಲಿಗೆ ತೆರಳಿ 7-8 ವರ್ಷ ವಯಸ್ಸಿನ ಮಕ್ಕಳಿಗೆ ಗಣಿತ ಮತ್ತು ಚರಿತ್ರೆಯನ್ನು ಹೇಳಿಕೊಡಬೇಕಾದ ದುಃಸ್ಥಿತಿ ಬಂದಿರುವುದು ಯೂರೋಪಿನ ಜನಜೀವನದಲ್ಲಾಗುತ್ತಿರುವ ಪಲ್ಲಟಗಳಿಗೊಂದು ಸಾಕ್ಷಿ.

ಆದರೆ ಇದಿಷ್ಟೇ ಅಲ್ಲ. ಅಷ್ಟು ದೂರದ ಪ್ರದೇಶದಲ್ಲಿ ದುಡಿಯಬೇಕಾದ ಅವಳ ಅಸಹಾಯಕ ಪರಿಸ್ಥಿತಿ ಎಷ್ಟೊಂದು ಒಂಟಿತನಕ್ಕೆ ಈಡಾಗಿದೆಯೆಂದರೆ, ಆಕೆಯ ಜತೆ ಸದಾ ಸಂಪರ್ಕದಲ್ಲಿರುವ ನೆರೆಯ ಅಲ್ಬೇನಿಯಾದಲ್ಲಿ ಆಕೆಯ ಸಂಬಳಕ್ಕಿಂತ ಕೇವಲ ಕಾಲುಭಾಗದಷ್ಟು ಮಾತ್ರ ಸರಾಸರಿ ವೇತನ ಸಿಗುತ್ತಿದೆ. ತನ್ನ ಬವಣೆಗಳನ್ನು ಹೇಳಿಕೊಳ್ಳುವ ಬದಲಾಗಿ, ಆ ಬಡಪಾಯಿಗಳ ಗೋಳನ್ನು ದಿನನಿತ್ಯ ಆಲಿಸುವಂತಹ ಪರಿಸ್ಥಿತಿ.

**ಈ ದುಃಸ್ಥಿತಿ ಬಂದದ್ದು ಏಕೆ?**

ಅತ್ಯಂತ ಸಮೃದ್ಧ ಹಾಗೂ ಶ್ರೀಮಂತ ಪ್ರದೇಶವಾಗಿದ್ದ ಯೂರೋಪಿಗೆ ಈ ದುಃಸ್ಥಿತಿ ಬಂದದ್ದಾದರೂ ಹೇಗೆ ಮತ್ತು ಏಕೆ? ಯೂರೋಪಿನ ಬ್ಯಾಂಕುಗಳು 2006ರಲ್ಲಿ (ಅಂದರೆ ಬಿಕ್ಕಟ್ಟಿನ ಮುಂಚಿನ ದಿನಗಳಲ್ಲಿ) ಇಡೀ ಜಗತ್ತಿನ ಬ್ಯಾಂಕ್ ಸಾಲಗಳಲ್ಲಿ 58% ರಷ್ಟು ಪಾಲನ್ನು ಹೊಂದಿದ್ದವು. ಅಷ್ಟೇ ಅಲ್ಲ ಬ್ಯಾಂಕಿಂಗ್ ಕ್ಷೇತ್ರದ ಒಟ್ಟು ಲಾಭದಲ್ಲಿ 43% ರಷ್ಟನ್ನೂ ಸಹ. ಹಣಕಾಸು ರಂಗದಲ್ಲಿ ಅಷ್ಟೊಂದು ಪ್ರಭಾವ ಮತ್ತು ಹಿಡಿತ ಈ ಯೂರೋಪಿನ ಬ್ಯಾಂಕುಗಳಿಗಿತ್ತು. ಅಮೇರಿಕಾದ ಶ್ರೀಮಂತ ದೊಡ್ಡಸ್ತಿಕೆಯ ನಡುವೆಯೂ, ಬ್ರಿಟನ್‌ನ ರಾಜಧಾನಿ 'ಲಂಡನ್' ಅಂತಾರಾಷ್ಟ್ರೀಯ ಹಣಕಾಸು ವ್ಯವಹಾರಗಳ ಪ್ರಮುಖ ಕೇಂದ್ರವಾಗಿ ಉಳಿದಿತ್ತು. ಆದರೆ ಬಿಕ್ಕಟ್ಟಿನ ನಂತರದ ಕಾಲಘಟ್ಟದಲ್ಲಿ ಇವೇ ಯುರೋಪಿನ ಬ್ಯಾಂಕುಗಳ ಪಾಲು, ಸಾಲಗಳಲ್ಲಿ ಶೇ 43ಕ್ಕೆ ಇಳಿದಿದೆ. ಲಾಭದಲ್ಲಂತೂ ಕೇವಲ 1.58%ಕ್ಕೆ ಕುಸಿದಿದೆ.

ಮುಂದುವರಿದ ದೇಶಗಳ ಬೃಹತ್ ಬಹುರಾಷ್ಟ್ರೀಯ ಕಂಪನಿಗಳು ಹೇರಳವಾದ ಲಾಭವನ್ನು ಗಳಿಸಿ, ತಮ್ಮ ಬಂಡವಾಳ ಶೇಖರಣೆಯನ್ನು ವಿಪರೀತವಾಗಿ ಹೆಚ್ಚಿಸಿಕೊಂಡಿದ್ದವು. ತಂತ್ರಜ್ಞಾನದ ಬೆಳವಣಿಗೆ ಮತ್ತು ಯಾಂತ್ರೀಕೃತ ಉತ್ಪಾದನಾ ವಿಧಾನಗಳಿಂದಾಗಿ, ಸರಕುಗಳನ್ನು ಉತ್ಪಾದಿಸುವ ತಮ್ಮ ಸಾಮರ್ಥ್ಯವನ್ನು ಹಲವುಪಟ್ಟು ಹೆಚ್ಚಿಸಿಕೊಂಡಿದ್ದವು. (ಉದಾಹರಣೆಗೆ ಜಗತ್ತಿನಲ್ಲಿ ಕಾರು ಮುಂತಾದ 4 ಚಕ್ರದ ವಾಹನಗಳ ಉತ್ಪಾದನೆಯ ಸಾಮರ್ಥ್ಯ ವಾರ್ಷಿಕ 860 ಲಕ್ಷದಷ್ಟಿದ್ದರೆ, ಒಟ್ಟು ಬೇಡಿಕೆ ಇರುವುದು 500 ಲಕ್ಷಕ್ಕೆ ಮಾತ್ರ.) ತಮ್ಮದೇ ಮಾರುಕಟ್ಟೆಗಳನ್ನು ಆವರಿಸಿಕೊಂಡ ನಂತರ ಹೊಸ



ಮಾರುಕಟ್ಟೆಗಳು ಅವರಿಗೆ ಬೇಕಾಗಿದ್ದವು. ಅಲ್ಲದೆ ಬಹಳವಾಗಿ ಸಂಗ್ರಹವಾದ ಬಂಡವಾಳವನ್ನು ವಿನಿಯೋಗಿಸಲು ಹೊಸ ಅವಕಾಶಗಳು ಅಗತ್ಯವಾಗಿದ್ದವು. ಬೇರೆ ದೇಶಗಳ ಮಾರುಕಟ್ಟೆಯನ್ನು ಮುಕ್ತವಾಗಿ ಪ್ರವೇಶಿಸಲು ಆಯಾ ದೇಶಗಳ ಕಾನೂನು ಅವಕಾಶ ನೀಡುತ್ತಿರಲಿಲ್ಲ. ಈ ಹಿನ್ನೆಲೆಯಲ್ಲಿಯೇ ಜಾಗತೀಕರಣದ ಹೆಸರಿನಲ್ಲಿ ಮಾರುಕಟ್ಟೆಗಳನ್ನು "ಮುಕ್ತಗೊಳಿಸುವ" ಪ್ರಕ್ರಿಯೆ ಆರಂಭವಾಗಿದ್ದು. ಜಾಗತೀಕರಣದ ನೀತಿಗಳು ಜಗತ್ತಿನೆಲ್ಲೆಡೆ ವ್ಯಾಪಿಸಿದಾಗ, ಇಡೀ ಜಗತ್ತನ್ನೇ ತಮ್ಮ ಮಾರುಕಟ್ಟೆಯನ್ನಾಗಿ ಪರಿವರ್ತಿಸಿಕೊಳ್ಳಲು ಈ ಕಂಪನಿಗಳಿಗೆ ಸಾಧ್ಯವಾಯಿತು. ಪರಿಣಾಮ ಇನ್ನಷ್ಟು ಲಾಭ. ಮತ್ತಷ್ಟು ಬಂಡವಾಳ ಶೇಖರಣೆ. ಜತೆಗೇ ಅಂತಹ ಬಂಡವಾಳವನ್ನು ಎಲ್ಲಿ ವಿನಿಯೋಗಿಸುವುದು ಎಂಬ ಸಮಸ್ಯೆಯೂ ಬೆಳೆದು ಬಂತು. ಕೃಷಿ ಕ್ಷೇತ್ರ ಮತ್ತು ಕೈಗಾರಿಕಾ ಕ್ಷೇತ್ರಗಳಲ್ಲಿ ಅವಕಾಶಗಳೇ ಇರಲಿಲ್ಲ. ರಿಯಲ್ ಎಸ್ಟೇಟ್ ದಂಧೆಯಿಂದಾಗಿ ಕೃಷಿ ರಂಗ ಸೊರಗುತ್ತಿತ್ತು. ಅಧಿಕ ಉತ್ಪಾದನೆಯಿಂದಾಗಿ ಕೈಗಾರಿಕಾ ಕ್ಷೇತ್ರ ನಲುಗುತ್ತಿತ್ತು. ಆದುದರಿಂದಲೇ ಬಂಡವಾಳ ಹೂಡಿಕೆಗೆ ಹೊಸ ಕ್ಷೇತ್ರಗಳನ್ನು ಆಯ್ದುಕೊಳ್ಳುವುದು ಅನಿವಾರ್ಯವಾಯಿತು. ಅತೀ ಕಡಿಮೆ ಅವಧಿಯಲ್ಲಿ ಅತ್ಯಂತ ಲಾಭದ ಅವಕಾಶ ಇರುವ ರಿಯಲ್ ಎಸ್ಟೇಟ್ ಮತ್ತು ಷೇರು ಮಾರುಕಟ್ಟೆಗಳು ಸಹಜವಾಗಿಯೇ ಆದ್ಯತೆಯ ಕ್ಷೇತ್ರಗಳಾದವು. ಆಕಾರಣದಿಂದಲೇ ಈ ಎರಡೂ ಕ್ಷೇತ್ರಗಳು ಎಣಿಸಲಾರದಷ್ಟು ಮಟ್ಟದಲ್ಲಿ ಬೆಳೆದು ಬಂದದ್ದು. ಈ ಬದಲಾವಣೆಗೆ ದೊಡ್ಡ ಕೊಡುಗೆ ನೀಡಿದ್ದು ಬ್ಯಾಂಕುಗಳು. ಕೃಷಿ ಮತ್ತು ಕೈಗಾರಿಕಾ ವಲಯಕ್ಕೆ ಸಾಲನೀಡುವ ತಮ್ಮ ಸಾಂಪ್ರದಾಯಿಕ ವ್ಯವಹಾರಗಳನ್ನು ಬ್ಯಾಂಕುಗಳು ಅದಾಗಲೇ ಹೆಚ್ಚು ಕಡಿಮೆ ಸ್ಥಗಿತಗೊಳಿಸಿದ್ದವು. ಅವಕಾಶಗಳೂ ಇರಲಿಲ್ಲ. ಸಹಜವಾಗಿಯೇ ರಿಯಲ್ ಎಸ್ಟೇಟ್ ಮತ್ತು ಷೇರು ಮಾರುಕಟ್ಟೆಯ ವ್ಯವಹಾರಗಳಿಗೆ ಬ್ಯಾಂಕುಗಳ ಸಾಲ ಹೆಚ್ಚು ಹೆಚ್ಚಾಗಿ ಹರಿದು ಹೋಗಲಾರಂಭಿಸಿತು. ವೈಯಕ್ತಿಕ ಗೃಹ ಸಾಲಗಳು, ಕಾರು ಇತ್ಯಾದಿ ಖರೀದಿಗೆ ಸಾಲಗಳು, ಷೇರು ಖರೀದಿಗಾಗಿ ಸಾಲಗಳು ಮುಂತಾದವುಗಳ ಜೊತೆ ಜೊತೆಗೇ, ಕಟ್ಟಡ ಹಾಗೂ ಇತರ ನಿರ್ಮಾಣ ಸಂಸ್ಥೆಗಳು, ಷೇರು ದಲ್ಲಾಳಿಗಳು ಮುಂತಾದವರಿಗೆ ಹೇರಳ ಪ್ರಮಾಣದಲ್ಲಿ ಸಾಲ ನೀಡಲಾಯಿತು. ಎಲ್ಲಿಯವರೆಗೆಂದರೆ, ಆಸ್ತಿ ಅಥವಾ ಚಿನ್ನ ಇತ್ಯಾದಿಗಳ ಬದಲಾಗಿ ಷೇರುಗಳನ್ನು ಅಡಮಾನವಾಗಿಟ್ಟಲ್ಲಿ ಸುಲಭವಾಗಿ ಮತ್ತು ಶೀಘ್ರವಾಗಿ ಸಾಲ ದೊರೆಯುವಷ್ಟರ ಮಟ್ಟಿಗೆ ಪರಿಸ್ಥಿತಿ ಬೆಳೆದು ಬಂತು. ಇವೆಲ್ಲದರಿಂದಾಗಿ ಬ್ಯಾಂಕುಗಳ ವ್ಯವಹಾರ ಹಾಗೂ ಲಾಭಗಳಿಕೆಯಲ್ಲಿ ಅಪಾರ ಪ್ರಮಾಣದ ಏರಿಕೆ ಕಂಡು ಬಂತು.

ಆದರೆ ಈ 'ಅಭಿವೃದ್ಧಿ ಹಾಗೂ ಬೆಳವಣಿಗೆ'ಯ ಪ್ರಕ್ರಿಯೆಯ ತಳಪಾಯ ಕೇವಲ ಮರಳಿನ ಗೋಡೆಯಾಗಿತ್ತು ಎಂಬ ವಾಸ್ತವಾಂಶ ನಿಚ್ಚಳವಾಗಿದ್ದು 2008ರ ಬಿಕ್ಕಟ್ಟಿನ ನಂತರದಲ್ಲೇ. ಎಷ್ಟು ಬೇಗ ಬೆಳೆದವೋ ಅದಕ್ಕಿಂತ ವೇಗವಾಗಿ ರಿಯಲ್ ಎಸ್ಟೇಟ್ ಮತ್ತು ಷೇರು ಮಾರುಕಟ್ಟೆಗಳು ಕುಸಿದವು. ಬೇಕಾಬಿಟ್ಟಿ ಸಾಲ ಕೊಟ್ಟ ಬ್ಯಾಂಕುಗಳೂ ಸಹ ಬಿಕ್ಕಟ್ಟಿಗೆ ಒಳಗಾದವು. ಜಗತ್ತಿನಲ್ಲೇ ಬಲಾಢ್ಯ ಸಂಸ್ಥೆಗಳಾಗಿದ್ದ ಬ್ಯಾಂಕುಗಳು ಮತ್ತು ವಿಮಾ ಸಂಸ್ಥೆಗಳು ನೋಡ ನೋಡುತ್ತಿದ್ದಂತೆ ದಿವಾಳಿಯ ಅಂಚಿಗೆ ಬಂದವು. ಹಲವು ಮುಳುಗಿಯೇ ಹೋದವು. ಗಾಬರಿಗೊಂಡ ಸರಕಾರಗಳು ಬಿದ್ದ ಹಾಗು ಬೀಳುತ್ತಿದ್ದ ಬ್ಯಾಂಕುಗಳು, ವಿಮಾ ಮತ್ತು ಮತ್ತಿತರ ಹಣಕಾಸು ಸಂಸ್ಥೆಗಳನ್ನು ಮೇಲೆತ್ತಲು ತಮ್ಮ ಖಜಾನೆಗಳನ್ನೇ ಬರಿದು ಮಾಡಿ ಅಂತಹ ಸಂಸ್ಥೆಗಳ ಮಡಿಲಿಗೆ ಸುರಿದವು. ಸಾಲದ್ದಕ್ಕೆ ವಿಶ್ವ ಬ್ಯಾಂಕ್, ಐಎಂಎಫ್, ಮತ್ತಿತರ ಸಂಸ್ಥೆಗಳಿಂದಲೂ ಅಪಾರ ಮೊತ್ತದ ಸಾಲಗಳನ್ನು ತೆಗೆಸಿಕೊಟ್ಟವು. ಅಂತಹ ಸಾಲಗಳಿಗೆ ಸರಕಾರಗಳೇ ಜಾಮೀನು ನೀಡಿದವು. ಅಷ್ಟು ಮಾತ್ರವಲ್ಲ, ಬ್ಯಾಂಕುಗಳ ಕೆಟ್ಟ ಸಾಲವನ್ನೆಲ್ಲಾ ಪ್ರತ್ಯೇಕವಾಗಿ ರಚಿತವಾದ ಬ್ಯಾಂಕುಗಳಿಗೆ ವರ್ಗಾಯಿಸಿ ಅದರ ಹೊಣೆ ಮತ್ತು ಹೊರೆಯನ್ನು ತಾವೇ ಹೊತ್ತುಕೊಂಡವು. ಹೆಚ್ಚು ಕಡಿಮೆ ಜಗತ್ತಿನ ಎಲ್ಲಾ ದೇಶಗಳಲ್ಲೂ ನಡೆದ ಈ ಪ್ರಕ್ರಿಯೆ ಯೂರೋಪ್‌ನಲ್ಲಿ ತುಸು ದೊಡ್ಡ ಪ್ರಮಾಣದಲ್ಲಿಯೇ ನಡೆಯಿತು. ಆದರೆ ಯೂರೋಪ್‌ನ ಬ್ಯಾಂಕುಗಳ ಬವಣೆ ಮುಂದುವರಿಯಿತು. ಕಡೆಗೆ ಯುರೋಪಿಯನ್ ಕೇಂದ್ರ ಬ್ಯಾಂಕು(ECB) ನೇರವಾಗಿ ಅಲ್ಲಿನ ಬ್ಯಾಂಕುಗಳಿಗೆ ಕೇವಲ 1% ಬಡ್ಡಿಗೆ, ಮೂರು ವರ್ಷದಲ್ಲಿ ಮರುಪಾವತಿ ಮಾಡಬೇಕಾದ ಸಾಲವನ್ನು ನೀಡಬೇಕಾಯಿತು. 2011ರ

ಪುಟ 15 ಕ್ಕೆ

ದೂರದ ಸ್ಪೇನ್ ದೇಶದ ದುಃಸ್ಥಿತಿಗೆ ಕನ್ನಡಿ ಹಿಡಿದಂತಿರುವ "ಇನ್ ಟೆಂಪೋ"ದ ಬಗ್ಗೆ ಈ ಲೇಖನ ಮಾಲೆಯ ಮೊದಲ ಕಂತಿನಲ್ಲಿ ಓದಿದ್ದೀರಿ. ಸ್ಪೇನ್ ಅನುಸರಿಸಿದ ಉದಾರೀಕರಣದ ಮುಕ್ತ ಆರ್ಥಿಕ ನೀತಿಗಳ ಜಾಡನ್ನೇ ಗಟ್ಟಿಯಾಗಿ ಹಿಡಿದಿರುವ ನಮ್ಮ ದೇಶದಲ್ಲೂ ಅಂತಹ ಪ್ರಕ್ರಿಯೆಗಳು ನಡೆಯುತ್ತಿಲ್ಲವೇನು ಎಂಬ ಆತಂಕ ನಿಮ್ಮಲ್ಲಿ ಮೂಡುವುದು ಸಹಜ. ಜಾಡು ಒಂದೇ ಆಗಿರುವಾಗ, ಪಾಡು ಭಿನ್ನವಾಗಿರಲು ಸಾಧ್ಯವೆ?

**16.9.2013 ರ ಡೆಕ್ಕನ್ ಹೆರಲ್ಡ್‌ನ ವರದಿಯೊಂದು ಈ ಕಟು ವಾಸ್ತವವನ್ನು ದೃಢಪಡಿಸುತ್ತದೆ.**

'ಇನ್ ಟೆಂಪೋ' ತರಹವೇ ನಮ್ಮ ಮುಂಬಯಿ ಮಹಾನಗರದಲ್ಲೂ ಕನಿಷ್ಟ 26 ಅಂತಸ್ತುಗಳ ವಸತಿ ಕಟ್ಟಡವೊಂದರ ನಿರ್ಮಾಣ ಕಾರ್ಯ 2008 ರಲ್ಲಿ ಪ್ರಾರಂಭವಾಗಿತ್ತು. (36 ಅಂತಸ್ತುಗಳಿಗೆ ವಿಸ್ತರಿಸಲು ಅನುಮತಿ ಪಡೆಯಲು ಕಟ್ಟಡ ನಿರ್ಮಾಪಕರು ಪ್ರಯತ್ನಿಸುತ್ತಿದ್ದಾರೆ) ಇದರ ಹೆಸರು 'ದಿ ಆರ್ಬಿಟ್ ಗ್ರಾಂಡ್'. ಅತೀ ಶ್ರೀಮಂತರಿಗಾಗಿ ಭವ್ಯ ನಿವಾಸಗಳನ್ನು ಈ ಕಟ್ಟಡದಲ್ಲಿ ಒದಗಿಸಲು ಯೋಜಿಸಲಾಗಿತ್ತು. ಕಟ್ಟಡ ನಿರ್ಮಾಣ ಸಂಸ್ಥೆಯಾದ ದಿ ಆರ್ಬಿಟ್ ಕಾರ್ಪೋರೇಷನ್‌ಗೆ ಸುಮಾರು 340 ಕೋಟಿ ರೂಗಳ ಸಾಲವನ್ನು ಎಲ್‌ಐಸಿ ಹೌಸಿಂಗ್ ಫೈನಾನ್ಸ್ ಕಾರ್ಪೋರೇಷನ್ ಮಂಜೂರು ಮಾಡಿತ್ತು. 2010 ವೇಳೆಗೆ ನಿರ್ಮಾಣ ಕಾರ್ಯ ಕುಂಠಿತವಾಗಿ ಕೇವಲ ಹತ್ತು ಅಂತಸ್ತುಗಳ ಮಟ್ಟಕ್ಕೆ ತಲುಪಲು ಮಾತ್ರ ಸಾಧ್ಯವಾಗಿತ್ತು. ಆ ನಂತರ ನಿರ್ಮಾಣ ಕಾರ್ಯ ಸ್ಥಗಿತವಾಯಿತು. ಈ ನಡುವೆ ಸಾಲದ ವಾಯಿದೆ ಮುಗಿದಿದ್ದರಿಂದ ಸಾಲ ಕೊಟ್ಟ ಸಂಸ್ಥೆ ಕಾನೂನು ಕ್ರಮಗಳನ್ನು ಕೈಗೊಂಡಿದೆ. ಇದೊಂದೇ ಅಲ್ಲ. ಕೇವಲ ಒಂದು ಮೈಲು ದೂರದ ಅಂತರದಲ್ಲಿ ಇದೇ ನಿರ್ಮಾಣ ಸಂಸ್ಥೆ ನಿರ್ಮಿಸುತ್ತಿದ್ದ 60 ಅಂತಸ್ತಿನ ಬೃಹತ್ ವಸತಿ ಕಟ್ಟಡದ ಕೆಲಸ 40 ಅಂತಸ್ತುಗಳಿಗೇ ನಿಂತುಹೋಗಿದೆ.

ದೇಶವನ್ನಾಳುತ್ತಿರುವ ಸರ್ಕಾರಗಳು ದೂರದ ಸ್ಪೇನಿನ ಅನುಭವದಿಂದ ಏನನ್ನೂ ಕಲಿತಿಲ್ಲ ನಿಜ. ಆದರೆ ತಮ್ಮ ಮೂಗಿನಡಿಯಲ್ಲಿಯೇ, ತಮ್ಮ ನೆಲದಲ್ಲಿಯೇ, ನಡೆಯುತ್ತಿರುವುದನ್ನೂ ಗಮನಿಸುತ್ತಿಲ್ಲವೇಕೆ ಎಂಬ ಪ್ರಶ್ನೆ ನಿಮ್ಮನ್ನ ಕಾಡುತ್ತಿದೆಯಲ್ಲವೇ. ನಮ್ಮ ಸರ್ಕಾರಗಳು ವಾಸ್ತವವನ್ನು ಕಾಣಲಾರರು. ಜಾಗತೀಕರಣದ ಕಪ್ಪುಬಟ್ಟೆಯಿಂದ ಅವರ ಕಣ್ಣುಗಳನ್ನು ಮುಚ್ಚಲಾಗಿದೆ. ದುರಂತದ ತೀವ್ರತೆಯನ್ನು ಅವರು ಗ್ರಹಿಸಲಾರರು. 'ಲಾಭ'ದ ಪ್ರೇರಣೆ ಅವರ ಮಾನವೀಯತೆಯನ್ನು ಇಲ್ಲವಾಗಿಸಿದೆ.

ಸಂಪಾದಕೀಯ

# ಹಿಂದೂ ಧರ್ಮಕ್ಕಾಗಿ ಹೋರಾಡಲು ಖಡ್ಗ ದೀಕ್ಷೆಯಂತೆ!!

ಹಿಂದೂ ಧರ್ಮದ ಮೇಲೆ ದಾಳಿಯಾಗುತ್ತಿದ್ದು ಅದನ್ನು ಮಟ್ಟಹಾಕುವ ಸಲುವಾಗಿ ಮುಂದಿನ ದಿನಗಳಲ್ಲಿ 5 ಸಾವಿರ ಯುವಕರಿಗೆ ಖಡ್ಗದೀಕ್ಷೆ ನೀಡಲಾಗುವುದು ಎಂದು ಅಖಿಲ ಭಾರತ ಹಿಂದೂ ಮಹಾಸಭಾ ರಾಜ್ಯ ಕಾರ್ಯಾಧ್ಯಕ್ಷ ಶ್ರೀ ಪ್ರಣವಾನಂದ ರಾಮಸ್ವಾಮೀಜಿ ಹೇಳಿದ್ದಾರೆ. ಅವರು ಇದೇ ಸೆಪ್ಟಂಬರ್ 15 ರಂದು ಭಾನುವಾರ ಮಂಗಳೂರು ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಾ ಹೀಗೆ ಹೇಳಿದರು ಎಂದು ಸೆಪ್ಟಂಬರ್ 16ರ ಕನ್ನಡಪ್ರಭ ದಿನಪತ್ರಿಕೆಯಲ್ಲಿ ವರದಿಯಾಗಿದೆ. ಇತರ ಪ್ರಮುಖ ದಿನಪತ್ರಿಕೆಗಳ ಕರಾವಳಿ ಆವೃತ್ತಿಗಳಲ್ಲಿ ಈ ಸುದ್ದಿ ದೊಡ್ಡದಾಗಿಯೇ ಪ್ರಕಟವಾಗಿರಬಹುದು. ಕರ್ನಾಟಕದ ದುಡಿಯುವ ಜನತೆಯ ಪಕ್ಷಪಾತಿಯಾಗಿರುವ "ಜನಶಕ್ತಿ" ಕನ್ನಡ ವಾರಪತ್ರಿಕೆಯು ಈ ಕುರಿತು ತನ್ನ ತೀವ್ರ ಆಕ್ಷೇಪವನ್ನು ದಾಖಲಿಸುತ್ತದೆ.

"ದಯೆ ಇಲ್ಲದ ಧರ್ಮ ಯಾವುದಯ್ಯಾ? ದಯೆಯೇ ಧರ್ಮದ ಮೂಲವಯ್ಯ." ಎಂಬ ಶರಣರ ಅಮೃತವಾಣಿ ಇಂದಿಗೂ ಪ್ರತಿಧ್ವನಿಸುತ್ತಿರುವ ನಾಡಿದು. "ಸಕಲ ಜೀವಿಗಳಿಗೆ ಲೇಸನ್ನೇ ಬಯಸುವುದು" ಹಿಂದೂ ಧರ್ಮದ ಸಾರವೆಂದು ವಿಶ್ವ-ಕ್ಕೇ ಸಾರಿದ ದೇಶವಿದು. ಆದ್ದರಿಂದಲೇ, "ನೀನು ನಿನ್ನನ್ನು ಪ್ರೀತಿಸುವಂತೆ ನಿನ್ನ ನೆರೆಯವನನ್ನೂ ಪ್ರೀತಿಸು" ಎಂದು ಸಾರುವ ಕ್ರೈಸ್ತ ಧರ್ಮವಾಗಲಿ, "ಮಾನವರೆಲ್ಲರೂ ಸಹೋದರರು" ಎಂದು ಸಾರುವ ಇಸ್ಲಾಂ ಧರ್ಮವಾಗಲಿ ಈ ನಮ್ಮ ದೇಶದಲ್ಲಿ ನೆಲೆಯನ್ನು ಕಂಡುಕೊಂಡವು.

ದಯೆ, ಪ್ರೀತಿ, ಕರುಣೆ, ಸಹೋದರತೆ, ಮಾನವೀಯತೆಯನ್ನು ಬಿಟ್ಟು ಧರ್ಮ ಎಂಬುದಿಲ್ಲ ಎನ್ನುವ ಮಾತು ಸೂರ್ಯನಷ್ಟೇ ಸತ್ಯವಾಗಿದ್ದರೂ ಮತಧರ್ಮಗಳ ಹೆಸರಿನಲ್ಲಿ ನಡೆದಷ್ಟು ಹಿಂಸಾಚಾರ ಬೇರೆ ಯಾವುದಕ್ಕೂ ನಡೆದಿಲ್ಲ ಎಂದರೆ ತಪ್ಪಾಗದು. ಯೂರೋಪಿಯನ್ ದೇಶಗಳಲ್ಲಿ ಕ್ರೈಸ್ತರೂ ಯಹೂದ್ಯರ ನಡುವೆ, ಮುಸಲ್ಮಾನರೂ ಕ್ರೈಸ್ತರ ನಡುವೆ, ಕಥೋಲಿಕರೂ ಪ್ರಾಟೆಸ್ಟೆಂಟರ್ ನಡುವೆ, ಭಾರತದಲ್ಲಿ ವೈದಿಕರೂ ಬೌದ್ಧರ ನಡುವೆ, ಶೈವರೂ ವೈಷ್ಣವರ ನಡುವೆ, ಹಿಂದೂಗಳು ಮುಸಲ್ಮಾನರ ನಡುವೆ, ಹಿಂದುಗಳೂ ಕ್ರೈಸ್ತರ ನಡುವೆ ನಡೆದ ಸಂಘರ್ಷದಲ್ಲಿ ಹರಿದುಹೋದ ಮಾನವ ರಕ್ತದಿಂದ ಇತಿಹಾಸದ ಅದೆಷ್ಟೋ ಪುಟಗಳು ಕೆಂಪಾಗಿವೆ.

ಧರ್ಮಕ್ಕಾಗಿ ಖಡ್ಗವನ್ನು ಎತ್ತುವುದರಲ್ಲಿ ರಾಜಕಾರಣವಿದೆ. ಸ್ವಧರ್ಮಕ್ಕೆ ಅನ್ಯ ಧರ್ಮಿಯರಿಂದ ಅಪಾಯ ಬಂದಿದೆ ಎಂದು ಗುಲ್ಲೆಬ್ಬಿಸಿ, ಪ್ರಚೋಧಿಸಿ ಇನ್ನೊಂದು ಧರ್ಮದ ಅಮಾಯಕ ಅನುಯಾಯಿಗಳ ಮೇಲೆ ದಾಳಿ ಮಾಡುವ ಪ್ರವೃತ್ತಿಯ ಹಿಂದೆ ಸ್ಪಷ್ಟವಾದ ಪ್ರಭುತ್ವಾಧಿಕಾರವನ್ನು ಗ್ರಹಣ ಮಾಡುವ ಉದ್ದೇಶ ಅಡಗಿರುತ್ತದೆ. ಸ ಧ್ಯದ ಜಾಗತಿಕ ವಿದ್ಯಮಾನಗಳಲ್ಲಿ ಅಮೇರಿಕ-ಯೂರೋಪಿಯನ್ ಕೂಟಕ್ಕೂ ಅರಭ್ ರಾಷ್ಟ್ರಗಳಿಗೂ ನಡುವೆ ಏರ್ಪಟ್ಟಿರುವ ಕಲಹ ಕ್ರೈಸ್ತರೂ ಮತ್ತು ಮುಸಲ್ಮಾನರ ನಡುವಿನ ಗುದ್ದಾಟದಂತೆ ಕಂಡರೂ, ಅದು ಮುಂದುವರೆದ ಪಾಶ್ಚಾತ್ಯ ಬಂಡವಾಳಶಾಹಿ ರಾಷ್ಟ್ರಗಳು ತೈಲಸಮೃದ್ಧ ಅರಬ್ ರಾಷ್ಟ್ರಗಳ ಮೇಲೆ ತಮ್ಮ ಯಜಮಾನಿಕೆಯನ್ನು ಸ್ಥಾಪಿಸಲು ನಡೆಸುತ್ತಿರುವ ಆಕ್ರಮಣಕಾರಿ ಪ್ರಯತ್ನವಾಗಿದೆ.

ಭಾರತದಲ್ಲಿಯೂ ಹಿಂದು ಧರ್ಮಕ್ಕೆ ಅನ್ಯಧರ್ಮಿಯರಿಂದ ಅಪಾಯ ಬಂದಿದೆ ಎಂದು ಮುಗ್ಧ ಹಿಂದುಗಳನ್ನು ಅಲ್ಪಸಂಖ್ಯಾತರ ವಿರುದ್ಧ ಎತ್ತಿಕಟ್ಟುವುದರಲ್ಲಿ ರಾಜಕೀಯ ದುರಾಕಾಂಕ್ಷೆಯಿದೆ. ಇದು ಹಿಟ್ಲರ್‌ನಿಂದಾಗಿ ವಿಶ್ವಕ್ಕೇ ಪರಿಚಿತವಾದ ಫ್ಯಾಸಿಸ್ಟ್ ತಂತ್ರಗಾರಿಕೆಯಾಗಿದೆ. ಇಂದು ಹೆಚ್ಚುತ್ತಿರುವ ಭಯೋತ್ಪಾದನೆಯ ಮೂಲವೇ ಇಲ್ಲಿದೆ.

ಹಿಂದೊಮ್ಮೆ ಹಿಂದೂ ಯುವಕರಿಗೆ ತ್ರಿಶೂಲಗಳನ್ನು ವಿತರಿಸುವ ಪ್ರಯತ್ನ ನಡೆಯಿತು. ಅದರ ನಂತರವೇ ಗುಜರಾತ್‌ನಲ್ಲಿ ಮೋದಿ ಪ್ರಾಯೋಜಿತ ಜನಾಂಗೀಯ ಹತ್ಯಾಕಾಂಡ ನಡೆಯಿತು. ಈಗ ಸಾಧು ವೇಶದಲ್ಲಿರುವ ಹಂತಕನೊಬ್ಬನು ಹಿಂದು ಯುವಕರಿಗೆ ಖಡ್ಗ ವಿತರಿಸಲು ಮುಂದಾಗಿದ್ದಾನೆ. ಇಂತಹ ಪ್ರಚೋದಕರನ್ನು ಮಟ್ಟಹಾಕದಿದ್ದರೆ ದೇಶದಲ್ಲಿ ಜನ ಶಾಂತಿಯಿಂದ ಬದುಕು ಸಾಗಿಸಲು ಸಾಧ್ಯವೆ?

'ಖಡ್ಗವನ್ನು ಎತ್ತುವವನು ಖಡ್ಗದಿಂದಲೇ ಹತನಾಗುವನು' ಎಂಬ ಮಾತೊಂದಿದೆ. ಹಿಂಸೆ ಹಿಂಸೆಗೇ ಜನ್ಮ ನೀಡುತ್ತದೆ. ಹಿಂಸೆಯಿಂದ ಧರ್ಮ ರಕ್ಷಣೆ ಸಾಧ್ಯವಿಲ್ಲ. ಅಧರ್ಮದಿಂದ ಧರ್ಮವನ್ನು ಕಾಪಾಡಲು ಹೇಗೆ ಸಾಧ್ಯ? ಒಬ್ಬ ಧರ್ಮಾಂಧ ಖಡ್ಗಗಳನ್ನು ವಿತರಿಸಿದರೆ ಇನ್ನೊಬ್ಬ ಧರ್ಮಾಂಧ ಬಾಂಬುಗಳನ್ನು ವಿತರಿಸುತ್ತಾನೆ! ಇದಕ್ಕೆಲ್ಲಿದೆ ಕೊನೆ? ಇಂತಹ ಕೋವಿಯಾಟ, ಖಡ್ಗದಾಟವನ್ನು ಶಾಂತಿ ಬಯಸುವ, ಹಿಂದುಗಳು, ಮುಸಲ್ಮಾನರು, ಕ್ರೈಸ್ತರು ಎಲ್ಲರೂ ವಿರೋಧಿಸಬೇಕು. ತಮ್ಮ ಮಕ್ಕಳ ಕೈಗೆ ತ್ರಿಶೂಲಗಳು, ಖಡ್ಗಗಳು, ಬಾಂಬುಗಳು ಹಸ್ತಾಂತರ ಆಗುವುದನ್ನು ತಡೆಯಲು ಕಟ್ಟೆಚ್ಚರವಹಿಸಬೇಕು.

# ಕಾಂಗ್ರೆಸ್‌ನಲ್ಲಿ ಶಕ್ತಿ ಕೇಂದಕ್ಕಾಗಿ ಹಣಾಹಣಿ


ಐದು ದಿನಗಳ ಚೀನಾ ಪ್ರವಾಸದಿಂದ ವಾಪಾಸಾದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅಲ್ಲಿನ ಪ್ರಗತಿಯನ್ನು ಮುಕ್ತ ಕಂಠದಿಂದ ಶ್ಲಾಘಿಸುತ್ತಿದ್ದಾರೆ, ಇದು ಅವರು ಸಿ.ಎಂ. ಆದ ಬಳಿಕ ಮೊದಲ ವಿದೇಶಿ ಭೇಟಿ. ಚೀನಾ ಹಾಗೇಕೆ? ಭಾರತ ಹೀಗೇಕೆ ? ಎಂದೆಲ್ಲಾ ಪ್ರಶ್ನಿಸುತ್ತಿರುವುದು ಕೆಲವರಿಗಂತೂ ಸರಿ ಬರುತ್ತಿಲ್ಲ. ನಮ್ಮ ಮಾಧ್ಯಮಗಳೂ ಸಿದ್ದುವನ್ನು ಕಿಚಾಯಿಸುತ್ತಿವೆ. ಅವರು ಯಾವದೇ ಸಿದ್ಧಾಂತ ಅಥವಾ ಪಕ್ಷದವರೇ ಆಗಿರಲಿ, ಕಡು ಸಂಘಪರಿವಾರದವರೇ ಆಗಿರಲಿ ಚೀನಾದ ಪ್ರಗತಿಯನ್ನು ನಿರಾಕರಿಸಲಾಗುತ್ತಿಲ್ಲ. ಹಾಗೇ ನಮ್ಮ ಮುಖ್ಯಮಂತ್ರಿಗಳು ಅಲ್ಲಿಯ ರಸ್ತೆಗಳು ಅಷ್ಟೊಂದು ನುಣುಪಾಗಿವೆ, ಇಲ್ಲೇಕೆ ಇಷ್ಟು ಗುಂಡಿಗಳು ಎಂದು ಕೇಳುವುದು ಅಸಹಜವೇನಲ್ಲ. ಪ್ರಶ್ನೆ ಇರುವುದು, ಪ್ರಶ್ನಿಸಬೇಕಾದುದು ಇಲ್ಲಿನ ವ್ಯವಸ್ಥೆಯ ಬಗ್ಗೆ. ಅಲ್ಲಿನ ಭೌತಿಕ ಪ್ರಗತಿಗೆ ಮೂಲ ಕಾರಣ ಅದು ಒಪ್ಪಿ, ಅಪ್ಪಿ ಪರಿಪಾಲಿಸುತ್ತಾ ನಡೆಯುತ್ತಿರುವ ವೈಜ್ಞಾನಿಕ ಸಮಾಜವಾದದ ಸಿದ್ಧಾಂತ. ಕನಿಷ್ಟ ಇಷ್ಟನ್ನಾದರೂ ಅರ್ಥ ಮಾಡಿಕೊಂಡರೆ ಅಷ್ಟಾದರೂ ಸಾರ್ಥಕವಾದೀತು, ಸಹಾಯಕವಾದೀತು. ಆದರಿದು ಅರ್ಥವಾದೀತೆ?

* * *

ಇರಲಿ, ಚೀನಾದೇಶದ ಭೇಟಿಯಿಂದಾಗಿ ಬಂಡವಾಳ ಹರಿದು ಬರಲಿದೆಯೆಂದು ಸಿ.ಎಂ. ಹೇಳಿದ್ದಾರೆ. ಅದು ಯಾವಾಗಬರುತ್ತೋ ಗೊತ್ತಿಲ್ಲ. ಆದರೆ ಅವರು ವಿದೇಶದಿಂದ ವಾಪಾಸಾಗುತ್ತಿರುವಂತೆಯೇ ಪಕ್ಷದೊಳಗಿನ ಭಿನ್ನಮತೀಯತೆ, ಗುಂಪುಗಾರಿಕೆಯ ಬಿಸಿ ಆವರಿಸಿಕೊಂಡಿದೆ. ಈಗಾಗಲೇ ಅಧಿಕಾರದಲ್ಲಿ ಪಾಲು ಪಡೆಯಬೇಕೆಂಬ ಸಚಿವಾಕಾಂಕ್ಷಿಗಳು ರಣಕಹಳೆ ಊದುತ್ತಿದ್ದಾರೆ. ಇದೀಗ ಅದು ಬಹಿರಂಗ ಕದನವಾಗಿ ಮಾರ್ಪಡುವ ಲಕ್ಷಣಗಳು ಗೋಚರಿಸುತ್ತಿವೆ.

**ಪರಮೇಶ್ವರ್ ಪರಾಮರ್ಶೆ!**

ಒಂದು ಸರಕಾರ ಹೇಗೆ ಕೆಲಸ ಮಾಡುತ್ತಿದೆಯೆಂಬುದನ್ನು ಯಾರು ಪರಿಶೀಲಿಸಬೇಕು? ಸಚಿವರ ಕೆಲಸವನ್ನು ಯಾರು ಪರಾಮರ್ಶಿಸಬೇಕು? ನಾನು ಮಾಡುವೆ ಎನ್ನುತ್ತಿದ್ದಾರೆ ಕಾಂಗ್ರೆಸ್ಸಿನ ರಾಜ್ಯ ಅಧ್ಯಕ್ಷರಾದ ಡಾ.ಜಿ.ಪರಮೇಶ್ವರವರು. ಸರಕಾರದ ಎಲ್ಲಾ ಸಚಿವರು ತಮ್ಮ ಖಾತೆಯಲ್ಲಿನ ಕಾರ್ಯಪ್ರಗತಿಯನ್ನು ವರದಿ ಮಾಡಬೇಕು ಎಂದು ತಪಾಸಣೆ ಎಂಬ ಪ್ರಕ್ರಿಯೆಗೆ ಚಾಲನೆ ನೀಡಿದ್ದಾರೆ. ತನ್ನ ಪಕ್ಷದ ನೇತೃತ್ವದ ಸರ್ಕಾರದ ಕಾರ್ಯವೈಖರಿಯನ್ನು ಪಕ್ಷದ ಸಮಿತಿ ಪರಿಶೀಲಿಸುವುದು ವಿಮರ್ಶಿಸುವುದು ಸಹಜವೆ. ಅದು ಇಡೀ ಸರಕಾರವನ್ನು ವಿಮರ್ಶಿಸಿದಂತೆ ಇರುವುದು ಸರಿ. ಆದರೆ ಈ ವಿಮರ್ಶೆ ಸರಕಾರವನ್ನು ಸರಿಯಾದ ದಿಕ್ಕಿನಲ್ಲಿ ಕೊಂಡೊಯ್ಯಬೇಕು ಎಂಬ ಉದ್ದೇಶದಿಂದ ನಡೆ-ಯುತ್ತಿದೆ ಎಂದು ಅನ್ನಿಸುತ್ತಿಲ್ಲ. ಸ್ವತಃ ಮುಖ್ಯಮಂತ್ರಿ ಸಿದ್ಧರಾಮಯ್ಯನವರು 'ಸರಕಾರ ಅಸ್ತಿತ್ವಕ್ಕೆ ಬಂದು ಇದೀಗ ಮೂರು ತಿಂಗಳಾಗಿದೆ. ಸಚಿವರ ಕಾರ್ಯ ಪರಾಮರ್ಶೆಗೆ ಈ ಅವಧಿ ತೀರಾ ಕಡಿಮೆ' ಎಂದು ಹೇಳಿ 'ಮಾಡುವುದಿದ್ದರೆ ಮಾಡಲಿ' ಎಂದಿರುವುದು ಅಧ್ಯಕ್ಷರ ಈ ಕ್ರಮಕ್ಕೆ ಅವರು ಪ್ರಕಟಿಸಿದ ಅಸಮ್ಮತಿ ಸೂಚಕ. ಇದು ಪಕ್ಷದ ನಾಯಕತ್ವಕ್ಕೂ, ಶಾಸಕಾಂಗದ ನಾಯಕತ್ವಕ್ಕೂ ಇರುವ ಭಿನ್ನಾಭಿಪ್ರಾಯ, ಬಿರುಕುಗಳ ಸ್ಪಷ್ಟ ಪ್ರದರ್ಶನ. ಈ ಮುಸುಕಿನ ಗುದ್ದಾಟ ಶಾಸಕಾಂಗ ನಾಯಕನ,




ಅರ್ಥಾತ್ ಮುಖ್ಯಮಂತ್ರಿಯ ಆಯ್ಕೆಯಾದಂದಿನಿಂದಲೇ ಇದೆ. ಆಗೀಗ ಅದು ವಿವಿಧ ರೂಪಗಳಲ್ಲಿ ಬಹಿರಂಗವಾಗುತ್ತಲೇ ಇದೆ.

ಇತ್ತೀಚಿನ ಸಂಸತ್ತಿನ ಉಪಚುನಾವಣೆಗಳಲ್ಲಿ ಕಾಂಗ್ರೆಸ್‌ನ ಇಬ್ಬರು ಅಭ್ಯರ್ಥಿಗಳು ಗೆದ್ದ ಬಳಿಕ ಸಂಪುಟ ವಿಸ್ತರಣೆ, ಅದರಲ್ಲಿ ಕೆಪಿಸಿಸಿ ಅಧ್ಯಕ್ಷರು, ಡಿ.ಕೆ.ಶಿವಕುಮಾರ್ ಸೇರಬೇಕೆಂಬ ಆಗ್ರಹಕ್ಕೆ ಹೆಚ್ಚು ಚಾಲನೆ ಬಂದಿತ್ತು. ಇದೀಗ ಪರಾಮರ್ಶೆಯ ವಿಷಯದ ಮೂಲಕ ಸಿ.ಎಂ. ವಿರೋಧಿ ಬಣ ಇನ್ನಷ್ಟು ಹೆಚ್ಚು ಬಹಿರಂಗ ಕದನಕ್ಕೆ ಇಳಿದಿದೆ. ಹಂತಹಂತವಾಗಿ ಒತ್ತಡ ಹೆಚ್ಚಿಸುತ್ತಿದೆ. ಈ ಗುದ್ದಾಟ ತಾರಕಕ್ಕೆ ಏರುತ್ತಲಿದೆ. ಈ ಸರಕಾರದಲ್ಲಿ ಮುಖ್ಯಮಂತ್ರಿಯೇ ಶಕ್ತಿಕೇಂದ್ರವಲ್ಲ, ತಾನೂ ಶಕ್ತಿ ಕೇಂದ್ರವೆಂಬುದನ್ನು ಮತ್ತೊಂದು ಬಣವು ಡಾ.ಪರಮೇಶ್ವರ್ ಮೂಲಕ ತೋರಿಸ ಹೊರಟಿದೆ.

**ಜನರ ಪಾಲಿಗೇನು?**

ಅದು ಕಾಂಗ್ರೆಸ್ ಇರಲಿ, ಬಿಜೆಪಿ ಇರಲಿ ಸರಕಾರದ ಮುಖ್ಯಮಂತ್ರಿಯನ್ನು ತಮ್ಮ ಹಿಡಿತದಲ್ಲಿರಿಸಿಕೊಳ್ಳಲು, ವ್ಯವಹಾರಗಳು ಸಲೀಸಾಗಿ ನಡೆಯುವಂತಾಗಲು ಇಂತಹ ಪರಿಶೀಲನೆಯ ನಾಟಕವನ್ನು ಪಕ್ಷದ ಹೈಕಮಾಂಡ್ ನಡೆಸುವುದುಂಟು. ಹಿಂದಿನ ಸರಕಾರದಲ್ಲಿ ಬಿಜೆಪಿ ಹೈಕಮಾಂಡ್, ಅಲ್ಲದೇ ಸರಕಾರಕ್ಕೆ ಸಂಬಂಧವೇ ಇಲ್ಲದ ಆರೆಸ್ಸೆಸ್ ಕೂಡ ಪರಾಮರ್ಶೆ ನಡೆಸಿದ್ದವು. ಆ ನಾಯಕರು ಕಾಣಿಕೆ, ಆತಿಥ್ಯ ಸ್ವೀಕರಿಸಿ ಅತ್ಯುತ್ತಮ ಸರಕಾರವೆಂದು ಹೊಗಳಿ ಸರ್ಟಿಫಿಕೇಟ್ ಕೊಟ್ಟು ಹೋಗುತ್ತಿದ್ದರು. ಆದರೆ ಜನರ ಪಾಲಿಗೆ ಆ ಸರಕಾರ ಅತ್ಯಂತ ಭ್ರಷ್ಟ, ದುಷ್ಟ ಸರಕಾರವಾಗಿತ್ತು. ಕಾಂಗ್ರೆಸ್‌ನಲ್ಲಿಯೂ ಇಂತಹ ವರಸೆಗಳಿಗೆ ಕೊರತೆಯೇನಿಲ್ಲ.

ಹೀಗಾಗಿ ಕಾಂಗ್ರೆಸ್‌ನಲ್ಲಿ ಕಿತ್ತಾಟ ಅಷ್ಟು ಸುಲಭದಲ್ಲಿ ನಿಲ್ಲುವಂತಹುದೇನಲ್ಲ. ಜನ ಹಿತಕ್ಕಿಂತ ಅಧಿಕಾರದ ಲಾಭ ಗಿಟ್ಟಿಸುವ ಆತುರವೇ ಹೆಚ್ಚಾಗಿರುವಾಗ ಇದು ಅಸಹಜವೇನಲ್ಲಾ! ಅಲ್ಲವೇ?


ಪತ್ರಿಕಾ ಗೋಷ್ಠಿಯಲ್ಲಿ ಪ್ರಣವಾನಂದ ರಾಮಸ್ವಾಮೀಜಿ ಮತ್ತಿತರು



# ಕುರುಗೋಡು : ನಿವೇಶನಕ್ಕೆ ಒತ್ತಾಯಿಸಿ ಅಲೆಮಾರಿಗಳ ಪ್ರತಿಭಟನೆ

ನಿವೇಶನ ರಹಿತ ಅಲೆಮಾರಿಗಳ ಹೋರಾಟ ಸಮಿತಿ, ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ನೇತೃತ್ವದಲ್ಲಿ ಇತ್ತೀಚೆಗೆ ಬಳ್ಳಾರಿ ಜಿಲ್ಲೆಯ ಕುರುಗೋಡು ತಹಶೀಲ್ದಾರ್ ಕಛೇರಿ ಎದುರು ಅಲೆಮಾರಿ ಸಮುದಾಯಕ್ಕೆ ಸೇರಿದ ಜನಗಳು ತೀವ್ರ ಪ್ರತಿಭಟನೆ ನಡೆಸಿದರು. ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಘೋಷಣೆಗಳನ್ನು ಕೂಗುತ್ತಾ ತಹಶೀಲ್ದಾರರ ಕಚೇರಿಗೆ ಬಂದು ಸಾಮೂಹಿಕ ಧರಣಿ ನಡೆಸಿದರು.

ಈ ಸಂದರ್ಭದಲ್ಲಿ ಪ್ರಾಂತ ರೈತ ಸಂಘದ ಅಧ್ಯಕ್ಷ ಕೆ. ಗಾದಿಲಿಂಗಪ್ಪ ಮಾತನಾಡಿ, ಎರಡು ವರ್ಷಗಳಿಂದ ಹೋರಾಟ ನಡೆದಿದೆ. ಹೋರಾಟಕ್ಕೆ ಸ್ಪಂದಿಸಿದ್ದ ಅಂದಿನ ಜಿಲ್ಲಾಧಿಕಾರಿ ಕುರುಗೋಡು ಪಟ್ಟಣದ ಕಂಪ್ಲಿ ರಸ್ತೆಯಲ್ಲಿ 5.09 ಎಕರೆ ಜಮೀನು ನೀಡಿದ್ದರು. ಆದರೆ ಅಧಿಕಾರಿಗಳ ನಿರ್ಲಕ್ಷದಿಂದಾಗಿ, ಎರಡು ವರ್ಷ ಕಳೆದರೂ ನಿವೇಶನ ರಹಿತ ಅಲೆಮಾರಿಗಳಿಗೆ ನಿವೇಶನಗಳ ಹಂಚಿಕೆಯಾಗಿಲ್ಲ ಎಂದು ದೂರಿದರು.

ಕೃಷಿ ಕೂಲಿಕಾರರ ಸಂಘದ ಮುಖಂಡರಾದ ಎಚ್.ಎಂ. ವಿಶ್ವನಾಥ ಮಾತನಾಡಿ ಅಧಿಕಾರಿಗಳು ತಾಂತ್ರಿಕ ದೋಷದ ನೆಪಮಾಡಿ ಕಾಲಹರಣ ಮಾಡುತ್ತಿದ್ದಾರೆ. ಎಲ್ಲಾ ಕಛೇರಿಗಳಿಗೆ ತಿರುಗಿದರೂ ಪ್ರಯೋಜನವಾಗಿಲ್ಲ. ಕಾರಣ ಹೋರಾಟ ಅನಿವಾರ್ಯವಾಗಿದೆ ಎಂದರು.

ಸಿಪಿಐ(ಎಂ) ಮುಖಂಡ ವಿ.ಎಸ್. ಶಿವಶಂಕರ್ ಮಾತನಾಡಿ ಜಿಲ್ಲಾಧಿಕಾರಿ ಮಂಜೂರು ಮಾಡಿದ ಸ್ಥಳಕ್ಕೆ ಹೋಗಲು ರಸ್ತೆ ಸರ್ವೇ ನಡೆಯಬೇಕಿದೆ. ಅಲ್ಲದೆ ನಿವೇಶನಗಳ ಸಂಖ್ಯೆ ನಿಗದಿ ಹಾಗೂ ನಕ್ಷೆ ಆಗಬೇಕಾಗಿದೆ. ಅಧಿಕಾರಿಗಳು ಈ ಬಗ್ಗೆ ಆಸಕ್ತಿವಹಿಸಿ ಕೆಲಸ ಮಾಡುತ್ತಿಲ್ಲ ಎಂದು ಟೀಕಿಸಿದರು.

ಸ್ಥಳಕ್ಕೆ ಆಗಮಿಸಿದ ಅಧಿಕಾರಿಗಳು ಪ್ರತಿಭಟನಾಕಾರರ ಬೇಡಿಕೆಗಳಿಗೆ ಸ್ಪಂದಿಸಿ ಮಾತನಾಡಿದರು. ತಹಶಿಲ್ದಾರ ಡಾ. ಬಿ. ಶರಣಪ್ಪ ಮಾತನಾಡಿ ರಸ್ತೆ ಸರ್ವೇ ಇಂದೇ ನಡೆಸಲಾಗಿದೆ. ಇದರ ವರದಿಯನ್ನು ಟೌನ್ ಪ್ಲಾನಿಂಗ್, ತಾಲೂಕ್ ಪಂಚಾಯತ್ ಮತ್ತು ಜಿಲ್ಲಾಧಿಕಾರಿಗೆ ನೀಡಲಾಗುವುದು ಎಂದರು. ತಾಲೂಕ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಜಾನಕಿರಾಮ್ ಮಾತನಾಡಿ, ವರದಿ ಬಂದ ತಕ್ಷಣ ಖುದ್ದಾಗಿ ಮುಂದಿನ ಕೆಲಸ ಮಾಡುವುದಾಗಿ ಹೇಳಿದರಲ್ಲದೆ ಹೋರಾಟವನ್ನು ಹಿಂಪಡೆಯಲು ಮನವಿ ಮಾಡಿದರು. ಅಧಿಕಾರಿಗಳು ನೀಡಿದ ಸ್ಪಷ್ಟ ಭರವಸೆಯ ಮೇರೆಗೆ ಹೋರಾಟವನ್ನು ತಾತ್ಕಾಲಿಕವಾಗಿ ಹಿಂಪಡೆಯಲಾಯಿತು.

ಉದ್ಯೋಗ ಖಾತ್ರಿ ಯೋಜನೆಯ ಕಾರ್ಮಿಕರ ಮುಖಂಡರಾದ ಎಸ್.ಪಿ. ಮಹಮ್ಮದ್ ಖಾನ್, ನಿವೇಶನ ಹೋರಾಟ ಸಮಿತಿಯ ಅಧ್ಯಕ್ಷ ಹನುಮಂತಪ್ಪ, ಮುಖ್ಯ ಕಾರ್ಯಕರ್ತರಾದ ಗಾಳೆಪ್ಪ, ನಾಗೇಶ, ಅರ್ಜುನ್ ಮತ್ತಿತರರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ವರದಿ: ಎಸ್.ಪಿ. ಮಹಮ್ಮದ್ ಖಾನ್

# ಗಜೇಂದ್ರಗಡ : ಸಿಪಿಐ(ಎಂ) ಶಾಖೆಗಳಿಂದ ಸ್ಥಳೀಯ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಟ

ಮನೆ ನಿವೇಶನ, ಪಡಿತರ ಚೀಟಿ, ಕುಡಿಯುವ ನೀರು, ಸಾರ್ವಜನಿಕ ಶೌಚಾಲಯಕ್ಕೆ ಸಂಬಂಧಿಸಿದ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಶಾಖೆಗಳ ನೇತೃತ್ವದಲ್ಲಿ ಪುರಸಭೆ ಹಾಗೂ ವಿಶೇಷ ತಹಶೀಲ್ದಾರ ಕಛೇರಿ ಆವರಣದಲ್ಲಿ ಅನಿರ್ಧಿಷ್ಟಾವಧಿ ಧರಣಿ ಸತ್ಯಾಗ್ರಹ ನಡೆಸಲಾಯಿತು. 300 ಕ್ಕೂ ಹೆಚ್ಚು ಅರ್ಜಿದಾರರು ಭಾಗವಹಿಸಿದ್ದರು.

ಧರಣಿ ಉದೇಶಿಸಿ ಮಾತನಾಡಿದ ಸಿಪಿಐ(ಎಂ) ನಗರ ಶಾಖೆಯ ಕಾರ್ಯದರ್ಶಿ ಮಾರುತಿ ಚಿಟಗಿ ಕಳೆದ ಮೇ ತಿಂಗಳಲ್ಲಿ ರಾಜ್ಯ ವಿಧಾನಸಭೆಗೆ ಚುನಾವಣೆ ನಡೆದು ಭ್ರಷ್ಟ ಬಿಜೆಪಿ ಪಕ್ಷವನ್ನು ಸೋಲಿಸಿ ರಾಜ್ಯದ ಜನರು ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸಿದ್ದಾರೆ. ಸಿದ್ದರಾಮಯ್ಯ ನೇತೃತ್ವದ ರಾಜ್ಯ ಕಾಂಗ್ರೆಸ್ ಸರ್ಕಾರ 100 ದಿನಗಳನ್ನು ಪೂರೈಸಿದೆ. ಈ ನಡುವಿನ ಅವಧಿಯಲ್ಲಿ, ಅನ್ನಭಾಗ್ಯ, ಕ್ಷೀರಭಾಗ್ಯ, ಮನೆ ನಿರ್ಮಾಣಕ್ಕೆ ಹಣದ ಹೆಚ್ಚಳ ಸೇರಿದಂತೆ ಕೆಲವು ಕಾರ್ಯಕ್ರಮಗಳನ್ನೇನೊ ಘೋಷಿಸಿತು. ಆದರೆ ಯೋಜನೆ ಸಮರ್ಪಕವಾಗಿ ನಡೆಯಲಿಕ್ಕೆ ಬೇಕಾದ ಅಗತ್ಯ ಕ್ರಮಗಳನ್ನು ಕೈಗೊಳ್ಳುವಲ್ಲಿ ವಿಫಲವಾಗಿದೆ ಎಂದರು.

**ಪುರಸಭಾ ಸದಸ್ಯ ಎಮ್. ಎಸ್. ಹಡಪದರಿಂದ ಟೀಕೆ :**

ಪುರಸಭಾ ಸದಸ್ಯ ಎಮ್.ಎಸ್. ಹಡಪದ ಮಾತನಾಡಿ, ಅನ್ನಭಾಗ್ಯ ಯೋಜನೆಯ ಮೂಲಕ 1 ರೂಪಾಯಿಗೆ ಕೆ.ಜಿ. ದರದಲ್ಲಿ ಕುಟುಂಬಕ್ಕೆ 30 ಕೆ.ಜೆ ಅಕ್ಕಿಯನ್ನು ನೀಡುವ ಸರಕಾರದ ಭರವಸೆಯ ಬೆನ್ನಲ್ಲೆ ರಾಜ್ಯದಲ್ಲಿ ಈ ಹಿಂದಿರುವ ಕಾರ್ಡುಗಳನ್ನು ರದ್ದುಗೊಳಿಸುವ ಕಾರ್ಯದಲ್ಲಿ ತೊಡಗಿದೆ. ಮತ್ತು ಹೊಸದಾಗಿ ಅರ್ಜಿ ಹಾಕಿದವರಿಗೆ ಒಂದೂ ಕಾರ್ಡನ್ನು




ವಿತರಿಸುತ್ತಿಲ್ಲ. ಹಾಗೂ ಸಕ್ಕರೆ, ಗೋಧಿಯನ್ನು ನೀಡುವುದನ್ನು ನಿಲ್ಲಿಸಿದೆ. ಕ್ಷೀರಭಾಗ್ಯ ಯೋಜನೆ ಜಾರಿ ಮಾಡಿದ ಸರಕಾರ ಶಾಲೆಗಳಲ್ಲಿ ಹಾಲಿನ ಪುಡಿಯನ್ನು ಮಾತ್ರ ನೀಡಿ ಸಕ್ಕರೆ ಮತ್ತು ಕುಡಿಯಲು ಗ್ಲಾಸನ್ನು ನೀಡಲಿಲ್ಲ. ಮನೆ ನಿರ್ಮಾಣಕ್ಕೆ 1,20,000/- ರೂ ವರೆಗೆ ಸಬ್ಸಿಡಿಯನ್ನು ಹೆಚ್ಚಿಸಿದ ಸರ್ಕಾರ ಈ ವರೆಗೆ ಸಾರ್ವಜನಿಕರಿಂದ ಮನೆ ನಿರ್ಮಾಣಕ್ಕಾಗಿ ಸಂಬಂಧಿಸಿ ಒಂದೇ ಒಂದು ಅರ್ಜಿಯನ್ನು ಸ್ಥಳೀಯ ಪುರಸಭೆಯವರ ಮೂಲಕ ಸ್ವೀಕರಿಸಿಲ್ಲ. ಮತ್ತು 2012-13 ರಲ್ಲಿ ವಾಜಪೇಯಿ ನಗರ ವಸತಿ ಯೋಜನೆಯ ಅಡಿಯಲ್ಲಿ ಅಯ್ಕೆಯಾದ ಫಲಾನುಭವಿಗಳಿಗೆ ಸ್ಥಳೀಯ ಪುರಸಭೆಯವರು ಕಾಮಗಾರಿ ಆದೇಶ ಪತ್ರ ನೀಡಿ ತಿಂಗಳುಗಳು ಕಳೆದರು ಫಲಾನುಭವಿಗಳ ಖಾತೆಗೆ ಹಣ ಬಿಡುಗಡೆಯಾಗಿಲ್ಲ. ಇದು ರಾಜ್ಯ ಸರ್ಕಾರದ ಆಡಳಿತದಲ್ಲಿನ ನಿರ್ಲಕ್ಷತೆಯನ್ನು ಎತ್ತಿತೋರಿಸುತ್ತದೆ.

ನಗರದಲ್ಲಿ ಜನರು ಸಮರ್ಪಕ ಕುಡಿಯುವ ನೀರಿಲ್ಲದೆ, ಶೌಚಾಲಯಗಳಿಲ್ಲದೆ, ಪಡಿತರ ಚೀಟಿಯಿಲ್ಲದೆ, ಹಲವಾರು ವರ್ಷಗಳಿಂದ ವಾಸವಾಗಿರುವ ಮನೆಗಳಿಗೆ ಹಕ್ಕುಪತ್ರ ವಿಲ್ಲದೆ, ಪರದಾಡುತ್ತಿದ್ದಾರೆ. ನಗರದಲ್ಲಿ ವಿಶೇಷ ತಹಶೀಲ್ದಾರ ಕಛೇರಿಗೆ ಅಗತ್ಯ ಸಿಬ್ಬಂದಿ ಮತ್ತು ಮೂಲಭೂತ ಸೌಲಭ್ಯಗಳಿಲ್ಲದೆ ಸದಾ ಬಣಗುಡುತ್ತಿದೆ. ಹೆಚ್ಚಿನ ಜನಸಂಖ್ಯೆ ಹೊಂದಿರುವ ನಗರಕ್ಕೆ ಅಟಲ್ ಜೀ ಸಹಾಯ ಕೇಂದ್ರದ ಬ್ಯಾಕ್ ಆಫೀಸ್ ಇರದೇ ಇದ್ದುದರಿಂದ ನರೇಗಲ್ಲಿಗೆ ಹೋಗಿ ವಾರಸಾ, ವೃದ್ದಾಪ್ಯ, ವಿಧವಾ, ಜಾತಿ ಆದಾಯ ಪ್ರಮಾಣ ಪತ್ರವನ್ನು ಪಡೆಯಬೇಕಾದ ಪರಿಸ್ಥಿತಿಯಿದೆ ಎಂದು ಟೀಕಿಸಿದರು.

**ಅಧಿಕಾರಿಗಳ ಲಿಖಿತ ಭರವಸೆ :-**

ಧರಣಿ ಸ್ಥಳಕೆ ಆಗಮಿಸಿದ ಪುರಸಭಾ ಮುಖ್ಯಾಧಿಕಾರಿ ಮಹಾಂತೇಶ ಭೀಳಗಿ, ವಾಜಪೇಯಿ ನಗರ ವಸತಿ ಯೋಜನೆಯಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ಮನೆ ನಿರ್ಮಾಣದ ಜಿ ಪಿ ಎಸ್ ಮಾಡಿ ಹಣ ಬಿಡುಗಡೆ ಮಾಡಲಾಗುವದು, ತಕ್ಷಣದಿಂದಲೇ ಮನೆ ನಿವೇಶನಕ್ಕಾಗಿ ಅರ್ಜಿ ಸ್ವಿಕರಿಸುತ್ತೆವೆ, ಉಣಚಗೇರಿ ಬಡಾವಣೆಯ ನಿವಾಸಿಗಳಿಗೆ ಮತ್ತು ಇತರ ಗುಡಿಸಲು ನಿವಾಸಿಗಳಿಗೆ ಮೂಲಸೌಕರ್ಯಗಳನ್ನು ಕಲ್ಪಿಸಲಾಗುವದು ಎಂದು ಲಿಖಿತ ಭರವಸೆ ನೀಡಿದರು.

ವಿಶೇಷ ತಹಶೀಲ್ದಾರ ಕಳ್ಳೀಹಾಳ ಮಾತನಾಡಿ ಅಟಲ್ ಜೀ ಸಹಾಯ ಕೇಂದ್ರದ ಬ್ಯಾಕ್ ಆಫೀಸ್ ಕುರಿತು ಮಾನ್ಯ ಜಿಲ್ಲಾಧಿಕಾರಿಗಳಿಗೆ ಹಾಗೂ ರಾಜ್ಯ ಸರಕಾರ[illegible] ಪತ್ರ ಬರೆಯುವದಾಗಿ ತಿಳಿಸಿದರು.

ತಾಲೂಕಾ ಆಹಾರ ನಿರೀಕ್ಷಕ ಕುನ್ನಿಬಾವಿ 1 ತಿಂಗಳೊಳಗಾಗಿ ಹೊಸ ರೇಶನ ಕಾರ್ಡ ವಿತರಣೆ ಪೂರ್ಣಗೊಳಿಸಲಾಗುವದು. 2010ರ ಹಿಂದಿನ ರೇಶನ ಕಾರ್ಡಗಳನ್ನು ಮರು ನೊಂದಣಿ ಮಾಡುವದಾಗಿ ಲಿಖಿತ ಭರವಸೆ ನೀಡಿದರು.

ಅಧಿಕಾರಿಗಳು ಲಿಖಿತ ಭರವಸೆ ನೀಡಿದ ನಂತರ ಧರಣಿ ಸತ್ಯಾಗ್ರಹ ಹಿಂಪಡೆಯಲಾಯಿತು.

ಹೋರಾಟದ ನೇತೃತ್ವವನ್ನು ಜಿಲ್ಲಾ ಸಮಿತಿ ಸದಸ್ಯ ಪೀರೂ ರಾಠೋಡ್ ಹಾಗೂ ಬಿ.ಎಸ್. ಶೀಲವಂತರ, ಬಾಲೂ ರಾಠೋಡ, ಕಳಕೇಶ ಉಕ್ಕಿಸಲ, ಮೈಬು ಹವಾಲದಾರ, ಶಿವಾನಂದ ಬೋಸಲೆ, ಯಚರಪ್ಪ ಬಡಿಗೇರ, ಯಲ್ಲಪ್ಪ ರಾಮಜಿ, ಲಕ್ಷಣ ಗುರಿಕಾರ, ಭೀರಪ್ಪಾ ದುಮ್ಮಾಳ, ಶರಣಯ್ಯಾ ಸುಗಿರಯ್ಯನಮಠ, ಬಾಲಚಂದ್ರ ಜಾಡಬಂಡಿ, ದುರಗ[illegible] ಪವಾರ, ಯಲ್ಲವ್ವಾ ತಿರಕೋಜಿ, ಪ್ರಕಾಶ ಹೆಳವರ ಮುಂತಾದವರು ವಹಿಸಿದ್ದರು.

ವರದಿ : ಮಾರುತಿ ಚಿಟಗಿ

## ಡಾ|| ಯು.ಆರ್. ಅನಂತಮೂರ್ತಿಯವರಿಗೊಂದು ಮನವಿ

# 'ಕಾರ್ಪೋರೇಟ್ ಧೂರ್ತರು ತೋಡಿದ ಖೆಡ್ಡಾಕ್ಕೆ ಬೀಳಬೇಡಿ':

**ಜಿ.ಎನ್. ನಾಗರಾಜ**


ಮೋದಿಯವರನ್ನು ಪ್ರಧಾನಿ ಪಟ್ಟ- ಬಿಜೆಪಿ ಪಕ್ಷದ ಅಭ್ಯರ್ಥಿಯಾಗಿ ೋಷಿಸಲಾಗಿದೆ. ಅನಂತ ಮೂರ್ತಿಯವರು ನುವಾರ ನೀಡಿದ ಹೇಳಿಕೆ, ಒಂದು ರ್ಚೆಯನ್ನು ಹುಟ್ಟು ಹಾಕಿದೆ. ಒಂದು ಕಡೆ ಂಘ ಪರಿವಾರದ ಭಕ್ತರು, ಮೋದಿ ಭಕ್ತರು ನಂತಮೂರ್ತಿಯವರ ಬಗ್ಗೆ ಅಸಹ್ಯಕರವಾದ ಾಷೆಯಲ್ಲಿ ಧಾಳಿ ಮಾಡುತ್ತಿದ್ದಾರೆ. ತಮ್ಮ ್ಯಾಸಿಸ್ಟ್ ಅಸಹನೆಯನ್ನು ತೋರಿಸುತ್ತಿದ್ದಾರೆ. ುತ್ತೊಂದು ಕಡೆ ಪ್ರಜಾಪ್ರಭುತ್ವೀಯ, ಕ್ಯುಲರ್ (ಜಾತ್ಯಾತೀತ) ಭಾರತದ ಬಗ್ಗೆ ನನಿತ್ಯ ದನಿಯೆತ್ತುತ್ತಿರುವ ಪ್ರಗತಿಪರ ಾಹಿತಿ- ಕಲಾವಿದರ ಪ್ರತಿಕ್ರಿಯೆಗಳನ್ನು ೋಡಿದರೆ ಮೋದಿಯವರ ಆಯ್ಕೆ ಾಡಿದವರ ಲೆಕ್ಕಾಚಾರ ಫಲಿಸುತ್ತಿದೆ ಂದೆನಿಸುತ್ತಿದೆ. ಮಸೀದಿಯ ಬಳಿ ಹಂದಿಯ ವ ಬಿದ್ದಿದೆ, ಅಥವಾ ದೇವಸ್ಥಾನದ ಮುಂದೆ ಸುವಿನ ಶವ ಕಂಡಿದೆ ಎಂದ ಕೂಡಲೇ ಾವೋದ್ರೇಕದಿಂದ ಹಿಂದೆ ಮುಂದೆ ನೋಡದೆ ುಗ್ಗುವ ಆಯಾ ಧರ್ಮದ 'ರಕ್ಷಕರಿ'ಗೂ ಪ್ರತಿಕ್ರಿಯೆಗಳಿಗೂ ವ್ಯತ್ಯಾಸವೇನಾದರೂ ಯೇ ಎಂದು ಯೋಚಿಸುವಂತಾಗಿದೆ. ಮ್ಮ ಕಡೆ ಒಂದು ಗಾದೆ ಇದೆ, 'ಎತ್ತು ಯಿತು ಎಂದರೆ ಕೊಟ್ಟಿಗೆಗೆ ಕಟ್ಟು' ಇದೂ ದೇ ಕಥೆಯೇ ಆಗಿದೆ.

ಇನ್ನು ಮೋದಿಯ ಪಟ್ಟ, ಪಿಕ್ ಪ್ಯಾಕೆಟ್- ಾಲೆಗಾರ ಚರ್ಚೆಗೆ ಬರೋಣ. ಮೋದಿಯನ್ನು ್ರಧಾನಿ ಪಟ್ಟದ ಅಭ್ಯರ್ಥಿಯಾಗಿಸಲು ಯಾರು ಯಾರೆಲ್ಲ ಪ್ರಯತ್ನಪಟ್ಟರು ಮತ್ತು ಕೆ ಎಂಬುದನ್ನು ಎಲ್ಲ ಮಗ್ಗಲುಗಳಿಂದ ಶ್ಲೇಷಿಸಿದಾಗಲೇ ಮುಂದಿನ ಲೋಕಸಭಾ ುನಾವಣೆಯಲ್ಲಿ ನಮ್ಮ ಅಯ್ಕೆ ಏನು ಎಂಬ ಗ್ಗೆ ಸ್ಪಷ್ಟ ತೀರ್ಮಾನ ತೆಗೆದುಕೊಳ್ಳಲು ಧ್ಯವಾಗುವುದು. ಮೋದಿಯನ್ನು ಪ್ರ ಾನಿ ಅಭ್ಯರ್ಥಿಯಾಗಿ ಸೂಚಿಸಿದವರು ುತ್ತು ಅದಕ್ಕಾಗಿ ಇನ್ನಿಲ್ಲದ ಪ್ರಯತ್ನ ಟ್ಟವರು ಯಾರು ಎಂಬುದು ಇತ್ತೀಚಿನ ಿನಗಳಲ್ಲಿ ದಿನ ನಿತ್ಯ ವರದಿಯಾಗಿದೆ. ರೆಸ್ಸೆಸ್, ಅದರ ಪರಿವಾರ ಮೋದಿಯನ್ನು ಯ್ಕೆ ಮಾಡುವುದು ಸಹಜ. ಮೋದಿಯ ಿಂತನೆ ಹಾಗೂ ಕ್ರೌರ್ಯದ, ನರಮೇಧದ ೃತ್ಯಗಳಿಗೂ ಸಂಘ ಪರಿವಾರಕ್ಕೂ ಮೇಳವಿದೆ ಂಬ ಬಗ್ಗೆ ಯಾರಿಗೂ ಸಂಶಯವಿಲ್ಲ. ಆದರೆ ಅದೊಂದೇ ಮಗ್ಗುಲನ್ನು ಮಾತ್ರ ೋಡಿ ನಮ್ಮ ದೇಶದ ಅತ್ಯಂತ ಪ್ರಮುಖ ಾಜಕೀಯ ತೀರ್ಮಾನ ಮಾಡಬಹುದೇ? ಮೋದಿಯನ್ನು ಅರೆಸ್ಸೆಸ್ಸಿನವರು ಯೋಚನೆ ಮಾಡುವುದಕ್ಕೂ ಮೊದಲು ಲೆಕ್ಕ ಹಾಕಿದವರು ಹಾಗೂ ಸೂಚಿಸಿದವರು ನಮ್ಮ ದೇಶದ ಕಾರ್ಪೋರೇಟ್ ವಲಯದ ಕೆಲವು ುಖರು. ಅಲ್ಲಿಯವರೆಗೂ ಅದ್ವಾನಿಯೋ, ಅರುಣ ಜೈಟ್ಲಿಯೋ, ಸುಷ್ಮಾಸ್ವರಾಜೋ ಎಂಬ ಸ್ಪರ್ಧೆ ನಡೆಯುತ್ತಿದ್ದದ್ದು, ಇವರಲ್ಲಿ ಯಾರು ಎನ್‌ಡಿಎ ಕೂಟಕ್ಕೆ ಮತ್ತಷ್ಟು ಸಹಚರರನ್ನು ಪಡೆಯುವುದಕ್ಕೆ ಪ್ರಯೋಜನ ಎಂದು ಚರ್ಚೆ ನಡೆಯುತ್ತಿದ್ದದ್ದು ಇದ್ದಕ್ಕಿದ್ದಂತೆ ಮೋದಿಯ ಕಡೆ ವಾಲಿತು. ಗುಜರಾತ್‌ನಲ್ಲಿ ಮೂರನೇ ಬಾರಿಯ ಗೆಲುವಿನ ನಂತರ ದೇಶದ ಕಾರ್ಪೋರೇಟ್ ದೊರೆಗಳು ಈ ತೀರ್ಮಾನಕ್ಕೆ ಬಂದು ಅನೇಕ ರಾಷ್ಟ್ರೀಯ ಸಮಾವೇಶ, ವಿಚಾರ ಸಂಕಿರಣಗಳಿಗೆ ಆಹ್ವಾನಿಸಲಾರಂಭಿಸಿದರು. ತಮ್ಮ ಒಡೆತನದ ಮಾಧ್ಯಮಗಳಲ್ಲಿ ಪ್ರೊಜೆಕ್ಟ್ ಮಾಡಲಾರಂಭಿಸಿದರು. ಮೋದಿಯನ್ನು ಭೇಟಿ ಮಾಡಿ ಚರ್ಚಿಸಿದರು. ಅಲ್ಲಿಯವರೆಗೆ ನೆನೆಗುದಿಗೆ ಬಿದ್ದಿದ್ದ ಬಿಜೆಪಿ ನಾಯಕತ್ವದ ಪ್ರಶ್ನೆಯನ್ನು ಆರೆಸ್ಸೆಸ್ ಕೈಗೆತ್ತಿಕೊಂಡು ಹಲವು ಹಂತದ ಚರ್ಚೆಯ ನಂತರ ಅಂತಿಮಗೊಳಿಸಿತು. ಬಿಜೆಪಿ, ಎಂಬುದು ಬೇರೆಲ್ಲಾ ರಾಜಕೀಯ ಪಕ್ಷಗಳಂತೆ ಸ್ವತಂತ್ರ ರಾಜಕೀಯ ಪಕ್ಷವಲ್ಲ ಅದು ಕೇವಲ ಆರೆಸ್ಸೆಸ್‌ನ ರಾಜಕೀಯ ಮುಖವಾಡ ಎಂಬ ಸತ್ಯ ಈ ಎರಡೂ ಸಂಘಟನೆಗಳು ಎಷ್ಟೆಲ್ಲಾ ಮರೆಮಾಚಲು ಪ್ರಯತ್ನಿಸಿದರೂ ಕೂಡ ಇನ್ನೆಂದೂ ನಿರಾಕರಿಸಲಾಗದಂತೆ ಸಾಬೀತಾಗಿದೆ.

**ಕಾರ್ಪೋರೇಟ್ ಕುಳಗಳು ಹಾಗೂ ಬಿಜೆಪಿ-ಆರೆಸ್ಸೆಸ್‌ಗಳ ಹಿಂದುತ್ವವಾದೀ ಮುಖವಾಡ.**

ಮೋದಿಯವರ ನರಮೇಧದ ಪ್ರಕರಣಗಳು, ಎನ್‌ಕೌಂಟರ್ ಕೊಲೆಗಳು ಇತ್ಯಾದಿಗಳ ಬಗ್ಗೆ ಸುಪ್ರೀಂ ಕೋರ್ಟ್‌ನ ಛೀಮಾರಿಗಳು ಮತ್ತನೇಕ ಪ್ರಕರಣಗಳು ಜಗಜ್ಜಾಹೀರಾಗಿದ್ದರೂ ಭಾರತದ ಕಾರ್ಪೋರೇಟ್ ವಲಯ ಒಂದು ರೀತಿ ಏಕ ಕಂಠದಿಂದ ಮೋದಿಯವರ ಹಾಡಿ ಹೊಗಳುತ್ತಿರುವುದು ಏನನ್ನು ತೋರಿಸುತ್ತದೆ? ಕಾರ್ಪೋರೇಟ್ ವಲಯಕ್ಕೆ ನಮ್ಮ ದೇಶದ ಪ್ರಜಾಪ್ರಭುತ್ವ, ಸಂವಿಧಾನ, ಜಾತ್ಯಾತೀತತೆ, ನ್ಯಾಯಾಂಗ ಇವು ಯಾವುದರ ಬಗ್ಗೆಯೂ ತಿಲ ಮಾತ್ರ ಗೌರವವಿಲ್ಲ ಅವರಿಗೆ ಕೇವಲ ಸಾರ್ವಜನಿಕ ಸಂಪತ್ತನ್ನು ಕಬಳಿಸುವುಕ್ಕೆ, ದುರ್ಲಾಭ ಗಳಿಸುವುದಕ್ಕೆ ಯಾರು ತಮಗೆ ಅನುವಾಗಿರುತ್ತಾರೆ ಎಂಬುದಷ್ಟೇ ಮುಖ್ಯ ಎಂಬುದೂ ಕೂಡ ಈ ಪ್ರಕರಣದಲ್ಲಿ ಸಂಶಯಕ್ಕೆಡೆಯಿಲ್ಲದಂತೆ ಸಾಬೀತಾಗಿದೆ. ಸ್ವಾತಂತ್ರ್ಯ ಚಳುವಳಿಯಲ್ಲಿ ಕಾಂಗ್ರೆಸ್‌ಗೆ, ಗಾಂಧೀಜಿಯವರಿಗೆ ಬೆಂಬಲ ನೀಡಿದ್ದು ಇದೇ ಕಾರ್ಪೋರೇಟ್ ವಲಯ ಎಂಬುದನ್ನು ನೆನಪಿಸಿಕೊಳ್ಳೋಣ. ಈ ಕಾರ್ಪೋರೇಟ್ ವಲಯಕ್ಕೆ ತಮ್ಮ ಲೋಭ, ಸ್ವಾರ್ಥ, ದುರ್ಲಾಭಕ್ಕೆ ಯಾವ ಕಾಲಕ್ಕೆ ಯಾರೆಲ್ಲಾ ಪ್ರಯೋಜನಕಾರಿಯಾಗುತ್ತಾರೋ ಅವರನ್ನೆಲ್ಲಾ ಬಳಸಿಕೊಳ್ಳತ್ತಾರೆ ಎಂಬುದಕ್ಕೆ ಅವರ ನಮೋರಾಗವೇ ಸಾಕ್ಷಿ. ಈ ಕಾರ್ಪೋರೇಟ್ ವಲಯದ ಒತ್ತಾಯ-ಕ್ಕೆ ಆರೆಸ್ಸೆಸ್-ಬಿಜೆಪಿ ಮಣಿದಿದೆ ಎಂಬುದು ಏನು ತೋರಿಸುತ್ತದೆ? ಬಿಜೆಪಿ ಎಂಬುದು ಹಿಂದುಗಳ ಉದ್ಧಾರಕ್ಕಾಗಿ, ಭಾರತದ ರಾಷ್ಟ್ರೀಯ ಗೌರವವನ್ನು ಎತ್ತಿ ಹಿಡಿಯುವುದಕ್ಕಾಗಿ ಎಂಬುದೂ ಕೂಡ ಒಂದು ಮುಖವಾಡವಷ್ಟೇ ಎಂಬುದು ಗೊತ್ತಾಗುತ್ತದೆ. ಮೋದಿಯವರನ್ನು ಏಕೆ ಕಾರ್ಪೋರೇಟ್ ವಲಯ ಓಲೈಸುತ್ತಿದೆ ಎಂಬುದು ಕೂಡ ಇಂದು ಜನಜನಿತವಾದ ವಿಷಯ. ದೊಡ್ಡ ದೊಡ್ಡ ಕಾರ್ಪೋರೇಟ್ ವಲಯಕ್ಕೆ ಇಡೀ ಗುಜರಾತ್‌ನ ಭೂಮಿ ಮತ್ತಿತರ ಸಂಪತ್ತನ್ನು, ಬಜೆಟ್ ಅನ್ನು ತೆರೆದಿಟ್ಟದ್ದೇ ಅವರು ಕಾರ್ಪೋರೇಟ್ ವಲಯದ ಡಾರ್ಲಿಂಗ್ ಆಗಲು ಕಾರಣವಾಯಿತು. ಆದ್ದರಿಂದ ಅವರ ಕಟ್ಟರ್ ಹಿಂದುತ್ವವಾದ, ಕೋಮುಗಲಭೆ ಇವುಗಳೆಲ್ಲಾ ಕಾರ್ಪೋರೇಟ್ ವಲಯಕ್ಕೆ ಸರ್ಕಾರವನ್ನು ಅಡಿಯಾಳಾಗಿಸುವುದಕ್ಕೆ ಒಂದು ನೆಪವೇನೋ ಎಂಬಂತಿದೆ.

**ಕಾರ್ಪೋರೇಟ್ ಕುಳಗಳ ಪಕ್ಷಾಂತರ**



ನಾವು ರಾಜಕಾರಣಿಗಳ ಪಕ್ಷಾಂತರದ ಬಗ್ಗೆ ಬಹಳ ಬಹಳ ಕೇಳಿದ್ದೇವೆ. ಆದ-ರೆ ಈ ಕಾರ್ಪೋರೇಟ್ ಕುಳಗಳ ಪಕ್ಷಾಂತರದ ಬಗ್ಗೆ ಎಲ್ಲಿಯೂ ವರದಿಯಾಗುವುದೇ ಇಲ್ಲ. ಅವರು ದೆಹಲಿಯಲ್ಲಿನ ವಿವಿಧ ರಾಜಕೀಯ ಬಿಕ್ಕಟ್ಟುಗಳ ಸಂದರ್ಭಗಳಲ್ಲಿ ಇದ್ದ ಸರ್ಕಾರವನ್ನು ಉಳಿಸಿಕೊಳ್ಳಲು ಅಥವಾ ಬೀಳಿಸಲು ಹರಿಸುವ ಹಣದ ಹೊಳೆಯ ಬಗ್ಗೆ ವರದಿಯಾಗುವುದೇ ಇಲ್ಲ. ವಿ.ಪಿ. ಸಿಂಗ್ ಸರ್ಕಾರ ಬೀಳುವ ಸಂದರ್ಭದಲ್ಲಿ, 1996 ರಲ್ಲಿ ಬಿಜೆಪಿ ಸರ್ಕಾರ ರಚಿತವಾಗಿ ಹದಿಮೂರು ದಿನಗಳಿಗೇ ಬಿದ್ದ ಸಂದರ್ಭದಲ್ಲಿ, ದೇವೇಗೌಡರ ಸರ್ಕಾರ, ಗುಜ್ರಾಲ್ ಸರ್ಕಾರ, 1998ರಲ್ಲಿ ವಾಜಪೇಯಿ ಸರ್ಕಾರ, ಪತನವಾದ ಸಂದರ್ಭದಲ್ಲಿ, ನರಸಿಂಹರಾಯರ ಸರ್ಕಾರ, ತೀರಾ ಇತ್ತೀಚೆಗೆ ಅಣು ಒಪ್ಪಂದದ ಸಮಯದಲ್ಲಿ ಮನಮೋಹನ ಸಿಂಗರ ಸರ್ಕಾರ ವಿಶ್ವಾಸ ಮತ ಗಳಿಸುವುದು ಸಂಶಯವೆಂದ ಸಂದರ್ಭದಲ್ಲಿ ದೆಹಲಿಯಲ್ಲಿ ಕುಣಿದಾಡಿದ ಹಣದ ಥೈಲಿಗಳು ಯಾರವು ಎಂಬುದು ಜನತೆಗೆ ಗೊತ್ತಾಗುವ ಅವಕಾಶವೇ ಇಲ್ಲ. ಹಾಗೆಯೇ ಮಂತ್ರಿಮಂಡಲಗಳು ಸಮ್ಮಿಶ್ರ ಸರ್ಕಾರಗಳು ರಚನೆಯಾಗುವ ಸಂದರ್ಭಗಳು, ಕೂಡ.

ಇನ್ನು ಪ್ರಸ್ತುತ ಸಂದರ್ಭಕ್ಕೆ ಸಂಬಂಧಿಸಿದಂತೆ 2004ರಿಂದಲೂ ಜಾಗತೀಕರಣ, ಖಾಸಗೀಕರಣದ ಮನಮೋಹನ ಸಿಂಗರು ಹಾಗೂ ಕಾಂಗ್ರೆಸ್ ಸುತ್ತಾ ಗಿರಕಿ ಹೊಡೆಯುತ್ತಿದ್ದ ಸೋನಿಯಾ-ಮನಮೋಹನ ಸಿಂಗರ ಜೋಡಿ ದರ್ಬಾರಿನಲ್ಲಿ ನೈಸರ್ಗಿಕ ಸಂಪತ್ತಿನ ಸೂರೆಯ ಹಾಗೂ ಬಜೆಟ್‌ನ ಮೂಲಕ ಹತ್ತಾರು ಲಕ್ಷ ಕೋಟಿಗಳ ಪಂಚಭಕ್ಷ್ಯ ಪರಮಾನ್ನವನ್ನು ದಿನದಿನವೂ ಪಡೆಯುತ್ತಿದ್ದ ಈ ಕಾರ್ಪೋರೇಟ್ ಕುಳಗಳು ಇದ್ದಕ್ಕಿದ್ದಂತೆ ಮೋದಿಯ ಸುತ್ತಾ ಸುತ್ತಲಾರಂಬಿಸುದುದೇಕೆ? ಈ ಪ್ರಶ್ನೆಗೆ ಸರಿಯಾದ ಉತ್ತರ ಕಂಡುಕೊಳ್ಳಲಾರದೇ ಕೇವಲ ಮೋದಿಯ ನರಮೇಧ ಇತ್ಯಾದಿ ಪ್ರಜಾಪ್ರಭುತ್ವ ವಿರೋಧೀ ಕ್ರೌರ್ಯ, ದುಷ್ಟತನಗಳ ಚರಿತ್ರೆ ಮಾತ್ರ ನಮ್ಮ ವಿಚಾರ ಶಕ್ತಿಯನ್ನು ಮಸಕುಗೊಳಿಸಬಾರದು. ಒಕ್ಕಣ್ಣಿನ ತೀರ್ಮಾನಕ್ಕೆ ಧುಮುಕಬಾರದು ಎಂದು ನನ್ನ ಕಳಕಳಿಯ ಅಭಿಪ್ರಾಯ.

ಮೋದಿಯನ್ನು ಕಣಕ್ಕಿಳಿಸಿದ ಶಕ್ತಿಗಳು-ಕಾರ್ಪೋರೇಟ್ ಕುಳಗಳ ಲೆಕ್ಕಾಚಾರ ಇದೇ ಆಗಿದೆ.. ಮೋದಿಯೆಂದ ಕೂಡಲೇ ಆತನ ಇಲ್ಲಿಯವರೆಗಿನ ಇತಿಹಾಸ ಜನರ ಕಣ್ಣ ಮುಂದೆ ಕುಣಿಯಲಾರಂಭಿಸುತ್ತದೆ. ಅದರ ನೆರಳಿನಲ್ಲಿ ವಿಚಾರ ಶಕ್ತಿ ಮಂಕಾಗುತ್ತದೆ ಎಂದೇ ಅವರ ಲೆಕ್ಕಾಚಾರ.

ಒಂದು ಉಹಾ ಮುಂಗಾಣ್ಕೆಯನ್ನು(let us imagine ಎನ್ನುವಂತೆ) ಮಾಡೋಣ. ಮೋದಿಯನ್ನು ಕಣಕ್ಕಿಳಿಸದೇ ಇದ್ದರೆ ಚುನಾವಣೆ ಹೇಗಿರುತ್ತಿತ್ತು? ಯಾವ ವಿಷಯಗಳು ಪ್ರಾಧಾನ್ಯತೆ ಪಡೆಯುತ್ತಿದ್ದವು, ಫಲಿತಾಂಶದ ಮೇಲೆ ಎನು ಪರಿಣಾಮವಾಗುವ ಸಾದ-ತೆ ಇತ್ತು? ಇತ್ಯಾದಿ. ಇದನ್ನು ವಿವರವಾಗಿ ರಾಜ್ಯವಾರು ಪರಿಸ್ಥಿತಿಯ ಲೆಕ್ಕಾಚಾರ ಮಾಡುತ್ತಾ ದೇಶದ ಒಟ್ಟು ಚಿತ್ರವನ್ನು ಪಡೆದುಕೊಳ್ಳವುದು ಸೂಕ್ತವಾದರೂ ಜಾಗದ ಅಭಾವದ ದೃಷ್ಟಿಯಿಂದ ಒಂದು ಸ್ಥೂಲ ಚಿತ್ರಣವನ್ನು ಮಾಡಿಕೊಳ್ಳೋಣ.

ಸಾಮಾನ್ಯವಾಗಿ ಒಂದು ಚುನಾವಣೆಯಲ್ಲಿ ಹಿಂದಿನ ಐದು ವರ್ಷಗಳ ಕಾಲ ಆಡಳಿತದಲ್ಲಿರುವ ಸರ್ಕಾರದ ನೀತಿಗಳು, ಕೆಲಸಗಳು, ಆಡಳಿತದ ಪರಿಗಣನೆಗೆ ಬರಬೇಕು. ಅದರ ಆಧಾರದ ಮೇಲೆ ಬರುವ ಫಲಿತಾಂಶ ಮುಂದಿನ ಐದು ವರ್ಷಗಳ ಕಾಲದ ಆಡಳಿತದ ಸ್ವರೂಪವನ್ನು ನಿರ್ಧರಿಸಬೇಕು. ಕರ್ನಾಟಕದ ವಿಧಾನ ಸಭಾ ಚುನಾವಣೆಯಲ್ಲಿ ಸ್ವಲ್ಪವಾದರೂ ಈ ಪ್ರಕ್ರಿಯೆಗೆ ಚಾಲನೆ ದೊರೆಯಿತು. ಮೋದಿ ಕಣಕ್ಕಿಳಿಯದೇ ಹೋಗಿದ್ದರೆ ಆಗ ಹತ್ತಾರು ಲಕ್ಷ ಕೋಟಿಗಳ ಭ್ರಷ್ಟಾಚಾರದ ಹಗರಣಗಳು, ಬೆಲೆ ಏರಿಕೆ, ರೂಪಾಯಿ ಬೆಲೆ ಕುಸಿತ, ರೈತರ ಆತ್ಮಹತ್ಯೆಗಳು, ಪ್ರಕೃತಿ ವಿಕೋಪಗಳು, ಅದನ್ನು ನಿರ್ವಹಿಸಿದ ರೀತಿ, ನಿರುದ್ಯೋಗ, ಶಿಕ್ಷಣದ ವೆಚ್ಚ ಏರಿಕೆ ಮುಸ್ಲಿಮ್ ಅಲ್ಪ ಸಂಖ್ಯಾತರ ಬಗ್ಗೆ ಸಾಚಾರ್ ವರದಿಯ ಮೇಲೆ ಯಾವ ಕ್ರಮವೂ ತೆಗೆದುಕೊಳ್ಳದೇ ಹೋಗಿದ್ದು ಇತ್ಯಾದಿ ಅವಾಂತರಗಳು ಚರ್ಚೆಗೆ ಬರುತ್ತಿದ್ದವು. ಈ ಪ್ರತಿಯೊಂದರಲ್ಲಿಯೂ ಕಾರ್ಪೋರೇಟ್ ವಲಯದ ಕೈವಾಡ ಹಾಗೂ ಅವರ ಅಪರಿಮಿತ ದುರ್ಲಾಭ ಅಡಗಿದೆ. ಅದು ಪರೋಕ್ಷವಾಗಿಯಾದರೂ ಚರ್ಚೆಗೆ ಬರುತ್ತಿತ್ತು. ಚುನಾವಣೆಯ ಚರ್ಚೆಯ ಕಾವು ಈ ದಿಶೆಗೆ ಏರುತ್ತಿತ್ತು. ನಂತರದ ಸರ್ಕಾರ

ಪುಟ 15 ಕ್ಕೆ

# ಮಾತೃ ಹೃದಯದಿಂದ ದೌರ್ಜನ್ಯ ವಿರೋಧಿಸಿ: ಡಾ|ಎಚ್.ಎಸ್.ಅನುಪಮಾ

ದೌರ್ಜನ್ಯದ ಪ್ರಕರಣಗಳು ದಿನೇ ದಿನೇ ಹೆಚ್ಚುತ್ತಿದ್ದು ದೆಹಲಿಯ ನಿರ್ಭಯ ಪ್ರಕರಣದಲ್ಲಿ ಮಾತ್ರ ಬೇಗನೇ ಆರೋಪಿಗಳಿಗೆ ಶಿಕ್ಷೆಯಾಯಿತು. ದೇಶದಲ್ಲಿ ವರದಿಯಾಗಿರುವ ಪ್ರಕರಣಗಳಿನ್ನೂ ನ್ಯಾಯಾಲಯದಲ್ಲಿವೆ. ಆದರೆ ವರದಿಯಾಗದ ಪ್ರಕರಣಗಳೆಷ್ಟೋ ಮುಚ್ಚಿ ಹೋಗುತ್ತಿವೆ. ವರದಿಯಾಗದ ಪ್ರಕರಣಗಳ ಬಗ್ಗೆಯಾದರೂ ಜನರು ಸಂಘಟಿತರಾಗಿ ಹೋರಾಟ ಮಾಡಿದಾಗ ಮಾತ್ರ ಪರಿಣಾಮ ಬೇಗನೇ ಗೋಚರಿಸುತ್ತದೆ. ಆದ್ದರಿಂದ ಸಂಘಟನೆಗಳು ಮಾತೃ ಹೃದಯದಿಂದ ಮಹಿಳಾ ದೌರ್ಜನ್ಯದ ವಿರುದ್ಧ ಕಾರ್ಯೋನ್ಮುಖರಾಗಬೇಕು ಎಂಬುದಾಗಿ ಲೇಖಕಿ ಡಾ|ಎಚ್.ಎಸ್. ಅನುಪಮಾ ಹೇಳಿದರು. ಅವರು ಮಂಗಳೂರಿನಲ್ಲಿ ಸಪ್ಟೆಂಬರ್ 15 ರಂದು ಡಿವೈಎಫ್ಐ ವತಿಯಿಂದ ನಡೆದ ನಗರ ಮಟ್ಟದ ಯುವತಿಯರ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.


ಮಾಹಿತಿ ಕ್ರಾಂತಿಯಿಂದ ಮಹಿಳೆಯರಿಗೆ ಸಮಸ್ಯೆಗಳೇ ಹೆಚ್ಚಾಗಿವೆ ವಿನಃ ಆಕೆ-ಯ ಜೀವನ ಸುಧಾರಣೆಗೆ ನೆರವಾಗಿಲ್ಲ. ಅತ್ಯಾಚಾರದ ಸಂದರ್ಭದಲ್ಲಿ ಮೊಬೈಲ್ ದುರುದ್ದೇಶಕ್ಕೆ ಬಳಕೆಯಾಗುತ್ತಿದೆ. ಔಷಧೀಯ ಕ್ಷೇತ್ರದಲ್ಲಿಯೂ ತಂತ್ರಜ್ಞಾನ ಮಹಿಳೆಯ ವಿರುದ್ಧವಾಗಿಯೇ ಬಳಕೆಯಾಗುತ್ತಿದೆ. ವ್ಯಕ್ತಿಯ ಮಾನಸಿಕ ಚಿಂತನೆಯಲ್ಲಿ ವೈಜ್ಞಾನಿಕತೆ ಮೂಡದೇ ಇದ್ದಾಗ ತಂತ್ರಜ್ಞಾನ ಕ್ಷೇತ್ರದಲ್ಲಿ ಎಷ್ಟೇ ಮುಂದುವರಿದರೂ ಅದರಿಂದ ಸು ಧಾರಣೆ ಸಾಧ್ಯವಿಲ್ಲ.

"ಎಲ್ಲ ಕ್ಷೇತ್ರಗಳಲ್ಲೂ ಮಹಿಳೆಯರೇ ಮುಂದಿದ್ದಾರೆ ಎಂಬ ಮಾತು ಕೇಳಿ ಬರುತ್ತಿದೆ. ಆದರೆ ರಾಜಕೀಯ ಪ್ರಾತಿನಿಧ್ಯದ ವಿಷಯಕ್ಕೆ ಬಂದಾಗ ಇಬ್ಬರೋ ಮೂವರೋ ಮಹಿಳೆಯರು ಮಾತ್ರ ರಾಜಕೀಯದದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ" ಎಂದೂ ಡಾ|ಎಚ್.ಎಸ್.ಅನುಪಮಾ ಆತಂಕ ವ್ಯಕ್ತಪಡಿಸಿದರು.

ಡಿವೈಎಫ್ಐ ದ.ಕ.ಜಿಲ್ಲಾ ಸಮಿತಿ ಅಧ್ಯಕ್ಷ ಮುನೀರ್ ಕಾಟಿಪಳ್ಳ, ಡಿವೈಎಫ್ಐ ಯುವತಿಯರ ಉಪಸಮಿತಿ ಸಂಚಾಲಕಿ ಪ್ರಮೀಳಾ ಕೆ., ಸಹ ಸಂಚಾಲಕಿ ಮಲ್ಲಿಕಾ, ಸೌಮ್ಯ ಪಂಜಿಮೊಗರು, ಡಿವೈಎಫ್ಐ ಮಂಗಳೂರು ನಗರ ಅಧ್ಯಕ್ಷ ಬಿ.ಕೆ.ಇಮ್ತಿಯಾಜ್, ಕಾರ್ಯದರ್ಶಿ ಸಂತೋಷ್ ಬಜಾಲ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

**ಸೌಜನ್ಯ ಕೊಲೆ ಪ್ರಕರಣ ಸಿಬಿಐಗೆ ಒಪಿಸಲು ಡಿವೈಎಫ್ಐ ಧರಣಿ :**

ಉಜಿರೆ ಕಾಲೇಜಿನ ವಿದ್ಯಾರ್ಥಿನಿ ಸೌಜನ್ಯ 2012ರ ಅಕ್ಟೋಬರ್ 9 ರಂದು ಸಂಜೆ ಕಾಲೇಜಿನಿಂದ ಮನೆಗೆ ಬರುವ ದಾರಿಯಲ್ಲಿ ದುಷ್ಕರ್ಮಿಗಳು ಅತ್ಯಾಚಾರ ನಡೆಸಿ ಕೊಲೆಗೈದ ಪ್ರಕರಣ ನಡೆದು ವರ್ಷವೇ ಸಮೀಪಿಸುತ್ತಿದೆ. ಸ್ಥಳೀಯ ಪ್ರಭಾವೀ ವ್ಯಕ್ತಿಗಳ ಪ್ರದೇಶದಲ್ಲೇ ಈ ಕೊಲೆ ನಡೆದಿದ್ದು, ಸದ್ರಿ ಪ್ರಕರಣದ ಬಗ್ಗೆ ಜನತೆ ಪೋಲೀಸರ ನಿಷ್ಕ್ರಿಯತೆ ಬಗ್ಗೆ ವಿರೋಧವಾಗಿ ತೀವ್ರ ಆಕ್ರೋಶ ವ್ಯಕ್ತಪಡಿಸಿದಾಗ ಯಾರೋ ಮಾನಸಿಕ ಅಸ್ವಸ್ಥನನ್ನು ಆರೋಪಿಯೆಂದು ಜೈಲಿಗಟ್ಟಲಾಯಿತು. ಈ ಪ್ರಕರಣದಲ್ಲಿ ಒಬ್ಬನೇ ಭಾಗಿಯಾಗಿರುವ ಸಾಧ್ಯತೆಯನ್ನು ಜನತೆ ಅಲ್ಲಗಳೆದಿದ್ದು, ಸರಿಯಾದ ತನಿಖೆಯಾಗಬೇಕೆಂದು ಜನತೆ ಒತ್ತಾಯಿಸುತ್ತಿದ್ದರೂ ರಾಜ್ಯ ಪೋಲೀಸು ಇಲಾಖೆಯಿಂದ ಯಾವುದೇ ಕ್ರಮ ಜರಗಿರುವುದಿಲ್ಲ. ಸದ್ರಿ ತನಿಖೆಯನ್ನು ಸಿಬಿಐಗೆ ಒಪ್ಪಿಸಬೇಕೆಂದು ಆಗ್ರಹಿಸಿ ಡಿವೈಎಫ್ಐ ಬೆಳ್ತಂಗಡಿ ತಾಲೂಕು ಸಮಿತಿ ಹಾಗೂ ಜನವಾದಿ ಮಹಿಳಾ ಸಂಘಟನೆ ವತಿಯಿಂದ ಸಪ್ಟೆಂಬರ್ 16 ರಂದು ತಾಲೂಕು ಕಚೇರಿ ಎದುರು ಪ್ರತಿಭಟನಾ ಧರಣಿ ಸತ್ಯಾಗ್ರಹ ನಡೆಸಲಾಯಿತು.



ವಾ . ಉ.

ಡಿವೈಎಫ್ಐ ರಾಜ್ಯ ಸಮಿತಿ ಅಧ್ಯಕ್ಷ ಎನ್.ಎಲ್.ಭರತ್ ರಾಜ್ ಮಾತನಾಡಿ, ಸೌಜನ್ಯ ಕೊಲೆ ಪ್ರಕರಣದ ತನಿಖೆಯನ್ನು ಸಿಬಿಐಗೆ ಒಪ್ಪಿಸದಿದ್ದಲ್ಲಿ ಅಕ್ಟೋಬರ್ 9 ರಂದು ಮಂಗಳೂರಿನಲ್ಲಿ ಉಗ್ರ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಜನವಾದಿ ಮಹಿಳಾ ಸಂಘಟನೆಯ ದ.ಕ.ಜಿಲ್ಲಾಧ್ಯಕ್ಷ ಸುಕನ್ಯಾ, ಕಿರಣಪ್ರಭಾ, ನ್ಯಾಯವಾದಿಗಳಾದ ಎಸ್.ಎಂ.ಶಿವ ಕುಮಾರ್, ಬಿ.ಎಂ.ಭಟ್ ಹಾಗೂ ಡಿವೈಎಫ್ಐ ತಾಲೂಕು ಸಂಘಟನೆಯ ಕಾರ್ಯಕರ್ತರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ಬಳಿಕ ತಹಶೀಲ್ದಾರರ ಮೂಲಕ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಲಾಯಿತು. ಕಾಲೇಜು ವಿದ್ಯಾರ್ಥಿಗಳನ್ನೊಳಗೊಂಡ ಪ್ರತಿಭಟನಾಕಾರರು ಬೆಳ್ತಂಗಡಿ ಮೂರು ರಸ್ತೆಯಿಂದ ತಾಲೂಕು ಕಚೇರಿ ವರೆಗೆ ಮೆರವಣಿಗೆಯಲ್ಲಿ ಸಾಗಿ ಬಳಿಕ ಧರಣಿ ಸತ್ಯಾಗ್ರಹ ನಡೆಸಿದರು.




**ಆರೋಗ್ಯ ಕೇಂದ್ರ ಅವ್ಯವಸ್ಥೆ – ಸುರತ್ಕಲ್‌ನಲ್ಲಿ ಡಿವೈಎಫ್ಐ ಪ್ರತಿಭಟನೆ:**

ಮಂಗಳೂರು ಮಹಾ ನಗರದ ಭಾಗವಾಗಿರುವ ಸುರತ್ಕಲ್ ಸಾಕಷ್ಟು ಬೆಳವಣಿಗೆಯಾಗಿರುವ ಪ್ರದೇಶ. ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯಾಧಿಕಾರಿ ಹಾಗೂ ಮಹಿಳಾ ವೈದ್ಯಾಧಿಕಾರಿಗಳ ಹುದ್ದೆ ಇದ್ದರೂ ಖಾಯಂ ನಿಯೋಜಕರಾದ ವೈದ್ಯಾಧಿಕಾರಿಗಳಿಲ್ಲ. ದಾದಿ ಹಾಗೂ ಇತರ ಸಿಬ್ಬಂದಿ ಹುದ್ದೆಗಳೂ ಕೆಲವು ಖಾಲಿ ಇವೆ. ಈ ಕೇಂದ್ರವನ್ನು ಮೇಲ್ದರ್ಜೆಗೇರಿಸುವುದಾಗಿ ಇತ್ತೀಚೆಗೆ ಆರೋಗ್ಯ ಸಚಿವರೂ ಹೇಳಿಕೆ ಕೊಟ್ಟಿದ್ದಾರೆ. ಎಲ್ಲವೂ ಅಗತ್ಯವೇ. ಆದ-ರೆ ವೈದ್ಯಕೀಯ ಸಿಬ್ಬಂದಿ ಇಲ್ಲ. ಈ ಅವ್ಯವಸ್ಥೆಯನ್ನು ವಿರೋಧಿಸಿ ಡಿವೈಎಫ್ಐ ವತಿಯಿಂದ ಸಪ್ಟೆಂಬರ್ 16 ರಂದು ಸುರತ್ಕಲ್ ಪ್ರಾಥಮಿಕ ಆರೋಗ್ಯ ಕೇಂದ್ರದ ಮುಂದೆ ಪ್ರತಿಭಟನಾ ಪ್ರದರ್ಶನವನ್ನು ಏರ್ಪಡಿಸಲಾಯಿತು.

ಪ್ರತಿಭಟನೆಗೆ ಮೊದಲು ಸುರತ್ಕಲ್ ಬಸ್ ನಿಲ್ದಾಣದಿಂದ ಪ್ರಾಥಮಿಕ ಆರೋಗ್ಯ ಕೇಂದ್ರದ ವರೆಗೆ ಮೆರವಣಿಗೆ ನಡೆಸಲಾಯಿತು. ಸುಮಾರು ನೂರೈವತ್ತು ಜನರು ಭಾಗವಹಿಸಿದ್ದರು.

ಪ್ರತಿಭಟನಾಕಾರರನ್ನುದ್ದೇಶಿಸಿ ಡಿವೈಎಫ್ಐ ಜಿಲ್ಲಾ ಸಮಿತಿ ಅಧ್ಯಕ್ಷ ಮುನೀರ್ ಕಾಟಿಪಳ್ಳ ಮಾತನಾಡಿದರು. ಸಂಘಟನೆಯ ದಯಾನಂದ ಶೆಟ್ಟಿ, ಬಿ.ಕೆ.ಇಮ್ತಿಯಾಜ್, ಶ್ರೀನಾಥ್ ಕಾಟಿಪಳ್ಳ ಮತ್ತಿತರರು ಉಪಸ್ಥಿತರಿದ್ದರು.

ಪುತ್ತೂರು ರೈಲ್ವೆ ನಿಲ್ದಾಣದ ದುರಸ್ತಿ, ಬೆಂಗಳೂರು, ಮಂಗಳೂರು ನಡುವೆ ಹೆಚ್ಚುವರಿ ರೈಲು ಸೇವೆ, ರೈಲ್ವೆ ಇಲಾಖೆಯಲ್ಲಿ ಮೂಲ ಸೌಕರ್ಯಗಳ ಒದಗಣೆ ಹಾಗೂ ಬಾಕಿ ಇರುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕೆಂದು ಒತ್ತಾಯಿಸಿ ಸಪ್ಟೆಂಬರ್ 17 ರಂದು ಪುತ್ತೂರು ರೈಲು ನಿಲ್ದಾಣದ ಬಳಿ ಡಿವೈಎಫ್ಐ ಪುತ್ತೂರು ವಲಯ ಸಮಿತಿಯ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನಾಕಾರರನ್ನುದ್ದೇಶಿಸಿ ಡಿವೈಎಫ್ಐ ದ.ಕ.ಜಿಲ್ಲಾ ಸಮಿತಿ ಅಧ್ಯಕ್ಷ ಮುನೀರ್ ಕಾಟಿಪಳ್ಳ ಮಾತನಾಡಿದರು. ಪ್ರತಿಭಟನೆಯಲ್ಲಿ ಡಿವೈಎಫ್ಐ ಕಾರ್ಯಕರ್ತರಲ್ಲದೆ ಸಿಪಿಐ(ಎಂ) ಪುತ್ತೂರು ತಾಲೂಕು ಕಾರ್ಯದರ್ಶಿ ಪಿ.ಕೆ.ಸತೀಶನ್, ಸಿಐಟಿಯು ರಿಕ್ಷಾ ಚಾಲಕ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಬಳಿಕ ಪ್ರತಿಭಟನಾಕಾರರು ರೈಲ್ವೇ ವಿಭಾಗೀಯ ಭದ್ರತಾ ಮ್ಯಾನೇಜರ್ ಅವರಿಗೆ ಮನವಿ ಸಲ್ಲಿಸಿದರು.

**ಕರ್ನಾಟಕ ಪ್ರಾಂತ ರೈತ ಸಂಘ ನೇತೃತ್ವದಲ್ಲಿ ಅಡಿಕೆ ಬೆಳೆಗಾರರ ಧರಣಿ ಸತ್ಯಾಗ್ರಹ:**

ಅತಿವೃಷ್ಟಿಯಿಂದಾಗಿ ಕೊಳೆರೋಗ ಬಂದು ಕರಾವಳಿ ಹಾಗೂ ಮಲೆನಾಡು ಜಿಲ್ಲೆಗಳಿಗೆ ಅಡಿಕೆ ಬೆಳೆ ತೀವ್ರ ನಷ್ಟಕ್ಕೊಳಗಾಗಿದೆ. ಇವರಿಗೆ ಪರಿಹಾರ ಒದಗಿಸಬೇಕೆಂದು ಆಗ್ರಹಿಸಿ ಸಪ್ಟೆಂಬರ್ 17 ರಂದು ಕರ್ನಾಟಕ ಪ್ರಾಂತ ರೈತ ಸಂಘ ದ.ಕ.ಜಿಲ್ಲಾ ಸಮಿತಿ ನೇತೃತ್ವದಲ್ಲಿ ದ.ಕ.ಜಿಲ್ಲಾಧಿಕಾರಿ ಕಚೇರಿ ಎದುರು ಅಡಿಕೆ ಬೆಳೆಗಾರರಿಂದ ಧರಣಿ ಸತ್ಯಾಗ್ರಹ ನಡೆಯಿತು.

ಅಡಿಕೆ ಬೆಳೆಗಾರರ ಬ್ಯಾಂಕ್ ಸೊಸೈಟಿ ಸಾಲಗಳನ್ನು ಮನ್ನಾ ಮಾಡಬೇಕು, ರೋಗದಿಂದ ನಷ್ಟವಾಗಿರುವ ಅಡಿಕೆ ಬೆಳೆಗೆ ನಷ್ಟ ಪರಿಹಾರ ನೀಡಬೇಕು ಎಂದು ಈ ಸಂದರ್ಭದಲ್ಲಿ ಆಗ್ರಹಿಸಲಾಯಿತು. ಕೃಷಿ ಸಲಕರಣೆ, ಕ್ರಿಮಿನಾಶಕ ಹಾಗೂ ಗೊಬ್ಬರಕ್ಕೆ ಸಬ್ಸಿಡಿಯನ್ನು ಮುಂದುವರಿಸಬೇಕು; ಅಡಿಕೆ ಕೃಷಿ ಸಂಬಂಧಿಸಿದಂತೆ ಡಾ|ಗೋರಖ್ ಸಿಂಗ್ ವರದಿಯನ್ನು ಜಾರಿಗೊಳಿಸಬೇಕು; ಕೃಷಿ ವೆಚ್ಚದ ಒಂದೂವರೆ ಪಟ್ಟು ಉತ್ಪನ್ನಗಳಿಗೆ ಬೆಲೆ ನಿಗದಿಗೊಳಿಸಬೇಕೆಂಬ ಡಾ|ಸ್ವಾಮಿನಾಥನ್ ವರದಿಯನ್ನು ಜಾರಿಗೊಳಿಸಬೇಕೆಂದೂ ಈ ಸಂದರ್ಭಧಲ್ಲಿ ಒತ್ತಾಯಿಸಲಾಯಿತು.


ಪ್ರತಿಭಟನೆಯನ್ನು ಉದ್ಘಾಟಿಸಿ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಮಿತಿ ಅಧ್ಯಕ್ಷ ಕೆ.ಆರ್.ಶ್ರೀಯಾನ್ ಮಾತನಾಡಿದರು. ಉಪಾಧ್ಯಕ್ಷ ಕೃಷ್ಣಪ್ಪ ಸಾಲಿಯಾನ್, ಪ್ರಧಾನ ಕಾರ್ಯದರ್ಶಿ ಯಾದವ ಶೆಟ್ಟಿ ಕೂಡಾ ಮಾತನಾಡಿದರು. ಜಿಲ್ಲಾ ಸಮಿತಿ ಸದಸ್ಯರಾದ ವಾಸುದೇವ ಉಚ್ಚಿಲ, ಬಿ.ನಾರಾಯಣ ಮತ್ತಿತರರು ಉಪಸ್ಥಿತರಿದ್ದರು.

ಪ್ರತಿಭಟನೆ ನಡೆಯುವಾಗ ಭಾರೀ ಮಳೆ ಸುರಿದು ಶಾಮಿಯಾನಾ ಕುಸಿದು ಬಿದ್ದರೂ ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು.

## ಪಿ.ಮುಕುಂದನ್ ನವರ ನಿಧನ – ಸಿಪಿಐ(ಎಂ) ಸಂತಾಪ

ಸಿಪಿಐ(ಎಂ) ಪಕ್ಷದ ಸದಸ್ಯರು, ಸಿಐಟಿಯು ಮುಖಂಡರು ಹಾಗೂ ಬಿ.ಎಸ್.ಎನ್.ಎಲ್ ನೌಕರರ ಸಂಘಟನಾ ಮಂಗಳೂರು ವಿಭಾಗದ ಸಂಘಟನಾ ಕಾರ್ಯದರ್ಶಿಗಳೂ ಆಗಿದ್ದ ಕಾಂ. ಪಿ.ಮುಕುಂದನ್ ನವರು ಕಳೆದ ನಾಲ್ಕೈದು ತಿಂಗಳ ಅನಾರೋಗ್ಯದಿಂದಾಗಿ ಸೆಪ್ಟೆಂಬರ್ 18–2013ರಂದು ಬುಧವಾರ ನಿಧನರಾದರು. ಸೆಪ್ಟೆಂಬರ್ 19–2013ರಂದು ಬೆಳಿಗ್ಗೆ ಅಂತ್ಯಕಿಯೆ ನಡೆಯಿತು.

ಈ ಸಂದರ್ಭದಲ್ಲಿ ನಡೆದ ಶ್ರದ್ಧಾಂಜಲಿ ಸಭೆಯನ್ನುದ್ದೇಶಿಸಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕೆ.ಶಂಕರ್, ಬಿ.ಎಸ್.ಎನ್.ಎಲ್ ನೌಕರರ ಸಂಘದ ರಾಜ್ಯ ಮುಖಂಡರಾದ ಗುಂಡಣ್ಣ, ಚಂದ್ರಶೇಖರ ಶೆಟ್ಟಿ, ಬಿ.ಪಿ. ನಾರಾಯಣ ಹಾಗೂ ಬಿಕಯ್ಯನವರು ಮಾತನಾಡಿದರು. ಪಿ.ಮುಕುಂದನ್ ನವರ



ಸರಳತೆ, ನಾಯಕತ್ವ ಗುಣ, ಶಿಸ್ತು ಹಾಗೂ ಸಂಘಟನಾ ಚತುರತೆಯನ್ನು ಸ್ಮರಿಸಿದ ಮುಖಂಡರು ಯಾವ ಉದ್ದೇಶಗಳಿಗಾಗಿ ಮುಕುಂದನ್ ಜೀವನವಿಡೀ ದುಡಿದಿರುತ್ತಾರೋ ಆ ಉದ್ದೇಶಗಳಿಗಾಗಿ ಸಾಮೂಹಿಕ ಪ್ರಯತ್ನ ಮಾಡೋಣವೆಂದು ಶ್ರದ್ಧಾಂಜಲಿ ಸಲ್ಲಿಸಿದರು.

ಜನಶಕ್ತಿ
ಕನ್ನಡ ವಾರಪತ್ರಿಕೆ


# ಕೋಮು ಧ್ರುವೀಕರಣ ಮತ್ತು 'ಐಕ್ಯತೆಯ ಪ್ರತಿಮೆ'ಯ ಹೆಸರಿನಲ್ಲಿ ಫ್ಯಾಸಿಸ್ಟ್ ಮಾದರಿ ಪುಢಾರಿತನ

ಸೀತಾರಾಂ ಯೆಚೂರಿ

**ಮುಝಫ್ಫರ್‌ನಗರದ ಭೀಕರ ಕೋಮುಗಲಭೆಗಳ ಹಿನ್ನೆಲೆಯಲ್ಲಿ ಬಿಜೆಪಿ ಗುಜರಾತಿನ ಮುಖ್ಯಮಂತ್ರಿಯನ್ನು ಮುಂಬರುವ 2014ರ ಸಾರ್ವತ್ರಿಕ ಚುನಾವಣೆಗಳಲ್ಲಿ ತನ್ನ ಪ್ರಧಾನ ಮಂತ್ರಿ ಪಟ್ಟಕ್ಕೆ ಹೆಸರಿಸಿದೆ. ನಮ್ಮ ಆಂತರಿಕ ಆರ್ಥಿಕ ನಿಧಾನಗತಿ ಬದಲಾಗುವ ಯಾವ ಲಕ್ಷಣಗಳೂ ಇಲ್ಲದಿರುವಾಗ, ಜಾಗತಿಕ ಆರ್ಥಿಕ ಮುಗ್ಗರಿಸುತ್ತಲೇ ಇರುವ ಸಂದರ್ಭದಲ್ಲಿ ಭಾರತದ ಕಾರ್ಪೊರೇಟ್ ವಲಯಕ್ಕೆ ತಮ್ಮ ಲಾಭಗಳನ್ನು ಗರಿಷ್ಠ ಮಟ್ಟಕ್ಕೇರಿಸಿಕೊಳ್ಳಲು ಇಂತಹ ಒಬ್ಬ ಫ್ಯಾಸಿಸ್ಟ್ ಮಾದರಿ 'ಪ್ರವಾದಿ'ಯ ಅಗತ್ಯವಿದೆ.** ಅದು ದೊರಕುವ ನಿರೀಕ್ಷೆ ಅವರದ್ದು. ಆದರೆ ಕೋಮು ಧ್ರುವೀಕರಣವನ್ನು ತೀಕ್ಷ್ಣಗೊಳಿಸುವುದು ಮತ್ತು 'ಐಕ್ಯತೆಯ ಪ್ರತಿಮೆ'ಯ ಸುತ್ತ ಫ್ಯಾಸಿಸ್ಟ್ ಮಾದರಿ ಪುಢಾರಿತನ ಮತ್ತು 'ಹಿಂದೂರಾಷ್ಟ್ರ'ದ ಆರೆಸ್ಸೆಸ್ ಯೋಜನೆ ನಮ್ಮ ಗಣತಂತ್ರ ಸಂವಿಧಾನದಲ್ಲಿ ಪ್ರತಿಷ್ಠಾಪಿಸಿರುವ ಆದರ್ಶಗಳ ಸಾವಿನ ಸಂಕೇತವಾಗುತ್ತದೆ.

ಮುಝಫ್ಫರ್‌ನಗರದ ಭೀಕರ ಕೋಮುಗಲಭೆಗಳು ಉತ್ತರಪ್ರದೇಶ ರಾಜ್ಯದ ಪಶ್ಚಿಮ ಭಾಗಗಳಲ್ಲೆಲ್ಲ ಹರಡಿ ಹತ್ತಾರು ಅಮಾಯಕ ಜೀವಗಳನ್ನು ಬಲಿತೆಗೆದು-ಕೊಂಡು, ಅಪಾರ ಹಾನಿಗಳುಂಟು ಮಾಡಿ ಸಾವಿರಾರು ಮಂದಿಯನ್ನು ನಿರಾಶ್ರಿತ ಶಿಬಿರಗಳಿಗೆ ತಳ್ಳಿರುವುದು, ಬಿಜೆಪಿ ಗುಜರಾತಿನ ಮುಖ್ಯಮಂತ್ರಿಯನ್ನು ಮುಂಬರುವ 2014ರ ಸಾರ್ವತ್ರಿಕ ಚುನಾವಣೆಗಳಲ್ಲಿ ತನ್ನ ಪ್ರಧಾನ ಮಂತ್ರಿ ಪಟ್ಟಕ್ಕೆ ಹೆಸರಿಸಿರುವುದಕ್ಕೆ ನಿಜಕ್ಕೂ ಒಂದು ಪರಿಪೂರ್ಣ ಹಿನ್ನೆಲೆಯನ್ನು ಒದಗಿಸಿದೆ. ಆರೆಸ್ಸೆಸ್/ಬಿಜೆಪಿ ಕೋಮುವಾದಿ ಧ್ರುವೀಕರಣವನ್ನು ತೀಕ್ಷ್ಣಗೊಳಿಸುವುದನ್ನು ತನ್ನ ಪ್ರಧಾನ ಚುನಾವಣಾ ತಂತ್ರವಾಗಿ ಬಳಸುವ ಆಶಯವನ್ನು ನಿಜವಾಗಿಯೂ ಹೊಂದಿದೆಯೇ ಎಂದು ಈಗಲೂ ಯಾರಿಗಾದರೂ ತುಸು ಸಂದೇಹವೇನಾದರೂ ಉಳಿದಿದ್ದರೆ, ವಿಹೆಚ್‌ಪಿ ಮುಖಂಡ ಅಶೋಕ ಸಿಂಘಾಲ್ ಅದನ್ನೂ ದೂರ ಮಾಡಿದ್ದಾರೆ. ಅಲ್ಪಸಂಖ್ಯಾತರಿಗೆ ಗುಜರಾತಿನಲ್ಲಿ 2002ರಲ್ಲಿ ಪಾಟ ಕಲಿಸಿದಂತೆ, ಈಗ ಮತ್ತೊಮ್ಮೆ ಪಶ್ಚಿಮ ಯುಪಿಯಲ್ಲಿ 'ಲವ್‌ಜಿಹಾದ್'ನಲ್ಲಿ ತೊಡಗಿದ್ದಕ್ಕೆ ಸರಿಯಾದ ಪಾಠ ಕಲಿಸಲಾಗಿದೆ ಎಂದು ಆತ ಹೇಳಿರುವುದಾಗಿ ವರದಿಯಾಗಿದೆ. ಈ ಕೋಮುಗಲಭೆಗಳಿಗೆ ನೆಲೆ ಕಲ್ಪಿಸಿದ ಮುಝಫ್ಫರ್‌ನಗರದಲ್ಲಿ ನಡೆದ ಜಾಟ್ ಪಂಚಾಯತ್ 'ನಮ್ಮ ಹೆಣ್ಣುಮಕ್ಕಳನ್ನು, ಸೊಸೆಯರನ್ನು' ರಕ್ಷಿಸುವ ಕರೆ ನೀಡಿತ್ತು.

ಆರೆಸ್ಸೆಸ್/ಬಿಜೆಪಿಗೆ ಇನ್ನು ಮುಂದೆ ಅಟಲ್ ಬಿಹಾರಿ ವಾಜಪೇಯಿಯವರಂತಹ ಮುಖವಾಡಗಳು ಬೇಕಿಲ್ಲ ಎಂದು ಪ್ರಕಟಿಸುವ ಈ ಘೋಷಣೆ ಈಗಾಗಲೇ ಎನ್‌ಡಿಎನಲ್ಲಿನ ಕೆಲವು ಪ್ರಮುಖ ಬಿಜೆಪಿ ಮಿತ್ರರು, ಬಿಹಾರದ ಮುಖ್ಯಂತ್ರಿಗಳು ಮತ್ತು ಅವರ ಜೆಡಿ(ಯು) ಹೊರಹೋಗುವಂತೆ ಮಾಡಿದೆ. ಹೀಗೆ ಬಿಜೆಪಿ ನೇತೃತ್ವದ ಯಾವುದೇ ಮೈತ್ರಿಕೂಟವನ್ನು ಪೀಡಿಸುವ ಪರಿಹರಿಸಲಾಗದ ವೈರುಧ್ಯ ಮತ್ತೊಮ್ಮೆ ಮುಂಚೂಣಿಗೆ ಬಂದಿದೆ: ಆ ಮೈತ್ರಿಕೂಟ ಬಹುಮತವನ್ನು ತೋರಿಸುವಷ್ಟು ಬಲಿಷ್ಟವಾಗಬೇಕಾದರೆ ಬಿಜೆಪಿ ತನ್ನ ಕೋಮುವಾದಿ ಅಜೆಂಡಾವನ್ನು ಹಿನ್ನೆಲೆಗೆ ತಳ್ಳಬೇಕಾಗುತ್ತದೆ. ಇನ್ನೊಂದೆಡೆಯಲ್ಲಿ, ಆರೆಸ್ಸೆಸ್ ನಿರ್ದೇಶನದಂತೆ ಕೋಮುವಾದಿ ಅಜೆಂಡಾವನ್ನು ಆಕ್ರಮಣಕಾರಿಯಾಗಿ ಅನುಸರಿಸದಿದ್ದರೆ ಬಿಜೆಪಿಗೆ ತನ್ನ ಸ್ವಂತರಾಜಕೀಯ ನೆಲೆಯನ್ನು ಕ್ರೋಡೀಕರಿಸುವುದಾಗಲೀ, ವಿಸ್ತರಿಸುವುದಾಗಲೀ ಸಾಧ್ಯವಾಗದು– ಇದೇ ಆ ವೈರುಧ್ಯ.




(ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಉನ್ನಿಯವರ ವ್ಯಂಗ್ಯ)

ಒಂದು ಉನ್ಮತ್ತ ಫ್ಯಾಸಿಸ್ಟ್ ಮಾದರಿಯ 'ಹಿಂದೂರಾಷ್ಟ್ರ'ವನ್ನು ಸ್ಥಾಪಿಸುವ ಆರೆಸ್ಸೆಸ್ ಯೋಜನೆ ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಸೋಲುಂಡಿತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕಾಗಿದೆ. ಸ್ವತಂತ್ರ ಭಾರತ ಸ್ಥಾಪನೆಗೊಂಡದ್ದು ಒಂದು ಆಧುನಿಕ ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ. ಆದರೂ ಈ ಆಧುನಿಕ ಭಾರತೀಯ ಗಣತಂತ್ರವನ್ನು ತನ್ನ ಕಣ್ಣೋಟದ 'ಹಿಂದೂರಾಷ್ಟ್ರ'ವಾಗಿ ರೂಪಾಂತರಗೊಳಿಸುವ ಆರೆಸ್ಸೆಸ್ ಪ್ರಯತ್ನ ಎಂದೂ ನಿಲ್ಲಲಿಲ್ಲ. ಅದರ ಗುರಿಯನ್ನು ನಿರೂಪಿಸಿದ್ದು ಆರೆಸ್ಸೆಸ್‌ನ ಪರಮ 'ಗುರು' ಗೋಲ್ವಾಲ್ಕರ್. "ವಿದೇಶಿ ಜನಾಂಗಗಳು (ಹಿಂದೂವೇತರರು ಎಂದು ಓದಿಕೊಳ್ಳಿ) ಒಂದೋ ಹಿಂದೂ ಸಂಸ್ಕೃತಿ ಮತ್ತು ಭಾಷೆಯನ್ನು ಅಂಗೀಕರಿಸಬೇಕು, ಹಿಂದೂ ಧರ್ಮವನ್ನು ಗೌರವಿಸಲು, ಪೂಜ್ಯಭಾವದಿಂದ ನೋಡಲು ಕಲಿಯಬೇಕು, ಹಿಂದೂ ಜನಾಂಗವನ್ನು, ಅಂದರೆ ಹಿಂದೂರಾಷ್ಟ್ರವನ್ನು ವೈಭವೀಕರಿಸುವುದನ್ನು ಬಿಟ್ಟು ಬೇರೆ ಯಾವುದೇ ವಿಚಾರವನ್ನು ಹೊಂದಿರಬಾರದು ಮತ್ತು ತಮ್ಮ ಪ್ರತ್ಯೇಕ ಅಸ್ತಿತ್ವವನ್ನು ಕಳಕೊಳ್ಳಬೇಕು, ಇಲ್ಲವೇ ಈ ದೇಶದಲ್ಲಿ ಹಿಂದೂರಾಷ್ಟ್ರಕ್ಕೆ ಅಡಿಯಾಳಾಗಿ, ಯಾವುದನ್ನೂ ಕೇಳದೆ, ಯಾವ ಸೌಕರ್ಯಗಳಿಗೂ ಅರ್ಹರಾಗದೆ, ಪುರಸ್ಕಾರದ ವರ್ತನೆಯನ್ನಂತೂ ನಿರೀಕ್ಷಿಸದೆ, ನಾಗರಿಕ ಹಕ್ಕುಗಳನ್ನೂ ನಿರೀಕ್ಷಿಸದೆ ಉಳಿಯಬಹುದು"– ಇದು ಅವರು ನಿರೂಪಿಸಿದ್ದ ಗುರಿ.

**ವಿಕಾಸವಲ್ಲ, ವಿನಾಶ ಕಾದಿದೆ**

ಪಟ್ಟಾಭಿಷೇಕದ ನಂತರ ನಡೆದ ಒಂದು ಸಾರ್ವಜನಿಕ ರ್‍ಯಾಲಿಯಲ್ಲಿ ಬಿಜೆಪಿಯ ಭವಿಷ್ಯದ ಪ್ರಧಾನ ಮಂತ್ರಿ 'ರೋಮಾಂಚಕ' ಗುಜರಾತ್ ಮಾದರಿಯಲ್ಲಿ 'ರೋಮಾಂಚಕ' ಭಾರತವನ್ನು ನಿರ್ಮಿಸುವುದು ತಮ್ಮ ಬಯಕೆ ಎಂದು ಸಾರಿದರು. ಇಂತಹ ಭ್ರಾಮಕ 'ರೋಮಾಂಚನ'ವನ್ನು ಭಾರತದಾದ್ಯಂತ 2002ರ ಕೋಮುವಾದಿ ಹತ್ಯಾಕಾಂಡದ ಮರುಸೃಷ್ಟಿಯ ಆಧಾರದಲ್ಲಿ ಮಾಡುವ ಪ್ರಯತ್ನ ನಡೆಯುತ್ತದೆ. ಆತ ತನ್ನ ರಾಜ್ಯಕ್ಕೆ ತೀರಿಸಿದ 'ಋಣ' ಅದು, ಈಗ ಅದನ್ನೇ ಭಾರತಕ್ಕೆ 'ತೀರಿಸು'ತ್ತಾರಂತೆ.

ಆದರೆ ಗುಜರಾತ್‌ನ ಮಾನವ ಅಭಿವೃದ್ಧಿ ಸೂಚ್ಯಂಕಗಳು, ಅದರಲ್ಲೂ ಹೆಣ್ಣು ಮಗುವಿಗೆ ಸಂಬಂಧಿಸಿದ ಸೂಚ್ಯಂಕಗಳು ರಾಷ್ಟ್ರೀಯ ಸರಾಸರಿಗಿಂತ ಬಹಳ ಕೆಳಗಿವೆ ಎಂಬ ಸಂಗತಿಯನ್ನು ಇಂತಹ ಅಪಮಾಹಿತಿಗಳು, ಪುಢಾರಿ ಅಪಪ್ರಚಾರಗಳು ಮರೆ ಮಾಚಲಾರವು. ಇಂತಹ ಗುಜರಾತ್ ಮಾದರಿಯನ್ನು ಸಮಸ್ತ ಭಾರತಕ್ಕೆ ವಿಸ್ತರಿಸುವುದನ್ನು ದೇಶ ಈಗ ಅನುಮೋದಿಸಬೇಕಂತೆ. ಹಾಗೆ ಅನುಮೋದಿಸಿದರೆ ವಿಕಾಸವಲ್ಲ, ವಿನಾಶ ಕಾದಿದೆ.

ತಮ್ಮ ಲಾಭಗಳನ್ನು ಗರಿಷ್ಟ ಮಟ್ಟಕ್ಕೇರಿಸಿಕೊಳ್ಳಬೇಕು ಎಂಬ ಕಾರ್ಪೊರೇಟ್ ಜಗತ್ತಿನ ಕೂಗು ತೀವ್ರ ಆರ್ಥಿಕ ಬಿಕ್ಕಟ್ಟಿನ ಕಾಲದಲ್ಲಿ ತಾರಕಕ್ಕೆ ಏರುತ್ತದೆ. ಅವರಿಗೆ ತಮ್ಮ ಹಿತಗಳಿಗೆ ಅನುಕೂಲ ಮಾಡಿಕೊಡುವ ಕ್ರಮಗಳನ್ನು ಕೈಗೊಳ್ಳಬಲ್ಲ 'ನಿರ್ಣಾಯಕ'ನಾದ ಒಬ್ಬ 'ಬಲಿಷ್ಟ' ಮುಖಂಡ ಬೇಕಾಗುತ್ತಾನೆ. ದೊಡ್ಡ ಬಂಡವಾಳಿಗರಲ್ಲಿನ ಒಂದು ಸಂಗತಿಯೆಂದರೆ, "ಅವರು, ವಾಸ್ತವದಲ್ಲಿ ತಮ್ಮಿಂದ ಏನನ್ನೂ ಕಸಿದುಕೊಳ್ಳದ ಯಾವುದೇ ಆಳ್ವಿಕೆಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಬಲ್ಲರು..... ಅವರಿಗೆ ಫ್ಯಾಸಿಸಂ ಬೇರೆಲ್ಲ ಆಳ್ವಿಕೆಗಳಿಗಿಂತ ಹೆಚ್ಚಿನ ಕೆಲವು ಪ್ರಮುಖ ಪ್ರಯೋಜನ ಹೊಂದಿದೆ" ಎನ್ನುತ್ತಾರೆ ಪ್ರಸಿದ್ಧ ಇತಿಹಾಸಕಾರ ಎರಿಕ್ ಹೋಬ್ಸ್‌ಬಾವ್ಮ್, ತಮ್ಮ 'ಏಜ್ ಆಫ್ ಎಕ್ಸ್ಟ್ರೀಮ್ಸ್'( ಅತಿಗಳ ಯುಗ)ದಲ್ಲಿ. ಅವರು ವಿವಿಧ ಪ್ರಯೋಜನಗಳ ಪಟ್ಟಿ ಮಾಡುತ್ತಾರೆ– ಕಾರ್ಮಿಕ ಸಂಘಗಳನ್ನು ತೊಡೆದು ಹಾಕುವುದು, ಎಡಪಂಥೀಯರನ್ನು ದುರ್ಬಲಗೊಳಿಸುವುದು ಅಥವ ಸೋಲಿಸುವುದು, ಇದು 1930ರ ದಶಕದ ಮಹಾಕುಸಿತದ ನಂತರದಲ್ಲಿ ಅವರ ಲಾಭಗಳನ್ನು ಗರಿಷ್ಟ ಮಟ್ಟಕ್ಕೇರಿಸಿಕೊಳ್ಳಲು ಅನುಕೂಲಕರವಾದ ಸನ್ನಿವೇಶವನ್ನು ನಿರ್ಮಿಸಿತು.

ನಮ್ಮ ಆಂತರಿಕ ಆರ್ಥಿಕ ನಿಧಾನಗತಿ ಬದಲಾಗುವ ಯಾವ ಲಕ್ಷಣಗಳೂ ಇಲ್ಲದಿರುವಾಗ, ಜಾಗತಿಕ ಆರ್ಥಿಕ ಮುಗ್ಗರಿಸುತ್ತಲೇ ಇರುವ ಸಂದರ್ಭದಲ್ಲಿ ಭಾರತದ ಕಾರ್ಪೊರೇಟ್ ವಲಯಕ್ಕೆ ತಮ್ಮ ಲಾಭಗಳನ್ನು ಗರಿಷ್ಟ ಮಟ್ಟಕ್ಕೇರಿಸಿಕೊಳ್ಳಲು ಇಂತಹ ಒಬ್ಬ ಫ್ಯಾಸಿಸ್ಟ್ ಮಾದರಿ 'ಪ್ರವಾದಿ'ಯ ಅಗತ್ಯವಿದೆ. ಫ್ಯಾಸಿಸಂನ ಉದಯದಲ್ಲಿ ಜಾಗತಿಕ ದೊಡ್ಡ ಬಂಡವಾಳಿಗರು, ವಿಶೇಷವಾಗಿ ಅಮೆರಿಕನ್ ಕಾರ್ಪೊರೇಟ್ ದೈತ್ಯರು ಎಂತಹ ಮಹತ್ವದ ಪಾತ್ರ ವಹಿಸಿದ್ದರು ಎನ್ನುವುದಕ್ಕೆ ಬಹಳಷ್ಟು ಚಾರಿತ್ರಿಕ ಸಾಕ್ಷ್ಯಗಳು ಸಿಗುತ್ತವೆ.

**ಕಣ್ಣುಕುಕ್ಕುವ ಸಾಮ್ಯತೆಗಳಿವೆ**

ನಮ್ಮ ದೇಶದಲ್ಲಿ ಈಗ ಇರುವ ಪರಿಸ್ಥಿತಿ ಜರ್ಮನಿಯಲ್ಲಿ ಫ್ಯಾಸಿಸಂ ಮೂಡಿ ಬರಲು ಕಾರಣವಾದಂತಹ ಪರಿಸ್ಥಿತಿಯಂತಿಲ್ಲ ಎಂಬುದನ್ನು ಗಮನಿಸಬೇಕು. ಆದರೆ ಅತ್ಯಂತ ಪ್ರತಿಗಾಮಿ ವಿಭಾಗಗಳು ಭಾರತದಲ್ಲಿ ಪ್ರಭುತ್ವ ಅಧಿಕಾರದ ಮೇಲಿನ ಹತೋಟಿಯನ್ನು ಪಡೆಯಲು ಹೇಗೆ ಫ್ಯಾಸಿಸ್ಟ್ ಮಾದರಿಯ ವಿಧಾನಗಳನ್ನು ಬಳಸುತ್ತಾರೆ ಎಂಬುದರಲ್ಲಿ ಕಣ್ಣು ಕುಕ್ಕುವಂತಹ ಸಾಮ್ಯತೆಗಳಿವೆ.

ಜಾರ್ಜಿ ದಿಮಿತ್ರೊವ್ ತನ್ನ 'ಯುನೈಟೆಡ್ ಫ್ರಂಟ್'(ಸಂಯುಕ್ತ ರಂಗ) ಕೃತಿಯಲ್ಲಿ ಜರ್ಮನಿಯಲ್ಲಿ ಫ್ಯಾಸಿಸಂನ ಸ್ವರೂಪ ಮತ್ತು ಉದಯದ ವಿಶ್ಲೇಷಣೆ ಕೊಟ್ಟಿದ್ದಾರೆ: "ಫ್ಯಾಸಿಸಂ ಉಗ್ರ ಸಾಮ್ರಾಜ್ಯಶಾಹಿಗಳ ಹಿತಗಳಿಂದ ಕ್ರಿಯೆ ನಡೆಸುತ್ತದೆ, ಆದರೆ ಜನಸಮೂಹಗಳ ಮುಂದೆ ತಾನು ಕೆಟ್ಟದಾಗಿ ನಡೆಸಿಕೊಳ್ಳಲ್ಪಟ್ಟ ರಾಷ್ಟ್ರದ ಉದ್ಧಾರಕನ ವೇಷ ತೊಟ್ಟು ಬರುತ್ತದೆ ಮತ್ತು ರೊಚ್ಚಿಗೆದ್ದ ರಾಷ್ಟ್ರೀಯ ಭಾವನೆಗಳನ್ನು ಪೋಷಿಸುತ್ತದೆ." ಮುಂದುವರೆದು ಅವರು, "ಫ್ಯಾಸಿಸಂ ಜನರನ್ನು ಅತ್ಯಂತ ಭ್ರಷ್ಟ ಮತ್ತು ಲಂಚಕೋರರುಗಳ ಮರ್ಜಿಗೆ ಒಳಪಡಿಸುತ್ತದೆ, ಆದರೆ ಅವರ ಮುಂದೆ ಒಂದು ಪ್ರಾಮಾಣಿಕ, ಭ್ರಷ್ಟತೆಗೆ ಒಳಗಾಗದ ಸರಕಾರ ಬೇಕೆಂಬ ಬೇಡಿಕೆಯೊಂದಿಗೆ ಬರುತ್ತದೆ. ಜನಸಮೂಹದ ಆಳವಾದ ಭ್ರಮನಿರಸನದಿಂದ ಲಾಭ ಗಿಟ್ಟಿಸುವ ಜೂಜುಕೋರ ಬುದ್ಧಿಯಿಂದ ಅದು ಪ್ರತಿಯೊಂದು ಸನ್ನಿವೇಶದ ವಿಲಕ್ಷಣ-ತೆಗೆ ಅನುಗುಣವಾಗಿ ತನ್ನ ಪುಢಾರಿಕೆಯನ್ನು ಹೊಂದಿಸಿಕೊಳ್ಳುತ್ತದೆ" ಎಂದಿದ್ದಾರೆ.

ಇಲ್ಲಿ ದಿಮಿತ್ರೋವ್ ಆರೆಸ್ಸೆಸ್/ಬಿಜೆಪಿಯ ಸದ್ಯದ ಪ್ರಚಾರದ ಬಗ್ಗೆಯೇ ಮಾತಾಡುತ್ತಿರಬಹುದೆಂದು ಅನಿಸದೇ ಇರದು. ಆರೆಸ್ಸೆಸ್/ಬಿಜೆಪಿ ನವ-ಉದಾರವಾದಿ ಆರ್ಥಿಕ ಸುಧಾರಣೆಗಳ ಅಜೆಂಡಾವನ್ನು ಬಹಿರಂಗವಾಗಿಯೇ ಪ್ರತಿಪಾದಿಸುತ್ತ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ಅನುಮೋದನೆ ಪಡೆಯಲು ಚೌಕಾಸಿ ನಡೆಸಿದೆ. ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐಯಂತಹ ಕೆಲವು ಸುಧಾರಣೆಗಳಿಗೆ ಅದು ವಿರೋಧ ವ್ಯಕ್ತಪಡಿಸಿದ್ದರೂ(ಎನ್‌ಡಿಎ ನೇತೃತ್ವ ವಹಿಸಿದ್ದಾಗ ಅದು ಈ ಬಗ್ಗೆಯೂ ಯೋಚಿಸಿತ್ತು) ಅದು ಈಗಾಗಲೇ ಎಫ್‌ಡಿಐನ

ಪುಟ 14 ನ್ನು ನೋಡಿ




# 'ದೌರ್ಜನ್ಯ ಮುಕ್ತ ಬದುಕು ಮಹಿಳೆಯರ ಹಕ್ಕು'

**ಮಹಿಳೆಯರ ಸಮಗ್ರ ಬದುಕಿನ ಅಭಿವೃದ್ಧಿಗಾಗಿ ನಿರಂತರ ಹೋರಾಟ ನಡೆಸುತ್ತಲೇ ಬರುತ್ತಿರುವ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ 8ನೇ ಕರ್ನಾಟಕ ರಾಜ್ಯ ಸಮ್ಮೇಳನ ಇದೇ ಸೆ. 21 ರಿಂದ 23, 2013 ರವರೆಗೆ ಮಂಡ್ಯ ಜಿಲ್ಲೆಯ ಕೆ.ಎಂ.ದೊಡ್ಡಿಯಲ್ಲಿ ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ಸಾಮಾಜಿಕ ಬೆಳವಣಿಗೆಗಳು ಮಹಿಳೆಯರ ಸಮಸ್ಯೆಗಳ ಕೆಲ ಪ್ರಮುಖ ಆಯಾಮಗಳ ವಿಶ್ಲೇಷಣೆ ಮತ್ತು ಅವಲೋಕನ ಇಲ್ಲಿದೆ.**

## ಮುರಿಯುವುದೆಂತು 'ವೈಧವ್ಯ' ಎಂಬ ಶರಪಂಜರ?

**ಕೊಳೆತು ನಾರುವ ಸಾಮಾಜಿಕ ಮೌಲ್ಯಗಳಲ್ಲಿ ಅದ್ದಿತೆಗೆದ ಮನಸ್ಸುಗಳು ನೊಂದ ಹೆಣ್ಣಿನ ಮೇಲೆಯೆ ದಾಳಿ ಮಾಡುತ್ತವೆ. ಆಕೆಯನ್ನೇ ನಿಂದಿಸುತ್ತವೆ. ಹೊಸ ಬದುಕಿನ ಅವಕಾಶಗಳನ್ನು ಹೊಸಕಿ–ಗೌರವಯುತ ಬಾಳಿನ ದಾರಿಯನ್ನು ಮುಚ್ಚಿಹಾಕಿ ಗಹಗಹಿಸುತ್ತವೆ. ಈ ದುಷ್ಟ ಮೌಲ್ಯಗಳಿಗೆ ಸವಾಲು ಎಸೆಯುವುದು ಹೇಗೆ ? ಯಾರು ?**

ವಿಧವೆತನ ಎಂಬುದು ಮಹಿಳಾ ಶೋಷಣೆಯ ಅತ್ಯಂತ ಕ್ರೂರ ಆಯಾಮಗಳಲ್ಲೊಂದಾಗಿದೆ. 'ಗಂಡ ಸತ್ತರೆ, ಹೆಂಡತಿಯಾಗುವಳು ವಿಧವೆ. ಹೆಂಡತಿ ಸತ್ತರೆ ಗಂಡ ಆಗುವ ಇನ್ನೊಂದು ಮದುವೆ' ಎಂಬಂತೆಯೇ ಸಮಾಜ ನಡೆದುಕೊಳ್ಳುತ್ತಿದೆ. ಖಾಸಗಿ ಆಸ್ತಿಯೊಂದಿಗೆ ತಳಕು ಹಾಕಿಕೊಂಡಿರುವ ವಿವಾಹ, ಕುಟುಂಬಗಳೆಂಬ ಸಾಮಾಜಿಕ ಸಂಸ್ಥೆಗಳನ್ನು ಪುರುಷಪ್ರಧಾನ ಪಾಳೇಗಾರಿ ಮೌಲ್ಯಗಳೇ ಹುಟ್ಟು·ಹಾಕಿವೆ. ಹಾಗೆ ನೋಡಿದರೆ ಜಾತಿ ವ್ಯವಸ್ಥೆಯನ್ನು ಗಟ್ಟಿಗೊಳಿಸಲು ವಿವಾಹ ಸಂಸ್ಥೆಯನ್ನು ಬಲವಾಗಿ ಬಳಸಿಕೊಳ್ಳಲಾಗಿದೆ. ಕೊನೆಯಲ್ಲಿ ಇವೆಲ್ಲವೂ ಮಹಿಳೆಯನ್ನು ಅಪಮಾನಗೊಳಿಸುವುದಕ್ಕಾಗಿ, ನಿರ್ಬಂಧಿಸುವುದಕ್ಕಾಗಿಯೇ ಉಪಯೋಗಿಸಲಾಗುತ್ತಿದೆ. ಆದ್ದರಿಂದಲೇ ಗಂಡ ಸತ್ತ ಮಹಿಳೆಯನ್ನು ವೈಧವ್ಯದ ಅಪಮಾನಕ್ಕೆ ಗುರಿ ಮಾಡಲಾಗುತ್ತಿದೆ. ವಿಧವಾ ವಿವಾಹಕ್ಕೆ ಕಾನೂನಿನ ವ್ಯಾಪ್ತಿಯಲ್ಲಿ ಅವಕಾಶ ನೀಡಲಾಗಿದೆಯಾದರೂ ವಾಸ್ತವದಲ್ಲಿ ಅದನ್ನೊಂದು ಮೌಲ್ಯವಾಗಿ ಬಿಂಬಿಸಲಾಗಿಲ್ಲ. ವೈಧವ್ಯದ ನಿರ್ನಾಮಕ್ಕಾಗಿ ಈವರೆಗಿನ ಯಾವುದೇ ಸರಕಾರಗಳು ಅರ್ಥಪೂರ್ಣ ಪರಿಣಾಮಕಾರಿ ಯೋಜನೆಗಳನ್ನು ರೂಪಿಸಿಲ್ಲ. ವಿಧವಾ ಪದ್ಧತಿಯನ್ನು ನಿಲ್ಲಿಸುವಂತಹ ಯಾವುದೇ ತರಹದ ಪ್ರೋತ್ಸಾಹದಾಯಕ ಆದರ್ಶವಾದಿ ಕಾರ್ಯಕ್ರಮಗಳನ್ನು ಜಾರಿಯಲ್ಲಿ ತಂದಿಲ್ಲ. ಈ ತರಹದ ಕ್ರಾಂತಿಕಾರಿ ಯೋಜನೆಗಳನ್ನು ರೂಪಿಸುವುದಂತೂ ಅವಕಾಶವಾದಿ ರಾಜಕಾರಣಕ್ಕೆ ಸಾಧ್ಯವಾಗುವುದೇ ಇಲ್ಲ. ಆದರೆ ವಿಧವೆಯರ ಗೋಳನ್ನು ಕಡಿಮೆ ಮಾಡಿ ಅವರ ಬಾಳನ್ನು ಎತ್ತರಿಸುವಂಥ ಕನಿಷ್ಠ ಅನುಕಂಪದ ಯೋಜನೆಗಳನ್ನಾದರೂ ಜಾರಿ ಮಾಡಬಹುದಿತ್ತು. ವಿಧವಾ ಮಾಸಾಶನದಂಥ ಪುಟ್ಟ ಪರಿಹಾರವನ್ನು ಸಹಿತ ಕಳೆದ ಸರಕಾರ ಜಾರಿ ಮಾಡಲಿಲ್ಲ. ಬದಲಿಗೆ ಬರುವ ಮಾಸಾಶನವನ್ನು ಅಕಾರಣವಾಗಿ ತಡೆ ಹಿಡಿಯಲಾಗಿದೆ. ಇದರಿಂದ ವಿಧವೆಯರ ಸಂಕಟದ ಬದುಕೆಂಬ ಗಾಯದ ಮೇಲೆ ಬರೆ ಎಳೆದಂತಾಗಿದೆ. ಎಷ್ಟೋ ವಯೋವೃದ್ಧ ವಿಧವೆಯರಿಗೆ ಸರಕಾರ ಕೊಡ ಮಾಡುತ್ತಿದ್ದ ಮಾಸಿಕ ರೂ.400 ಆಸರೆಯಾಗಿತ್ತು. ಒಂದು ಕೀಲೋ ಉಳ್ಳಾಗಡ್ಡಿಗೆ (ಈರುಳ್ಳಿ) ರೂ.80–100 ಆಗಿರುವಾಗ ಈ ನಾಲ್ಕು ನೂರು ರೂಪಾಯಿ ಹೇಗೆ ಸಾಕಾಗುವುದು? ಕನಿಷ್ಠ ರೂ.1500 ಮಾಸಾಶನ ಕೊಡುವಂತಾಗಬೇಕು.






ಇದಕ್ಕೆ ಸಾಕ್ಷಿಯೆಂಬಂತೆ 2011ರ ಜನಗಣತಿಯ ಅಂಕಿ ಅಂಶಗಳು ಈ ತಥ್ಯವನ್ನು ತೆರೆದು ತೋರಿಸಿವೆ. ರಾಜ್ಯದಲ್ಲಿ ಒಟ್ಟು 1.13 ಕೋಟಿ ಮನೆಗಳಿವೆ. ಅದರಲ್ಲಿ 20 ಲಕ್ಷ ಮನೆಗಳು ಮಹಿಳೆಯರ ನಿರ್ವಹಣೆಯಲ್ಲಿವೆ. ಇದಕ್ಕೆ ಪೂರಕವಾಗಿ ಹೈದರಾಬಾದ ಕರ್ನಾಟಕದಲ್ಲಿ ಮಹಿಳೆಯರೇ ನಿರ್ವಹಿಸುತ್ತಿರುವ ಕುಟುಂಬಗಳ ಸಂಖ್ಯೆ 4,92,413 ಇದ್ದರೆ ಮುಂಬೈ ಕರ್ನಾಟಕದಲ್ಲಿ 4,37,311 ಕುಟುಂಬಗಳಿವೆ. ಮೈಸೂರು ವಿಭಾಗದಲ್ಲಿ 4,36,986 ಇವೆ. ಈ ಅಂಕಿ ಅಂಶಗಳು ಕುಟುಂಬದಲ್ಲಿ ಮಹಿಳೆಯರ ಪ್ರಾಧಾನ್ಯತೆ ಹೆಚ್ಚಾಗುತ್ತಿದೆ ಎಂಬ ತಪ್ಪು ಭಾವನೆಗೆ ಎಡೆ ಮಾಡಿಕೊಡುವ ಸಾಧ್ಯತೆ ಇದೆ. ಇವು ಸ್ತ್ರೀ ಪ್ರಾಧಾನ್ಯತೆ ಹೆಚ್ಚಾಗುತ್ತಿರುವ ಕುಟುಂಬಗಳಲ್ಲ. ಸ್ತ್ರೀಯರೇ ಅನಿವಾರ್ಯವಾಗಿ ಸಂಸಾರ ನಿರ್ವಹಣೆ ಹೊತ್ತುಕೊಂಡಿರುವ ಕುಟುಂಬಗಳಾಗಿವೆ. ರಾಜ್ಯದಲ್ಲಿಯೇ ಹೈದರಾಬಾದ ಕರ್ನಾಟಕದಲ್ಲಿ ಮಹಿಳೆಯರೇ ನಿರ್ವಹಿಸುತ್ತಿರುವ ಕುಟುಂಬಗಳು ಜಾಸ್ತಿಯಾಗಿವೆ. ಇದಕ್ಕೆ ಕಾರಣ ತುಂಬ ಸ್ಪಷ್ಟವಾಗಿದೆ. ಪುರುಷರ ಅಕಾಲಿಕ ಮರಣದ ಸಂಖ್ಯೆಯಲ್ಲಿ ಏರಿಕೆಯಾಗುತ್ತಿದ್ದು ವಿಧವೆಯರ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ. ಈ ಭಾಗದಲ್ಲಿ ದುಡಿಯುವ ಕೈಗಳಿಗೆ ಕೆಲಸವಿಲ್ಲವಾಗಿ ವಲಸೆ ಪ್ರಮಾಣದಲ್ಲಿ ಹೆಚ್ಚಳವಾಗಿದೆ. ಪುರುಷರ ವಲಸೆಯಿಂದಾಗಿ ಕುಟುಂಬದ ಜವಾಬ್ದಾರಿ ಸ್ತ್ರೀಯರ ಮೇಲೆ ಬೀಳುತ್ತಿದೆ. ಎಷ್ಟೋ ಸಾರಿ ಗಂಡನಿದ್ದರೂ ಕುಡಿತವೋ ಮತ್ತೇನೋ ಚಟಕ್ಕೆ ಬಿದ್ದು ಮನೆ ಪೂರ್ತಿ ಮಹಿಳೆಯೇ ನಿರ್ವಹಿಸುತ್ತಿರುತ್ತಾಳೆ. ಇಂಥ ಕುಟುಂಬಗಳಲ್ಲಿ ಪ್ರಧಾನವಾಗಿ ವೈಧವ್ಯತನದಿಂದಾಗಿ ಮಹಿಳೆಯರ ಕೊರಳಿಗೆ ಉರುಳಾದ ಕುಟುಂಬಗಳೇ ಹೆಚ್ಚಿಗಿವೆ. ಬೆವರು, ಕಣ್ಣೀರು, ರಕ್ತ ಸುರಿಸಿ ಕುಟುಂಬ ನಿರ್ವಹಿಸಲು ಹೈರಾಣಾಗುವ ಹೆಣ್ಣಿನ ಗೋಳು ಇಲ್ಲಿದೆ.

ರಾಜ್ಯದಾದ್ಯಂತ ವಿಧವೆಯರ ಸಂಖ್ಯೆಯಲ್ಲಿ ಹೆಚ್ಚಳವಾಗುತ್ತಿರುವುದು ದುರಂತದ ಸಂಗತಿ. ಆದರೆ ಹೀಗೆ ಹೆಚ್ಚಳವಾಗುತ್ತಿರುವ ಹಿಂದಿನ ಕಾರಣಗಳು ಮಾತ್ರ ತುಂಬಾ ಭಯಾನಕವಾಗಿವೆ. ಈ ಹಿಂದೆ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಮುಂತಾದ ಮೇಲ್ವರ್ಗ, ಮೇಲ್ಜಾತಿಗಳಲ್ಲಿ ವಿಧವಾ ವಿವಾಹಕ್ಕೆ ಅವಕಾಶವೇ ಇರಲಿಲ್ಲ. ಅದು ಅವರಿಗೆ ಮೀರಲಾಗದ ಧಾರ್ಮಿಕ ಕಟ್ಟಳೆಯಾಗಿತ್ತು. ಆದರೆ ಶೂದ್ರ ಪಂಚಮರಲ್ಲಿ ವಿಧವಾ ವಿವಾಹಕ್ಕೆ ಅವಕಾಶವಿತ್ತು. 'ಮುತ್ತೈದಿತನ', 'ಸೌಭಾಗ್ಯವತಿತ್ವ'ದ ಬಗೆಗೆ ಅಷ್ಟಾಗಿ ಮಡಿವಂತಿಕೆ ಇರಲಿಲ್ಲ. ಬಾಲ್ಯ ವಿಧವೆಯರು, ಹದಿ ಹರೆಯದ ವಿಧವೆಯರು ನಡುವಯಸ್ಸಿನ ವಿಧವೆಯರು ಅಷ್ಟೇ ಏಕೆ ಮಕ್ಕಳನ್ನು ಹೊಂದಿರುವ ವಿಧವೆಯರನ್ನು ಪುನರ್ ವಿವಾಹವಾಗಲು ಅವಕಾಶವಿತ್ತು. ಇಂಥ ವಿವಾಹಗಳಿಗೆ ಕೂಡಿಕೆ, ಕೂಡಾವಳಿ, ಉಡಕಿ ಎಂದೆಲ್ಲಾ ಕರೆವ ವಾಡಿಕೆ ಇತ್ತು. ಈ ರೀತಿ ಪುನರ್ ವಿವಾಹವಾದ ಮಹಿಳೆಯರನ್ನು ಸಾಮಾಜಿಕವಾಗಿ ಒಂದಿಷ್ಟು ಕಡಿಮೆ ದೃಷ್ಟಿಕೋನದಿಂದ ಕಾಣುವ ಪರಿಪಾಠವಿತ್ತಾದರೂ ಅವರಿಗೆ ಪುನಹಃ ಬಾಳನ್ನು ಕಟ್ಟಿಕೊಳ್ಳುವ ಮತ್ತು ಸಾಮಾಜಿಕ ಮನ್ನಣೆ ಕೊಡುವ ಅವಕಾಶಗಳಿದ್ದವು. ಆದರೆ ಇತ್ತೀಚೆಗೆ ಶೂದ್ರರಲ್ಲಿಯೂ ಪುನರ್ ವಿವಾಹದ ಅವಕಾಶಗಳು ಕುಂಠಿತವಾಗಿವೆ. ವೈದಿಕ ಮೌಲ್ಯಗಳ ವೈಭವೀಕರಣ ಮತ್ತು ವ್ಯಾಪಕ ಪ್ರಸಾರದಿಂದಾಗಿ ದುಡಿಯುವ ವರ್ಗದಲ್ಲಿಯೂ ಮಹಿಳಾ ವಿರೋಧಿ ಮೌಲ್ಯಗಳು ಸ್ಥಾಯಿಗೊಳ್ಳುತ್ತಿವೆ. ವಿಧವೆಯರನ್ನು ಮದುವೆ ಮಾಡಿಕೊಳ್ಳಲು ಯುವಕರು ಮುಂದೆ ಬರುತ್ತಿಲ್ಲ. ಅರವತ್ತು ಎಪ್ಪತ್ತರ ದಶಕದಲ್ಲಿ ಪ್ರಗತಿಪರ ಎಡಪಂಥೀಯ ಚಳುವಳಿಗಳ ಕಾರಣವಾಗಿ ಅಂತರಜಾತಿ ವಿವಾಹಗಳು, ವಿಧವಾ ವಿವಾಹಗಳು, ಸರಳ ವಿವಾಹಗಳು ಜರುಗುತ್ತಿದ್ದವು. ಆದರೆ ವರ್ತಮಾನದ ಸಂದರ್ಭದಲ್ಲಿ ಕಾರ್ಪೊರೇಟ್ ಮೌಲ್ಯಗಳು ಯುವಕರಲ್ಲಿ ಅವಕಾಶವಾದಿತನ ಬೆಳೆಸುತ್ತಿವೆ. ಹೈಟೆಕ್ ಸಂಸ್ಕೃತಿಯ ವಕ್ತಾರರು ಸನಾತನವಾದಿ ಮೌಲ್ಯಗಳನ್ನು ತುರುಕುತ್ತಿದ್ದಾರೆ. ಸಾಹಿತ್ಯ, ಸಮೂಹಮಾಧ್ಯಮ, ಜಾಹಿರಾತು, ಉಪಭೋಗ ವಸ್ತುಗಳ ಆಕರ್ಷಣೆ ಇತ್ಯಾದಿ ವಿದ್ಯಮಾನಗಳು ಯುವಪಡೆಯಲ್ಲಿ ಮೇಲರಿಮೆ ಭಾವನೆ ಮೂಡಿಸುತ್ತಿವೆ. ಕೊಳ್ಳುಬಾಕತನ, ದುರಾಸೆ, ಲಾಲಸೆ ಹುಟ್ಟುಸುತ್ತಿವೆ. ಹೀಗಾಗಿ ವಿಧವಾ ವಿವಾಹಗಳು ಇಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಇನ್ನೊಂದೆಡೆ ವಿಧವೆಯರಿಗೆ ಸಾಮಾಜಿಕ ಮನ್ನಣೆ,

ಜನಶಕ್ತಿ
ಕನ್ನಡ ವಾರಪತ್ರಿಕೆ



ಾನ-ಸನ್ಮಾನ ಒತ್ತಟ್ಟಿಗಿರಲಿ. ಕನಿಷ್ಠ ಆರ್ಥಿಕ ದ್ರತೆಯು ದಕ್ಕುತ್ತಿಲ್ಲ. ಪ್ರತಿಶತ 80ರಷ್ಟು ಧವೆಯರಿಗೆ ಸ್ವತಂತ್ರ ರೇಷನ್ ಕಾರ್ಡಿಲ್ಲ. ಸ್ತಿಯಲ್ಲಿ ಪಾಲಂತೂ ಇಲ್ಲವೇ ಇಲ್ಲ. ೀಮಂತರ ಮನೆಯ ವಿಧವೆಯರು ಸ್ವಂತದ ಗೆ ಚಿಕ್ಕಾಸು ಇಲ್ಲದೆ ಒದ್ದಾಡುತ್ತಿದ್ದಾ- ತೋರಿಕೆಗೆ ಶ್ರೀಮಂತರು. ಆದರೆ ಎಲ್ಲ ರುದ್ಯೋಗಿ ವಿಧವೆಯರು ಕಡುಬಡವರೇ. ವರ ಬದುಕು ಶೋಚನೀಯವೇ ಆಗಿದೆ.

ವಿಧವೆಯರ ಮೇಲೆ ದೌರ್ಜನ್ಯದ ಕರಣಗಳು ಹೆಚ್ಚುತ್ತಿವೆ. ಹೊಟ್ಟೆ ಾಡಿಗಾಗಿ ವಿಧವೆಯರು ಹೊರಗೆ ೋಗಿ ದುಡಿಯುವುದು ಅನಿವಾರ್ಯ. ೀಗೆ ದುಡಿಯಲು ಹೋದಾಗ ಒಟ್ಟು ಹಿಳೆಯರೇ ಸುರಕ್ಷಿತವಾಗಿಲ್ಲ. ನ್ನು ವಿಧವೆಯಾಗಿದ್ದರಂತೂ ಸಹ ಡಿಮೆಗಾರರಿಗೆ ಅವಳನ್ನು ಲೈಂಗಿಕವಾಗಿ ರ್ಬಳಕೆ ಮಾಡಿಕೊಳ್ಳಲು ಹುನ್ನಾರು ಣೆಯುತ್ತಿರುತ್ತಾರೆ. ಮಧ್ಯಮ ವರ್ಗದ ಷ್ಟೊ ವಿಧವೆಯರು ಕಾಮುಕರ ಕಾಕದೃಷ್ಟಿಗೆ ಂಜಿ ತಾಳಿ, ಕುಂಕುಮ ಇಟ್ಟುಕೊಂಡು ಮಗೂ ಗಂಡನಿದ್ದಾನೆ ಎಂದು ಸುಳ್ಳು ೇಳಿಕೊಂಡು ದಿನ ನೂಕುತ್ತಿದ್ದಾರೆ. ಅವರು ಮೂಲಕ ವಿಕೃತ ಕಾಮಿಗಳಿಂದ ಕೊಳ್ಳಲು ಗೌರವಯುತ ಬದುಕಿಗಾಗಿ ಂಬಾ ಪರಿಪಾಟಲು ಪಡುತ್ತಿದ್ದಾ- . ದುಡಿಯುವ ವರ್ಗದ ವಿಧವೆಯರು ಹ ಎಷ್ಟೊ ಸಾರಿ ಲೈಂಗಿಕ ದೌರ್ಜನ್ಯ ದುರಿಸಿದ್ದರಿಂದ ಎಲ್ಲಿಯೂ ಕೆಲಸ ಸಿಗದೆ ದ್ದಾಡುವ ಪರಿಸ್ಥಿತಿ ಇದೆ.

ಜನವಾದಿ ಮಹಿಳಾ ಸಂಘಟನೆಯು ಧವಾ ಪದ್ಧತಿಯ ಎಲ್ಲ ರೀತಿಯ ನಿಷ್ಟಗಳ ವಿರುದ್ಧ ಕಾರ್ಯಕ್ರಮ, ಳುವಳಿ ಸಂಘಟಿಸಿದೆ. ಸಂತೋಷದ ಂಗತಿಯೆಂದರೆ ಈ ವೈಚಾರಿಕ ಹೆಜ್ಜೆಯ ಾರಣವಾಗಿ ಅನೇಕ ವಿಧವೆ ಮಹಿಳೆಯರು ಪಮಾನಜನಕ ಆಚರಣೆಗಳ ವಿರುದ್ಧ ನಿಯೆತ್ತುತ್ತಿರುವರು. ವೈಧವ್ಯದ ಚಹರೆ ತ್ತೊಗೆದು ಸ್ವಾಭಿಮಾನಿ ಮಹಿಳೆಯಂತೆ ದುಕಲು ಮುನ್ನಡೆಯುತ್ತಿರುವರು. ಮಹಿಳೆಯೂ ಈ ದಿಕ್ಕಿನತ್ತ ಹೆಜ್ಜೆ ುವುದಲ್ಲದೆ, ಸಮಾಜದ ಮಹಿಳಾ ರೋಧಿ ಮೌಲ್ಯಗಳ ಬದಲಾವಣೆಗೆ ಂಘಟನೆ ಇನ್ನಷ್ಟು ಪರಿಣಾಮಕಾರಿಯಾಗಿ ುವುದು ಅವಶ್ಯಕತೆಯಿದೆ.

# ವರದಕ್ಷಿಣೆ–'ಆಧುನಿಕತೆ'ಯೊಂದಿಗೆ ಹೆಚ್ಚುತ್ತಿರುವ ಹೆಣ್ಣು ಹೆತ್ತವರ ಜೀವ ಹಿಂಡುವಿಕೆ

ನಾಗರಿಕ ಸಮಾಜಕ್ಕೆ ಅಪಮಾನದಂತಿರುವ ಈ ಪದ್ಧತಿಯು ತುಂಬಾ ಹಳೆಯ ಭೂತವಾಗಿದೆ. ಮದುವೆಯ ನೆಪದಲ್ಲಿ ಹೆಣ್ಣಿನ ಕಡೆಯಿಂದ ಹಣ, ಯಾವುದೇ ರೂಪದ ಕಾಣಿಕೆ, ನಿವೇಶನ ಇತ್ಯಾದಿಗಳನ್ನು ವರದಕ್ಷಿಣೆಯಾಗಿ ಪಡೆಯುವುದು ಅಥವ ಕೊಡುವುದು ಎರಡೂ ಅಪರಾಧಗಳೆಂದು ಪರಿಗಣಿಸಲಾಗಿದೆ. ಇದೊಂದು ದಂಡನಾರ್ಹ ಅಪರಾಧವಾಗಿದೆ. 1961ರಲ್ಲಿಯೇ ವರದಕ್ಷಿಣೆ ನಿಷೇಧ ಕಾನೂನು ದೇಶದಲ್ಲಿ ಜಾರಿ ಮಾಡಲಾಗಿದೆಯಾದರೂ ಈವರೆಗೂ ಈ ಪಿಡುಗು ಮಾತ್ರ ಸಮಾಜದಿಂದ ಮಾಯವಾಗಿಲ್ಲ.

**'ಶಿಕ್ಷಣ' ಹರಡಿದಂತೆ 'ಸಾಕ್ಷರತೆ' ಹೆಚ್ಚಿದಂತೆ 'ಆಧುನಿಕತೆ' ಬೆಳೆದಂತೆ ವರದಕ್ಷಿಣೆ ಪದ್ಧತಿಯನ್ನು ಸಮರ್ಥಿಸಿಕೊಳ್ಳುವ ಮನೋಪ್ರವೃತ್ತಿಗಳು, ಚಾಣಾಕ್ಷತೆಗಳು ಹೆಚ್ಚುತ್ತಿರುವಂತೆ ತೋರುತ್ತಿವೆಯೇ ಹೊರತು ವರದಕ್ಷಿಣೆಗಾಗಿ ಜೀವ ಹಿಂಡುವಿಕೆಗಳು, ಸುಡುವಿಕೆಗಳು ಕಡಿಮೆಯಾಗುತ್ತಿಲ್ಲ.**



ಉಡುಗೆ-ತೊಡುಗೆಯಲ್ಲಿ ಆಧುನಿಕತೆ ಬಂದಿದೆ. ಆದರೆ ಚಿಂತನೆಗಳು ಮಾತ್ರ ಮಹಿಳಾ ವಿರೋಧಿಯಾಗಿಯೆ ಉಳಿದಿವೆ. ವರದಕ್ಷಿಣೆ ಪದ್ದತಿ ರೂಪ ಬದಲಿಸಿಕೊಂಡು ಮತ್ತೆ ಮತ್ತೆ ಪ್ರತ್ಯಕ್ಷವಾಗುತ್ತಲೇ ಇದೆ. ಬಂಗಾರ, ವಡವೆ, ಗಾಡಿ, ಸೈಟು, ದಿನೋಪಯೋಗಿ ವಸ್ತುಗಳು, ವಿದೇಶದಲ್ಲಿ ಓದುವ ಖರ್ಚು ಹೀಗೆ ವರದಕ್ಷಿಣೆಗೆ ನಾನಾ ರೂಪಗಳು. ತೀರಾ ದುರಂತದ ಸಂಗತಿಯೆಂದರೆ ಸ್ತ್ರೀ ಭ್ರೂಣ ಹತ್ಯೆಗಳಿಂದಾಗಿ ವರ್ಷದಿಂದ ವರ್ಷಕ್ಕೆ ಹೆಣ್ಣುಮಕ್ಕಳ ಸಂಖ್ಯೆಯಲ್ಲಿ ಇಳಿಮುಖವಾಗುತ್ತಿದೆ. ಮದುವೆಯ ವಯಸ್ಸಿನ ಯುವತಿಯರ ಸಂಖ್ಯೆಯು ಕಡಿಮೆ ಇದೆ. ಹೀಗಿರುವಾಗಲೂ ವರದಕ್ಷಿಣೆ ಮೊತ್ತದಲ್ಲಿ ಮಾತ್ರ ಇಳಿಕೆಯಾಗದೆ ಏರಿಕೆಯಾಗುತ್ತಲೇ ಇದೆ. ಏಕೆಂದ- ರೆ ಈ ಕ್ಷಣಕ್ಕೂ ಸ್ತ್ರೀಯರನ್ನು ಭೋಗದ ವಸ್ತುವೆಂದು ಪರಿಗಣಿಸಲಾಗುತ್ತಿದೆ. ಮೇಲ್ವರ್ಗದಿಂದ ಈಗ ಕೆಳವರ್ಗಕ್ಕೂ ವರದಕ್ಷಿಣೆ ಆವರಿಸಿಕೊಂಡಿದೆ.

ಖಾಸಗೀಕರಣ ಜಾಗತೀಕರಣ ಉದಾರೀಕರಣದ ನೀತಿಗಳು ವರದಕ್ಷಿಣೆ ಭೂತವನ್ನು ಇನ್ನಷ್ಟು ಕ್ರೂರಗೊಳಿಸುತ್ತಿವೆ. ಮಾಧ್ಯಮಗಳು ವರದಕ್ಷಿಣೆಯನ್ನು ವೈಭವೀಕರಿಸುವಲ್ಲಿ ಅದ್ದೂರಿ ಮದುವೆಯನ್ನು ವಿಜೃಂಭಿಸುವಲ್ಲಿ ತೊಡಗಿವೆ. ಪ್ರಯೋಜನಕಾರಿ ಅಥವ ನಿತ್ಯೋಪಯೋಗಿ ಅಲ್ಲದ ಆಕರ್ಷಕ ವಸ್ತುಗಳ ಜಾಹಿರಾತುಗಳು ಗಂಡು ಹೆತ್ತವರನ್ನು ಆಮಿಷಕ್ಕೊಡ್ಡುತ್ತಿವೆ. ವೈಭೋಪೇಪೇತ ಸಿರಿಯಲ್ಲುಗಳಲ್ಲಿ ಕಾಣಿಸಿಕೊಳ್ಳುವ ತರಹೇವಾರಿ ಉಡುಗೆ, ತೊಡುಗೆ ಕಾರ್ಯಕ್ರಮಗಳು ಜನತೆಯನ್ನು ಆಡಂಬರತೆಯತ್ತ ಸೆಳೆಯುತ್ತಿವೆ. ಬಂಡವಾಳಶಾಹಿ ಲೋಕ ತನ್ನ ಉತ್ಪಾದನೆಗಳಿಗೆ ಮಾರುಕಟ್ಟೆ ನಿರ್ಮಿಸಿಕೊಳ್ಳಲು ಮಾಧ್ಯಮಗಳನ್ನು ರಹದಾರಿಯನ್ನಾಗಿ ಮಾಡಿಕೊಳ್ಳುತ್ತಿದೆ. ಜನತೆಯಲ್ಲಿ ಹಪಾಹಪಿತನವನ್ನು ಹುಟ್ಟು ಹಾಕುತ್ತಿದೆ. ಕೊಳ್ಳುಬಾಕ ಸಂಸ್ಕೃತಿ ನಿರ್ಮಿಸುತ್ತಿದೆ. ಅದ್ದೂರಿ ಕಾರ್ಯಕ್ರಮಗಳು ಪ್ರತಿಷ್ಠೆಯಾಗಿ ಪರಿವರ್ತಿತವಾಗುತ್ತಿವೆ. ಹೀಗಾಗಿ ವರದಕ್ಷಿಣೆಯಿಲ್ಲದೆಯೂ ನಡೆಯುವ ಮದುವೆಯ ಖರ್ಚುಗಳು ಹೆಣ್ಣು ಹೆತ್ತವರನ್ನು ಭಿಕಾರಿಗಳನ್ನಾಗಿಸುತ್ತಿವೆ.

ವರದಕ್ಷಿಣೆ ಆಡಂಬರದ ಮದುವೆಯಿಂದ ಆರಂಭವಾದ ವರನ ಕಡೆಯವರ ದಾಹವು ಇಲ್ಲಿಗೆ ನಿಲ್ಲುವುದಿಲ್ಲ. ಸೀಮಂತ, ಮಗುವಿನ ನಾಮಕರಣ, ಮುಂತಾದ ಸಂದರ್ಭದಲ್ಲಿ ಇನ್ನಷ್ಟು ಬಂಗಾರ ವಸ್ತುಗಳನ್ನು ಕಬಳಿಸಲು ಸಜ್ಜಾಗಿರುತ್ತಾರೆ. ಈ ದುರಾಸೆ ಪೂರೈಸದಿದ್ದರೆ ಮಹಿಳೆಗೆ ಕಿರುಕುಳ, ಅಪಮಾನ, ಬೆದರಿಕೆ, ಆರಂಭ. ಹೀಗಾಗಿ ಪ್ರತಿ 20 ನಿಮಿಷದಲ್ಲಿ ಒಂದು ವರದಕ್ಷಿಣೆ ಸಾವು ಘಟಿಸುತ್ತಿದೆ.



ಅವಳು ಆತ್ಮಹತ್ಯೆ ಮಾಡಿಕೊಂಡರೂ ಅದು ಕೊಲೆಯೇ ಆಗಿರುತ್ತದೆ. ಏಕೆ- ಂದರೆ ಅವಳು ಸತ್ತು ಹೋಗಲು ಪ್ರೇರಣೆ ಗಂಡನ ಮನೆಯ ಕಿರುಕುಳವೇ ಆಗಿರುತ್ತದೆ. ಕರ್ನಾಟಕ ರಾಜ್ಯವು ವರದಕ್ಷಿಣೆ ಸಾವಿನಲ್ಲಿ ದೇಶದಲ್ಲಿ 15 ಸ್ಥಾನದಲ್ಲಿದೆ. ವರದಕ್ಷಿಣೆ ಸಾವು ಕಿರುಕುಳಗಳು ದಾಖಲಾಗುವ ಅಂಕಿ ಸಂಖ್ಯೆಗಳು ಬಹಳ ಕಡಿಮೆ. ದಾಖಲಾಗದೆ ಮುಚ್ಚಿ ಹೋಗುವ ಪ್ರಕರಣಗಳೇ ಜಾಸ್ತಿ.

ಇದೇ ಹೊತ್ತಿನಲ್ಲಿ ವರದಕ್ಷಿಣೆ ನಿಷೇಧ ಕಾನೂನನ್ನು ಪರಿಣಾಮಕಾರಿಯಾಗಿ ಜಾರಿ ಮಾಡುವಲ್ಲಿ ಯಾವುದೇ ಮೆಕ್ಯಾನಿಜಂ ಇಲ್ಲವಾಗಿದೆ. ಎರಡು ಕುಟುಂಬಗಳ ನಡುವೆ ನಡೆಯುವ ಮದುವೆ ಒಪ್ಪಂದದಲ್ಲಿ ವರದಕ್ಷಿಣೆ ಪ್ರಕ್ರಿಯೆಯೂ ನಡೆಯುತ್ತದೆ. ಅವಘಡ ಘಟಿಸಿ ದೂರು ಬಂದಾಗಲೇ ಕ್ರಮ ಜರುಗಿಸಲಾಗುತ್ತಿದೆ. ಆದರೆ ವರದಕ್ಷಿಣೆ ಪ್ರಸ್ತಾಪ ಮಾಡಲೇಬಾರದಂಥ ಕ್ರಮ ಯೋಜಿಸುವ ಜರೂರಿ ಇದೆ. ದುರಂತದ ಸಂಗತಿಯೆಂದರೆ ಮೊದಲಿಗೆ ವರದಕ್ಷಿಣೆ ಕಿರುಕುಳದ ಕೇಸಾದ ಕೂಡಲೇ ಗಂಡ, ಅತ್ತೆ, ಮಾವನನ್ನು ಬಂಧಿಸುತ್ತಿದ್ದರು. ಈಗ ಪೋಲಿಸರಿಗೆ ವರದಕ್ಷಿಣೆಗಾಗಿಯೇ



ಕಿರುಕುಳವೆಂದು ಪರಾಮರ್ಶಿಸಿ ಕಂಡು ಬಂದಲ್ಲಿ ಮಾತ್ರ ಕ್ರಮ ಕೈಗೊಳ್ಳಬೇಕೆಂಬ ನಿರ್ದೇಶನವಿದೆ. ಹೀಗಾಗಿ ಕಾನೂನಿನ ಬೆರಳುಗಳಿಂದಲೂ ವರದಕ್ಷಿಣೆ ದಾಹಿಗಳು ತಪ್ಪಿಸಿಕೊಳ್ಳುವ ದಾರಿ ಸಿಕ್ಕಂತಾಗಿದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಕಮ್ಯೂನಿಸ್ಟ್ ಚಳುವಳಿಯ ಒಂದು ದೊಡ್ಡ ಇತಿಹಾಸವಿದೆ. ಅದನ್ನು ನೆನಪಿಸಿಕೊಳ್ಳುವ ಅವಶ್ಯಕತೆ ಇದೆ. ಜಿ.ಎಸ್. ನಾಗರಾಜ್ ಅವರು 50ರ ದಶಕದ ಕೊನೆಯಲ್ಲಿ ಕಮ್ಯೂನಿಸ್ಟ್ ಚಳುವಳಿಗೆ ಸೇರಿ ದೀರ್ಘಕಾಲ ದುಡಿದಂತಹ ನಾಯಕರು. 60 ರ ದಶಕದ ಕೊನೆ ಮತ್ತು 70ರ ದಶಕದ ಆರಂಭದಲ್ಲಿ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ನಡೆದ ತೀಕ್ಷ್ಣ ಭೂ ಹೋರಾಟದಲ್ಲಿ ಪಾಲ್ಗೊಂಡ ಮುಖಂಡರು ಅವರು. ಗೇಣಿದಾರರ ಚಳುವಳಿ, ಭೂಹೋರಾಟ, ಕಮ್ಯೂನಿಸ್ಟ್ ಚಳುವಳಿ, ವಿದ್ಯಾರ್ಥಿ ಚಳುವಳಿ. ಹೀಗೆ ಅವರ ನೆನಪುಗಳ ಪುಟಗಳನ್ನು ತಿರುವಿ ಹಾಕಿದಾಗ ಸಿಕ್ಕ ಮಾಹಿತಿಗಳು ನಿಮಗಾಗಿ.

ಸಂದರ್ಶಕ: ಆರ್. ರಾಮಕೃಷ್ಣ.

# ಶಿವಮೊಗ್ಗದ ಕಮ್ಯೂನಿಸ್ಟ್ ಮುಖಂಡರೊಬ್ಬರ ನೆನಪುಗಳು

## ಜಿ.ಎಸ್. ನಾಗರಾಜ್ ಸಂದರ್ಶನ

**ಜನಶಕ್ತಿ:** ನೀವು ಕಮ್ಯೂನಿಸ್ಟ್ ಚಳುವಳಿ ಪ್ರವೇಶಿದ್ದು ಹೇಗೆ ? ಅಂದಿನ ಸಂದರ್ಭ ಹೇಗಿತ್ತು. ?

ಶಿವಮೊಗ್ಗದಲ್ಲಿ 1941–42 ರಲ್ಲಿಯೇ ಕೆಂಬಾವುಟದ ಸಂಘ ಆರಂಭವಾಗಿತ್ತು. ಮೈಸೂರು ಕಾಗದ ಕಾರ್ಖಾನೆ(ಎಂಪಿಎಂ)ಯಲ್ಲಿ ಎಐಟಿಯುಸಿ ನೇತೃತ್ವದಲ್ಲಿ ಕಾರ್ಮಿಕರನ್ನು ಸಂಘಟಿಸುವ ಮೂಲಕ. ಎನ್.ಡಿ. ಶಂಕರ್ ಆಗಿನ ಮುಖಂಡರಾಗಿದ್ದರು. ಅದು 1958–59. ಎನ್.ಎಲ್. ಉಪಾಧ್ಯಾಯ, ಎನ್.ಕೆ. ಉಪಾಧ್ಯಾಯ, ಬಿ.ವಿ. ಕಕ್ಕಿಲ್ಲಾಯ, ಮೊಟಯ್ಯ, ಹೊಳ್ಳ ಅಂಥವರೆಲ್ಲಾ ಪಕ್ಷದ ರಾಜ್ಯ ಮುಖಂಡರಾಗಿದ್ದರು. ಆವಾಗ ಶಿವಮೊಗ್ಗ ಜಿಲ್ಲೆಯಲ್ಲಿ ಚಂದು ಕುಟ್ಟಿ ನಾಯರ್ ಕಮ್ಯೂನಿಸ್ಟ್ ಪಕ್ಷದ ನಾಯಕರು. ಶಿವಮೊಗ್ಗದಲ್ಲಿ ಆ ಕಾಲದಲ್ಲಿ ಇದ್ದದ್ದು ಆಟೋಮೊಬೈಲ್ ಕಾರ್ಮಿಕರು, ಅದೂ ಸಣ್ಣ ಪ್ರಮಾಣದಲ್ಲಿ. ತೀರ್ಥಹಳ್ಳಿಯವರಾದ ಬಿ. ಎನ್. ಅಪ್ಪಣ್ಣ ಹೆಗಡೆ, ಮತ್ತೊಬ್ಬ ಪ್ರಮುಖರಾದ ಕೆ.ಎಂ. ಶ್ರೀನಿವಾಸ್ ಅವರುಗಳು 57–58ರಲ್ಲಿ ಕಾನೂನು ಶಿಕ್ಷಣ ಮುಗಿಸಿ ವಕೀಲಿ ಪ್ರಾರಂಭಿಸಿದರು. ಮತ್ತು ಅವರು ಕಮ್ಯೂನಿಸ್ಟ್ ಪಕ್ಷದ ಜೊತೆ ಗುರುತಿಸಿಕೊಂಡರು.


1957 ರಲ್ಲಿ ಕೇರಳದಲ್ಲಿ ಇಎಂಎಸ್ ನಂಬೂದರಿಪಾದ್ ಅವರ ನೇತೃತ್ವದಲ್ಲಿ ಕಮ್ಯೂನಿಸ್ಟ್ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದಿತ್ತು. ಅದರ ಪ್ರಭಾವದಿಂದ ಹೊಸಬರು ಪಕ್ಷದ ಕಡೆಗೆ ಆಕರ್ಷಿತರಾಗುತ್ತಿದ್ದರು.

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ, ಸಾಗರ, ಸೊರಬ, ಮಲೆನಾಡು ಗೇಣಿ ಪದ್ಧತಿ ಪ್ರಧಾನವಾದ ಪ್ರದೇಶ. ಗೇಣಿ ಸಮಸ್ಯೆ ತುಂಬಾ ಇತ್ತು. ಸಮಾಜವಾದಿ ಪಕ್ಷ ಗೇಣಿದಾರರನ್ನು ಸಂಘಟಿಸಿ ಸಾಗರ, ತೀರ್ಥಹಳ್ಳಿ, ಸೊರಬ ಮುಂತಾದ ಕಡೆ ಚಳುವಳಿ ನಡೆಸುತ್ತಿತ್ತು. ಶಾಂತವೇರಿ ಗೋಪಾಲಗೌಡರು, ಜೆ.ಎಚ್. ಪಟೇಲರು, ಕಾಗೋಡು ತಿಮ್ಮಪ್ಪ, ಸದಾಶಿವ ರಾಯರು ಇವರೆಲ್ಲ ಅದರ ಮುಖಂಡರಾಗಿದ್ದರು.

### ನಾನಾ ಹೊಣೆ ನಿಭಾಯಿಸುತ್ತಿರುವ ನಗುಮುಖದ ಸಂಗಾತಿ

ಜಿಲ್ಲೆಯ ಕಮ್ಯೂನಿಸ್ಟ್ ಚಳುವಳಿಯ ಬಗೆಗೆ ತಮ್ಮ ನೆನಪಿನ ಬುತ್ತಿಯನ್ನು ಬಿಚ್ಚಿ ವಿವರಗಳನ್ನು ಕೊಡಿ ಎಂದು ಕೇಳಿದಾಗ ಜಿ.ಎಸ್. ನಾಗರಾಜ್ ತುಂಬಾ ಪ್ರೀತಿ, ಆದರಗಳಿಂದ ಮಾಹಿತಿಗಳನ್ನು ನೀಡಿದ್ದಾರೆ. ಶಿವಮೊಗ್ಗದ ಹಿರಿಯ ವಕೀಲರರಾಗಿರುವ ಈ ಸಂಗಾತಿ ಪ್ರಸ್ತುತ 'ಇಂಡೋ–ಚೀನಾ ಫ್ರೆಂಡ್‌ಶಿಪ್ ಅಸೋಸಿಯೇಷನ್'ನ ಹಾಲಿ ರಾಷ್ಟ್ರೀಯ ಅಧ್ಯಕ್ಷರಾಗಿದ್ದಾರೆ. ಶಿವಮೊಗ್ಗದ 'ನ್ಯಾಷನಲ್ ಎಜುಕೇಷನ್ ಸೊಸೈಟಿ'ಯ ಉಪಾಧ್ಯಕ್ಷರು, ಸಿಐಟಿಯು ಸಂಘಟನೆಯ ಶಿವಮೊಗ್ಗ ಜಿಲ್ಲಾ ಸಮಿತಿಯ ಅಧ್ಯಕ್ಷರೂ ಆಗಿದ್ದಾರೆ. ಅವರು 'ಕರ್ನಾಟಕ ರಾಜ್ಯ ಬಾರ್ ಕೌನ್ಸಿಲ್'ಗೆ ಎರಡು ಅವಧಿಗೆ ಚುನಾಯಿತ ಅಧ್ಯಕ್ಷರಾಗಿ ದುಡಿದಿದ್ದಾರೆ. ಒಮ್ಮೆ ಶಿವಮೊಗ್ಗ ನಗರಸಭೆ ಸದಸ್ಯರಾಗಿಯೂ ಅವರು ದುಡಿದಿದ್ದಾರೆ.

ಕೆ.ಜಿ. ವಡೆಯರ್ ಸಾಗರದಲ್ಲಿ ದೊಡ್ಡ ಭೂಮಾಲಕರು. ಎಂ.ಪಿ. ಆಗಿದ್ದರು. 52–53 ರಲ್ಲಿ ಹೋರಾಟ ಪ್ರಬಲವಾಯಿತು.



ಸಾಗರದಿಂದ ಪ್ರಾರಂಭವಾಗಿ ತೀರ್ಥಹಳ್ಳಿ, ಸೊರಬ ಎಲ್ಲ ಕಡೆಗೂ ಹರಡಿತು. ಲೋಹಿಯಾ ಸಾಗರಕ್ಕೆ ಬಂದಿದ್ದರು. ಬಂಧನಕ್ಕೂ ಒಳಗಾಗಿದ್ದರು. 1952 ರಲ್ಲಿ ಮೊದಲ ಚುನಾವಣೆ. ಕೊಪ್ಪ–ತೀರ್ಥಹಳ್ಳಿ ವಿಧಾನ ಸಭಾ ಕ್ಷೇತ್ರದಿಂದ ಶಾಂತವೇರಿ ಗೋಪಾಲಗೌಡ ಶಾಸಕರೂ ಆದರು.

ದೀವರು–ಅಂದರೆ ಈಡಿಗರು. ಗೇಣಿದಾರರಲ್ಲಿ ಈಡಿಗರು ಮತ್ತು ಒಕ್ಕಲಿಗರು ಹೆಚ್ಚಾಗಿದ್ದರು. ಗೇಣಿದಾರರ ಸಮಸ್ಯೆಗಳು–ಸಂಕಟಗಳು ಹೆಚ್ಚುತ್ತಿದ್ದವು. ಭೂ ಮಾಲೀಕರು ಗೇಣಿ ಬಹಳ ತೆಗೆದುಕೊಳ್ಳುತ್ತಿದ್ದರು. ಬೇಕು ಬೇಕೆಂದಾಗ ಗೇಣಿ ಬಿಡಿಸುವುದು ಮಾಡುತ್ತಿದ್ದರು. ತೀರ್ಥಹಳ್ಳಿಯ ಪ್ರಭಾವಿ ಮನೆತನದ ಅಪ್ಪಣ್ಣ ಹೆಗಡೆ ಚಳುವಳಿ ಆರಂಭಿಸಿದರು.

1950ರ ದಶಕದಲ್ಲಿ 'ಟೆನೆಂಟ್ ಆಕ್ಟ್–ಗೇಣಿ ಕಾಯ್ದೆ' ಮೂಲಕ ಒಕ್ಕಲೆಬ್ಬಿಸುವಿಕೆ ವಿರುದ್ಧ ಗೇಣಿದಾರರಿಗೆ ಕೆಲವು ಕಾನೂನು ರಕ್ಷಣೆಯ ಅವಕಾಶ ಸಿಕ್ಕಿತ್ತು. ಈ ಸೌಲಭ್ಯಗಳು ವಾಸ್ತವಿಕವಾಗಿ ಗೇಣಿದಾರರಿಗೆ ದಕ್ಕಿರಲಿಲ್ಲ. ಹೀಗಾಗಿ ಕಾನೂನು ಹೋರಾಟ ಮತ್ತು ಕಾನೂನೇತರ ಹೋರಾಟಗಳು ಆರಂಭವಾಗಿ ತೀರ್ಥಹಳ್ಳಿಯ ಹೋರಾಟ ಮುಂಚೂಣಿಗೆ ಬಂತು.

ನಾನು 57–58 ರಲ್ಲಿ ಪಿ.ಯು.ಸಿ. ಓದುತ್ತಿದ್ದೆ. ನಮ್ಮ ಅಣ್ಣ ಸತ್ಯ ನಾರಾಯಣ ಕಮ್ಯೂನಿಸ್ಟ್ ಸಾಹಿತ್ಯ– ಪುಸ್ತಕಗಳನ್ನು ಓದುತ್ತಿದ್ದರು. ಪಕ್ಷದ ಪೂರ್ಣಾವಧಿ ಕಾರ್ಯಕರ್ತರಾಗಿದ್ದರು. ನಾನು ಬಿಎಸ್‌ಸಿಗೆಂದು ಸಹ್ಯಾದ್ರಿ ಪದವಿ ಕಾಲೇಜಿಗೆ ಸೇರಿದ ತತ್‌ಕ್ಷಣ ಎಐಎಸ್‌ಎಫ್–ವಿದ್ಯಾರ್ಥಿ ಸಂಘಟನೆ ಶುರುಮಾಡಿದೆವು. ಕಕ್ಕಿಲ್ಲಾಯ, ಎನ್.ಎಲ್. ಉಪಾಧ್ಯಾಯ, ನಂತರ ಎಂ.ಎಚ್.ಕೃಷ್ಣಪ್ಪ ಮುಂತಾದವರು ಬರುತ್ತಿದ್ದರು. ಅಮೇರಿಕದ ಸಾಮ್ರಾಜ್ಯಶಾಹಿ ಆಕ್ರಮಣಗಳ ವಿರುದ್ಧ ವಿದ್ಯಾರ್ಥಿಗಳ ದೊಡ್ಡ ಚಳುವಳಿ ನಡೆದವು. ಶಿವಮೊಗ್ಗದಲ್ಲಿ ಕೋ–ಟೆ ರಸ್ತೆಯಲ್ಲಿ ಎಐಎಸ್‌ಎಫ್‌ನಿಂದ ಒಂದು ಲೈಬ್ರರಿಯನ್ನು ಆರಂಭಿಸಿದ್ದೆವು. ಅದರ ಎದುರು ನಿರಂತರವಾಗಿ ಪ್ರತಿಭಟನೆಗಳು ನಡೆಯುತ್ತಿದ್ದವು. ಯುದ್ಧವಿರೋಧಿ ಶಾಂತಿ ಚಳುವಳಿ ನಡೆಯುತ್ತಿತ್ತು. ಮುಖಂಡರಾದ ಮಂಡಲ್ ಅವರು ಶಿವಮೊಗ್ಗಕ್ಕೆ ಬಂದಿದ್ದರು. 1959 ರಲ್ಲಿ ಕೇರಳದ ಇಎಂಎಸ್ ಸರ್ಕಾರವನ್ನು ಕೇಂದ್ರ ಕಾಂಗ್ರೆಸ್ ಸರ್ಕಾರ ವಜಾ ಮಾಡಿದಾಗ ಆದಾಗ ಅದನ್ನು ಖಂಡಿಸಿ ಎಐಎಸ್‌ಎಫ್‌ನಿಂದ ಪ್ರತಿಭಟನೆ ನಡೆಸಿದ್ದೆವು.

ಶಿವಮೊಗ್ಗದ ಪುರಭವನದಲ್ಲಿ ಪ್ರತಿಭಟನಾ ಸಭೆ ಸಂಘಟಿಲಾಗಿತ್ತು. ಡಿ.ಪಿ. ಒಡೆ–ಯರ್ ಸೇರಿದಂತೆ ವಕೀಲರು, ಪತ್ರಕರ್ತರು, ಊರಿನ ಗಣ್ಯರು ಸುಮಾರು 300–400 ಜನ ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

ತೀರ್ಥಹಳ್ಳಿಯಲ್ಲಿ 1958ರ ಸುಮಾರಿನಲ್ಲಿ ಅಪ್ಪಣ್ಣ ಹೆಗಡೆ ತಾಲ್ಲೂಕು ಬೋರ್ಡ್ ಚುನಾವಣೆಗೆ ನಿಂತು ಒಮ್ಮೆ ಕಸಬ ಕ್ಷೇತ್ರದಿಂದ ಮತ್ತೊಮ್ಮೆ ಆಗುಂಬೆ ಕ್ಷೇತ್ರದಿಂದ ಗೆದ್ದರು. ನಾನು ಪದವಿ ಮುಗಿಸಿ ಕಾನೂನು ಕಲಿಯಲು ಬೆಂಗಳೂರಿಗೆ ಬಂದೆ. ನನಗೆ ಕಮ್ಯೂನಿಸ್ಟ್ ಪಕ್ಷದ ನಿರಂತರ, ಸಕ್ರಿಯ ಒಡನಾಟವಿತ್ತು. ಅಲ್ಲಿಯೂ ವಿದ್ಯಾರ್ಥಿ ಚಳುವಳಿಯಲ್ಲಿ ಪಾಲ್ಗೊಂಡೆ. ನಂತರ 66–67 ರಲ್ಲಿ ಪಕ್ಷದ ಪೂರ್ಣಾವಧಿ ಕಾರ್ಯಕರ್ತನಾದೆ. ಪಕ್ಷ ನನಗೆ ರೈತರಂಗದಲ್ಲಿ ಜವಾಬ್ದಾರಿ ಕೊಟ್ಟು ತೀರ್ಥಹಳ್ಳಿಗೆ ಕಳುಹಿಸಿತು. ನಾನು ಪ್ರಾಂತ ರೈತ ಸಂಘದ ತೀರ್ಥಹಳ್ಳಿ ತಾಲ್ಲೂಕು



ಕಾರ್ಯದರ್ಶಿಯಾಗಿ ಆಯ್ಕೆಯ
ಕರ್ನಾಟಕ ಪ್ರಾಂತ ರೈತಸಂಘಕ್ಕೆ ಎಂ.
ಕೃಷ್ಣಪ್ಪ ಪ್ರಾಂತ ಪ್ರಧಾನ ಕಾರ್ಯದ
ನಾನು, ಎಚ್.ಎಸ್. ರಾಮರ
ಕಾರ್ಯದರ್ಶಿಗಳು. ಗೇಣಿದಾ
ಸಮಸ್ಯೆ ತೀವ್ರವಾಗುತ್ತಿದ್ದವು. ಆದ್ದ
ತುಂಬಾ ಸಂಘರ್ಷಾತ್ಮಕ ಹೋರಾಟ
ಮೂಡಿಬಂದವು.

ಈ ನಡುವೆ ಶಿವಮೊಗ್ಗದಲ್ಲಿ ಒಮ್ಮೆ
ರಾಜ್ಯಮಟ್ಟದ ಶಾಲೆಯನ್ನು ಸಂಘಟಿಸಲಾ
ಒಂದು ವಾರಗಳ ಕಾಲ ಇಎಂ
ಅವರು ಶಾಲೆಯಲ್ಲಿದ್ದು ಪಾಠಗ
ನಡೆಸಿಕೊಟ್ಟಿದ್ದರು. ಆಗ ಶಿವಮೊ
(ಹಳೇ)ಮಾರುಕಟ್ಟೆ ಸಮೀಪದಲ್ಲಿ
ಮನೆ ಇತ್ತು. ಅದಕ್ಕೆ ಹೊಂದಿಕೊಂಡ
ನಮ್ಮದೇ ಜಾಗದಲ್ಲಿ ಪಕ್ಷದ ಕಚೇರಿ
ಶಾಲೆ ಅಲ್ಲಿಯೇ ನಡೆಯಿತು. ಇಎಂ
ಅವರಿಗೆ ಶಿವಮೊಗ್ಗದಲ್ಲಿ ಪೌರ ಸ
ಸಹ ಸಂಘಟಿಸಲಾಗಿತ್ತು. ಇಎಂಎಸ್ ಬ
ಕೌನ್ಸಿಲ್‌ನಲ್ಲಿ ಸಹ ಮಾತನಾಡಿದ್ದರು.

### 'ಉಳುಮೆ'ಯ ಚಳುವಳಿ ಹಾಗೂ ಅಡಿಕೆ ಗೊನೆ ಮೆರವಣಿಗೆ

ಆಗುಂಬೆ ಸಮೀಪ ಕೆಂದಾಳಬಯ
ಹತ್ತಿರ ಕುಂದ ಅಂತ. ರೈತರು–ಅ
ಮತ್ತು ಇನ್ನೊಬ್ಬರು. ಭೂಮಾಲಿಕರು
ಗೇಣಿ ಬಿಡಿಸಿಬಿಟ್ಟಿದ್ದರು. ರೈತಸಂ
ಮುಖಂಡತ್ವದಲ್ಲಿ ಆತನಿಗೆ ರಕ್ಷಣೆಕೊ
ಭೂಮಾಲಕರ ದಬ್ಬಾಳಿಕೆ ವಿರುದ್ಧ
ಮಾಡಿ ಬಲವಂತವಾಗಿ ಉಳುವುದೇ
ತೀರ್ಮಾನವಾಯಿತು. ಮೊದಲು ನಾ
ಉತ್ತೆವು. ಆಮೇಲೆ ರೈತರಿಗೆ ಧೈರ್ಯ ಬ
ಅವರು ಉಳುಮೆ ಮುಂದುವರಿಸಿದರು.

ಮತ್ತೊಂದು ಪ್ರಕರಣ
ಭೂಮಾಲಿಕರು ಗೇಣಿದಾರರಿಂದ ತೋ
ಬಿಡಿಸಿ ತೋಟ ಕಾಯಲು ಗೂರ್ಖನ
ಇಟ್ಟಿದ್ದರು. ಗೇಣಿದಾರರರು ಹೆದರುತ್ತಿದ್ದ
ರೈತಸಂಘದಿಂದ ಜನರನ್ನು ಸೇರಿಸಿ ಧೈರ
ತುಂಬಿದೆವು. ಭೂಮಾಲಿಕರ ಪರ
ಅಡ್ಡಬಂದ 3–4 ಜನರನ್ನು ನಾನು ದ
ತಳ್ಳಿ ಓಡಿಸಿದೆ. ತೋಟದಿಂದ ಅಡಿ
ಕಿತ್ತುಕೊಂಡು ಬಂದು ಗೇಣಿದಾರರ ಮ
ಹಾಕಿದೆವು. ಭೂಮಾಲೀಕರ ಪರ
ಪೋಲಿಸನನ್ನು ಕಳುಸಹಿಲಾಯಿತು.
ಬಂದ. ಗೊನೆಯನ್ನು ಎತ್ತಿಕೊ
ಪೊಲೀಸ್ ಸ್ಟೇಷನ್‌ಗೆ ತಂದ. ಪೋಲಿ
ರೈತರ ವಿರುದ್ಧ ಕೇಸ್ ಮಾಡಿದರು. ನ
ಬಿಡಲಿಲ್ಲ. ಐಜಿಗೆ ದೂರು ಕೊಟ್ಟೆವು.

ಹೋರಾಟಕ್ಕೆ ಯಶಸ್ಸು ಸಿಕ್ಕಿತು. ಆಮ
ಆ ಅಡಿಕೆ ಗೊನೆಯನ್ನು ಮೆರವಣಿಗೆ
ವಾಪಸ್ ಊರಿಗೆ ತೆಗೆದುಕೊಂಡು ಹೋದ
ಊರಿನ ಜನರೆಲ್ಲ ಸೇರಿದ್ದರು. ಗೇಣಿ
ಹಕ್ಕು ಉಳಿಯಿತು.

### ತೀರ್ಥಹಳ್ಳಿ ಪೋಲಿಸ್ ಠಾಣೆಯ ಮೆ ಕೆಂಪು ಬಾವುಟ

ಅದು ತೀರ್ಥಹಳ್ಳಿ ತಾಲ್ಲೂಕಿನ ಮುತ್ತು
ಹೋಬಳಿಯ ರೈತರ ಪ್ರಶ್ನೆ. ಅಪ್ಪಣ್ಣ
ಈ ಸಂಬಂಧ ಕೇಸ್ ನಡೆಸಿ ಭೂಮಾಲ
ವಿರುದ್ಧ ತಡೆಯಾಜ್ಞೆ ಕೊಡಿಸಿದ್ದ

ಪುಟ 1

ಜನಶಕ್ತಿ
ಕನ್ನಡ ವಾರಪತ್ರಿಕೆ

# ಕೊಳೆ ರೋಗ ಮತ್ತು ಎಲೆ ಹಳದಿ ರೋಗದಿಂದ ಬಾಧಿತ ಅಡಿಕೆ ಬೆಳೆಗಾರರಿಗೆ ಯೋಗ್ಯ ಪರಿಹಾರ ನೀಡಲು ಒತ್ತಾಯ.

ಕೆ.ಆರ್.ಶ್ರೀಯಾನ್.

...ದ ಕೆಲವು ವರುಷಗಳಿಂದ ಕೇಂದ್ರ ಹಾಗೂ ...್ಯ ಸರಕಾರಗಳು ಅನುಸರಿಸುತ್ತಿರುವ ಕೃಷಿ ...ಯಿಂದಾಗಿ ರೈತರು ಭಾರೀ ಸಂಕಷ್ಟಗಳನ್ನು ...ಭವಿಸುತ್ತಿದ್ದಾರೆ. ಕೃಷಿ ಉತ್ಪನ್ನಗಳಿಗೆ ...ದಾಯಕ ಬೆಲೆಯಿಲ್ಲದೆ, ಮಾಡಿರುವ ...ಗಳನ್ನು ಸಂದಾಯ ಮಾಡಲಾರದೆ ...ಟಕವನ್ನೂ ಒಳಗೊಂಡು ದೇಶದ ...ೇಕ ರಾಜ್ಯಗಳಲ್ಲಿ ರೈತರು ಆತ್ಮಹತ್ಯೆಗೆ ...ಕಾಗುತ್ತಿರುವುದು ದುಃಖದ ವಿಷಯ. ...ಕ್ಕೆ ಅನ್ನ ಮತ್ತು ಕೈಗಾರಿಕೆಗಳಿಗೆ ಕಚ್ಚಾ ...ಗಳನ್ನು ಕೊಡುವ ರೈತರ ಪರಿಸ್ಥಿತಿ ...ಂತ್ರ್ಯ ಸಿಕ್ಕಿ 66 ವರ್ಷಗಳು ಕಳೆದರೂ ...ೇನೂ ಸುಧಾರಿಸಲಿಲ್ಲ. ಮಾತ್ರವಲ್ಲ ಅವರು ...ಲ್ಲಾ ಸಮಸ್ಯೆಗಳಿಗೆ ಬಲಿಯಾಗುತ್ತಿದ್ದಾರೆ ...ದು ಗಂಭೀರವಾಗಿ ಚಿಂತಿಸಬೇಕಾದ ...ಯ.

ಕರ್ನಾಟಕದ ಕರಾವಳಿ ಜಿಲ್ಲೆಗಳಾದ ದಕ್ಷಿಣ ...ಡ, ಉಡುಪಿ, ಉತ್ತರ ಕನ್ನಡ ಅಲ್ಲದೆ ...ಡಗು, ಶಿವಮೊಗ್ಗ, ಚಿಕ್ಕಮಗಳೂರು, ...ುಕೂರು, ದಾವಣಗೆರೆ, ಚಿತ್ರದುರ್ಗ ...ಗಳಲ್ಲಿ ಅಡಿಕೆ ಮತ್ತು ತೆಂಗು ಬೆಳೆಗಳು ...ಾನವಾದ ವಾಣಿಜ್ಯ ಬೆಳೆಗಳು. ಈ ...ಗಳು ಈ ಜಿಲ್ಲೆಗಳ ಅರ್ಥ ವ್ಯವಸ್ಥೆಯ ...ನಾಡಿಯಂತಿವೆ. ಇದನ್ನೇ ನಂಬಿಕೊಂಡು ...ಂತರ ಕುಟುಂಬಗಳು ಬದುಕುತ್ತಿವೆ. ಈ ...ಯ ಅಭಿವೃದ್ಧಿಗಾಗಿ, ಆಧುನಿಕ ರೀತಿಯ ...ಾಗಿ ಲಕ್ಷಾಂತರ ರೂಪಾಯಿ ಖರ್ಚು ...ಡಿದ್ದಾರೆ. ಅದಕ್ಕಾಗಿ ಬ್ಯಾಂಕ್, ಸಹಕಾರಿ ...ಘಗಳಲ್ಲಿ ಸಾಲ ಪಡೆದು ಕೊಂಡಿದ್ದಾರೆ. ...ವು ವರುಷಗಳ ಹಿಂದೆ ಈ ಬೆಳೆಗಳಿಗೆ ...ತ್ತಮ ಬೆಲೆ ಸಿಗುತ್ತಿತ್ತು. ಇದರಿಂದ ...ುತ್ಸಾಹಗೊಂಡ ರೈತರು ಈ ಬೆಳೆಗಳಿಗೆ ...ೀಡಿ ಇದ್ದ ತೋಟಗಳನ್ನು ಅಭಿವೃದ್ಧಿ ...ಸಿ, ಹೊಸ ತೋಟಗಳನ್ನು ಮಾಡಿ ...ಾರಗೊಳಿಸಿದ್ದಾರೆ.

ಭಾರತ ದೇಶದಲ್ಲಿ ಆಗುತ್ತಿರುವ ಅಡಿಕೆ ...ತ್ಪಾದನೆಯ ಬಗ್ಗೆ ಹೇಳುವುದಿದ್ದರೆ 2009–...ರ ಅಂಕಿ ಅಂಶದ ಪ್ರಕಾರ 4004.04 ...ವಿರ ಹೆಕ್ಟೇರ್ ಪ್ರದೇಶದಲ್ಲಿ 489 ಸಾವಿರ ...್ ಅಡಿಕೆ ಉತ್ಪಾದನೆ ಹಾಗೂ ಹೆಕ್ಟೇರ್ ...ಂದರ ಸರಾಸರಿ ಇಳುವರಿ 1222 ಕೆ.ಜಿ. ...ುತ್ತದೆ.

ಕರ್ನಾಟಕ ರಾಜ್ಯದಲ್ಲಿ 184.52 ಸಾವಿರ ...ಕ್ಟೇರ್ ಪ್ರದೇಶದಲ್ಲಿ 240 ಸಾವಿರ ಟನ್ ...ತ್ಪಾದನೆ ಹಾಗೂ ಹೆಕ್ಟೇರ್ ಒಂದರ ...ಾಸರಿ ಇಳುವರಿ 1300 ಕೆ.ಜಿ. ಹೊಂದಿದೆ. ...ಗೂ ದೇಶದ ಉತ್ಪಾದನೆಯಲ್ಲಿ 48.58% ...ತ್ಪಾದಿಸುತ್ತದೆ.

...ಳ ರಾಜ್ಯವೂ 97.17 ಸಾವಿರ ಹೆಕ್ಟೇರ್ ...ದೇಶದಲ್ಲಿ 112.11 ಸಾವಿರ ಟನ್ ಅಡಿಕೆ ...ತ್ಪಾದನೆಯನ್ನು ಹೊಂದಿದ್ದು ಹೆಕ್ಟೇರ್ ...ಂದರ ಸರಾಸರಿ ಇಳುವರಿ 1154 ಕೆ.ಜಿ. ಇಳುವರಿಯನ್ನು ಹೊಂದಿದೆ. ದೇಶದ ಉತ್ಪಾದನೆಯ 22.67% ಉತ್ಪಾದಿಸುತ್ತದೆ.



ರೈತರು ಈ ವಾಣಿಜ್ಯ ಬೆಳೆ ಬೆಳೆಸಲು ದುಬಾರಿ ಖರ್ಚು ಮಾಡಿದರೂ ಅದಕ್ಕೆ ಉತ್ತಮ ಬೆಲೆ ಸಿಗುತ್ತದೆ ಎಂಬ ಧೈರ್ಯ ಈ ಬೆಳೆಗಾರರಲ್ಲಿ ಇತ್ತು. ಯಾಕೆಂದರೆ 10–12 ವರ್ಷಗಳ ಹಿಂದೆ ಅಡಿಕೆಗೆ ಸಾಧಾರಣ ಒಳ್ಳೆಯ ಬೆಲೆ ಸಿಗುತ್ತಿತ್ತು. ಒಂದು ಕಿಲೋ ಒಣಗಿದ ಬಿಳಿ ಅಡಿಕೆಗೆ (ಚಾಲಿ) ರೂ.150 ರಿಂದ 200 ರೂ. ವರೆಗೂ ಬೆಲೆ ಸಿಗುತ್ತಿತ್ತು. ಇದರಿಂದಾಗಿ ಸಾಧಾರಣ ನೆಮ್ಮದಿ ಸಿಗುತ್ತಿತ್ತು. ಬ್ಯಾಂಕ್ ಮತ್ತು ಸೊಸೈಟಿಗಳಿಂದ ಪಡೆದ ಸಾಲಗಳನ್ನು ಸಂದಾಯ ಮಾಡಲು ಆಗುತ್ತಿತ್ತು. ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ಅಂದು ಹುರುಪಿನ ವಾತಾವರಣ ಎದ್ದು ಕಾಣುತ್ತಿತ್ತು. ರೈತರು ಸುಲಿದ ಅಡಿಕೆಯನ್ನು ಲಾರಿಗಳಲ್ಲಿ, ಟೆಂಪೋಗಳಲ್ಲಿ ತುಂಬಿಸಿಕೊಂಡು ಮಂಗಳೂರು ಹಳೇ ಬಂದರಿಗೆ ಬರುತ್ತಿದ್ದರು. ನಾಲ್ಕೆಸೆಗಳಿಂದ, ಹಳ್ಳಿಗಳಿಂದ ಬರುವ ಅಡಿಕೆ ತುಂಬಿದ ವಾಹನಗಳು, ಅದನ್ನು ತರುವ ರೈತರು ಸಹಕಾರಿ ಸಂಸ್ಥೆಗೆ ಹಾಗೂ ಇತರ ಖಾಸಗೀ ಏಜನ್ಸಿದಾರರಿಗೆ ಮಾರಾಟ ಮಾಡುತ್ತಿದ್ದರು. ಮತ್ತು ತಮಗೆ ಬೇಕಾದ ಸಾಮಾಗ್ರಿಗಳನ್ನು ಖರೀದಿ ಮಾಡಿ ತಾವು ಬಂದ ವಾಹನಗಳಲ್ಲೇ ಹಿಂದಿರುಗುತ್ತಿದ್ದರು. ರೈತರಲ್ಲಿ ಲವಲವಿಕೆಯ ವಾತಾವರಣವಿತ್ತು.

ಆದರೆ ಇಂದು ಇಂತಹ ವಾತಾವರಣ ಹಳ್ಳಿಗಳಲ್ಲೂ ಇಲ್ಲ. ಮಂಗಳೂರಿನ ವ್ಯಾಪಾರ ಕೇಂದ್ರವಾದ ಬಂದರಿನಲ್ಲೂ ಇಲ್ಲ. ಕಳೆದ 10–12 ವರ್ಷಗಳಿಂದ ಅಡಿಕೆ ಬೆಲೆಗಳು ಕುಸಿಯುತ್ತಾ ಬಂದಿವೆ. ಕಿಲೋ 1ಕ್ಕೆ 50–60 ಕ್ಕೆ ಕುಸಿದಿತ್ತು. ಇದರಿಂದಾಗಿ ಸಾವಿರಾರು ರೈತ ಕುಟುಂಬಗಳು ಕಂಗಾಲಾಗಿವೆ. ತಮ್ಮ ಜೀವನ ನಿರ್ವಹಣೆ , ಕೃಷಿ ಕೆಲಸಗಳನ್ನು ನಡೆಸುವುದು, ಮಾಡಿದ ಸಾಲಗಳನ್ನು ಸಂದಾಯ ಮಾಡುವುದು ಇತ್ಯಾದಿ ಸಮಸ್ಯೆಗಳು ರೈತರ ಮುಂದೆ ಬಂದಿವೆ. ಅದೇ ವೇಳೆ ಕೃಷಿ ಸಲಕರಣೆಗಳು , ಗೊಬ್ಬರ, ಕ್ರಿಮಿನಾಶಕ ಇತ್ಯಾದಿಗಳಿಗೆ ಕೇಂದ್ರ ಸರಕಾರ ಕೊಡುವ ಸಬ್ಸಿಡಿಗಳು ಕೃಷಿಕರಿಗೆ ಇಲ್ಲವಾಗಿದೆ. ಇದರಿಂದಾಗಿ ಎಲ್ಲಾ ವಸ್ತುಗಳ ಬೆಲೆಗಳು ಗಗನಕ್ಕೇರಿವೆ. ಆಗಿಂದಾಗ್ಗೆ ಡೀಸೆಲ್, ಪೆಟ್ರೋಲ್ ಬೆಲೆ ಏರಿಸುವ ಸರಕಾರದ ಧೋರಣೆಯಿಂದಾಗಿ ಕೃಷಿ ಕಾರ್ಯದ ಎಲ್ಲಾ ವೆಚ್ಚಗಳೂ ಹೆಚ್ಚುತ್ತಾ ಹೋಗಿವೆ. ವೆಚ್ಚಕ್ಕೆ ತಕ್ಕ ಬೆಲೆ ಅಡಿಕೆಗೆ ಸಿಗುತ್ತಿಲ್ಲ. ಇದರ ಪರಿಣಾಮವಾಗಿ ಕೃಷಿ ಕೂಲಿಗಾರರಿಗೂ ಕೆಲಸ ಕಡಿಮೆಯಾಗಿ ಅವರ ಜೀವನವೂ ಸಂಕಷ್ಟದಲ್ಲಿದೆ.

ಕಳೆದ 10 ವರುಷಗಳಿಂದಲೂ ಅಡಿಕೆ ಬೆಳೆಗಾರರು ಬೆಂಬಲ ಬೆಲೆ ನೀಡಲು ಸರಕಾರವನ್ನು ಒತ್ತಾಯಿಸುತ್ತಾ ಬಂದಿದ್ದಾರೆ. ಉತ್ಪಾದನಾ ವೆಚ್ಚದ ಒಂದೂವರೆ ಪಟ್ಟು ಇರುವಂತೆ ಬೆಂಬಲ ಬೆಲೆ ಘೋಷಿಸಬೇಕೆಂದು ಕೇಂದ್ರ ಸರಕಾರವೇ ನೇಮಿಸಿದ ಡಾ|ಎಮ್.ಎಸ್.ಸ್ವಾಮಿನಾಥನ್ ಸಮಿತಿ ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಿದ್ದರೂ ಸರಕಾರ ಸದ್ರಿ ಶಿಫಾರಸುಗಳನ್ನು ಕಡೆಗಣಿಸಿದೆ. ಅಡಿಕೆ ಬೆಳೆಯ ಕುರಿತು ಕೇಂದ್ರ ಸರಕಾರ 2003 ರಲ್ಲಿ ನೇಮಿಸಿದ ಡಾ|ಗೋರಖ್ ಸಿಂಗ್ ವರದಿಯನ್ನೂ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಅನುಷ್ಠಾನಗೊಳಿಸಿಲ್ಲ ಬದಲು ಜಾಗತೀಕರಣದ ನಂತರದ ದಿನಗಳಲ್ಲಿ ಕೇಂದ್ರ ಸರಕಾರವು ಮಾಡಿಕೊಂಡ ವಿಶ್ವ ವ್ಯಾಪಾರ ಸಂಘಟನೆಯ ಒಪ್ಪಂದದ ಷರತ್ತು ಪ್ರಕಾರ ವಿದೇಶಗಳಿಂದ ಆಮದು ಮಾಡಲು ಅವಕಾಶ ನೀಡಿದೆ. ಹಲವಾರು ಒಪ್ಪಂದಗಳನ್ನು ಮಾಡಿಕೊಂಡಿದೆ. ಆಸಿಯಾನ್ ಇತ್ಯಾದಿ ಒಪ್ಪಂದಗಳಿಂದಾಗಿ ಇತರ ವಾಣಿಜ್ಯ ಉತ್ಪನ್ನಗಳೊಂದಿಗೆ ಅಡಿಕೆಯೂ ಆಮದಾಗುತ್ತಿದ್ದು ದೇಶೀಯ ಅಡಿಕೆಗೆ ಸರಿಯಾದ ಧಾರಣೆ ಇಲ್ಲವಾಗಿದೆ. ವಿದೇಶಗಳಿಂದ ಈಗಾಗಲೇ ಕೃಷಿ ಉತ್ಪನ್ನಗಳು ದೇಶದ ಮಾರುಕಟ್ಟೆಗೆ ಬಂದು ಬಿದ್ದಿವೆ. ಇವುಗಳನ್ನೇ ಬೆಳೆಯುವ ನಮ್ಮ ರೈತರು ತಮ್ಮ ಉತ್ಪನ್ನಗಳನ್ನು ಎಲ್ಲಿ ಮಾರಾಟ ಮಾಡಬೇಕು? ಇವು ರೈತರನ್ನು ಕಾಡುವ ಪ್ರಶ್ನೆಗಳು.

**ಅಡಿಕೆ ಬೆಳೆಗೆ ಸ್ಥಿರವಾದ ಬೆಲೆ ಸಿಗದಿದ್ದರೆ ಬೆಳೆಗಾರರ ಬದುಕು ದುಸ್ತರವಾಗುತ್ತದೆ.**

ಅಡಿಕೆಗೆ ವೈಜ್ಞಾನಿಕ ರೀತಿಯಲ್ಲಿ ಬೆಲೆ ನಿಗದಿಯಾಗಬೇಕು. ಅದು ಉತ್ಪಾದನಾ ವೆಚ್ಚದ ಒಂದೂವರೆ ಪಾಲಿನಷ್ಟು ಇರಬೇಕು ಎಂಬ ತಜ್ಞರ ವರದಿಯಲ್ಲಿ ನ್ಯಾಯವಿದೆ. ಭಾರತ ಸರಕಾರ ಹಾಗೂ ರಾಜ್ಯ ಸರಕಾರಗಳು ಬೆಳೆಗಾರರಿಗೆ ಪೂರಕವಾದಂತಹ ಯಾವುದೇ ಯೋಜನೆಗಳನ್ನು ಅನುಷ್ಠಾನಕ್ಕೆ ತರದೇ ಇರುವುದು ಅಡಿಕೆ ಬೆಳೆಗಾರರ ಅಳಿವು ಉಳಿವಿನ ಪ್ರಶ್ನೆಯಾಗಿದೆ. ಇದೀಗ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಂತೆ ಹಲವಾರು ರಾಜ್ಯ ಸರಕಾರಗಳು ಗುಟ್ಕಾ ನಿಷೇಧ ಮಾಡಿರುವುದೂ ಅಡಿಕೆ ಉತ್ಪಾದನೆ ಮತ್ತು ಮಾರುಕಟ್ಟೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ.

ಒಂದು ದಶಕಕ್ಕಿಂತಲೂ ಹೆಚ್ಚಿನ ಕಾಲದಲ್ಲಿ ಅಡಿಕೆ ಮಾರುಕಟ್ಟೆ ಪಾತಾಳಕ್ಕೆ ಕುಸಿದಿದ್ದು ರೈತರು ಕಂಗಾಲಾಗಿರುವಾಗಲೇ ಕಳೆದ ಕೆಲವು ವರುಷಗಳಲ್ಲಿ ಅಡಿಕೆಗೆ ಕೊಳೆ ರೋಗ, ಅಡಿಕೆ ಎಲೆ ಹಳದಿ ರೋಗದಿಂದ ಹಲವಾರು ಸಾವಿರ ಹೆಕ್ಟೇರ್ ಅಡಿಕೆ ತೋಟಗಳು ನಾಶವಾಗಿವೆ.

ಈ ವರ್ಷ ಅತಿವೃಷ್ಟಿಯಿಂದಾಗಿ ಅಡಿಕೆ ಬೆಳೆಗೆ ಕೊಳೆರೋಗ ಉಂಟಾಗಿದ್ದು ಇದರಿಂದ ಸಾವಿರಾರು ಅಡಿಕೆ ಬೆಳೆಗಾರರು ತೀವ್ರ ಸಂಕಷ್ಟಕ್ಕೀಡಾಗಿದ್ದಾರೆ. ಅತಿವೃಷ್ಟಿಯಿಂದಾಗಿ 1800 ಕೋಟಿ ರೂಪಾಯಿ ಮೌಲ್ಯದ ಅಡಿಕೆ ಬೆಳೆ ನಾಶವಾಗಿದೆ. ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಕೊಡಗು, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಅತಿವೃಷ್ಟಿಯಿಂದ 60% ರಿಂದ 70% ಬೆಳೆ ನಾಶವಾಗಿ ಸುಮಾರು 1200 ಕೋಟಿ ರೂಪಾಯಿ ನಷ್ಟವಾಗಿದೆ.

ರಾಜ್ಯದಲ್ಲಿ ಮಳೆ ಬಾರದೆ ಅನಾವೃಷ್ಟಿಯಿಂದ ತುಮಕೂರು, ದಾವಣಗೆರೆ, ಚಿತ್ರದುರ್ಗ ಜಿಲ್ಲೆಗಳಲ್ಲಿ 25% ಬೆಳೆ ನಾಶವಾಗಿ ಸುಮಾರು 600 ಕೋಟಿ ರೂಪಾಯಿ ನಷ್ಟವಾಗಿದೆ ಎಂದು ಅಂದಾಜಿಸಲಾಗಿದೆ. ಇದರಿಂದಾಗಿ 1,60,428 ಅಡಿಕೆ ಬೆಳೆಗಾರರ ಕುಟುಂಬಗಳು ಸಂಕಷ್ಟಕ್ಕೀಡಾಗಿವೆ. ಒಟ್ಟು ಕರ್ನಾಟಕದಲ್ಲಿ 2,11,000 ಹೆಕ್ಟೇರ್ ಪ್ರದೇಶದಲ್ಲಿ 2,79,000 ಟನ್ ಅಡಿಕೆ ಉತ್ಪಾದನೆಯಾಗುತ್ತದೆ.

ಹೀಗೆ ಬೆಳೆ ನಾಶವಾಗಿ ಕಂಗಾಲಾದ ಅಡಿಕೆ ಬೆಳೆಗಾರರಿಗೆ ಸೂಕ್ತ ಪರಿಹಾರವನ್ನು ನೀಡಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘವು ಸರಕಾರವನ್ನು ಒತ್ತಾಯಿಸುತ್ತಾ ಬಂದಿದೆ. ಅಡಿಕೆ ಉತ್ಪನ್ನಗಳಿಗೆ ಸಂಬಂಧಿಸಿದಂತೆ ಗೋರಖ್ ಸಿಂಗ್ ವರದಿಯನ್ನು ಜಾರಿಗೊಳಿಸಬೇಕು, ಬ್ಯಾಂಕ್, ಸಹಕಾರಿ ಸಂಘಗಳ ಸಾಲ ಮನ್ನಾ ಮಾಡಬೇಕು ಹಾಗೂ ಗೊಬ್ಬರ, ಕ್ರಿಮಿನಾಶಕಗಳಿಗೆ, ಕೃಷಿ ಸಲಕರಣೆಗಳಿಗೆ ಸರಕಾರ ಸಬ್ಸಿಡಿಯನ್ನು ಮುಂದುವರೆಸಬೇಕು ಎಂದು ಕೇಂದ್ರ ರಾಜ್ಯ ಸರಕಾರಗಳನ್ನು ಕರ್ನಾಟಕ ಪ್ರಾಂತ ರೈತ ಸಂಘ ಒತ್ತಾಯಿಸುತ್ತಾ ಬಂದಿದೆ. ದಕ್ಷಿಣ ಕನ್ನಡದಲ್ಲಿ ತೆಂಗು ಮತ್ತು ಅಡಿಕೆ ಬೆಳೆಗಾರರ ಸಮಸ್ಯೆಗಳನ್ನೆತ್ತಿ ಕರ್ನಾಟಕ ಪ್ರಾಂತ ರೈತ ಸಂಘದ ದ.ಕ.ಜಿಲ್ಲಾ ಸಮಿತಿಯ ವತಿಯಿಂದ 1985 ರಿಂದಲೂ ಚಳುವಳಿ ನಡೆಸುತ್ತಾ ಬಂದಿದೆ. ಸಮಾವೇಶಗಳು, ಪ್ರಚಾರ ಚಳುವಳಿ, 24 ಗಂಟೆಗಳ ಧರಣಿ ಇತ್ಯಾದಿ ವಿವಿಧ ರೀತಿಯ ಚಳುವಳಿಗಳನ್ನು ನಡೆಸುತ್ತಾ ಬಂದಿದೆ. ತಾ.17.9.2013 ರಂದು ದ.ಕ. ಜಿಲ್ಲಾಧಿಕಾರಿಯವರ ಕಚೇರಿ ಎದುರು ಧರಣಿ ಸತ್ಯಾಗ್ರಹ ನಡೆದಿದೆ. ಅಡಿಕೆ ಬೆಳೆಗಾರರ

ಪುಟ 15 ಕ್ಕೆ

## ಶಿವಮೊಗ್ಗದ ಕಮ್ಯೂನಿಸ್ಟ್.....

ಪುಟ 10 ರಿಂದ

ಗೇಣಿದಾರರ ಪರ ತೀರ್ಥಹಳ್ಳಿಯಲ್ಲಿ ಸಭೆ ನಡೆಯಿತು. ಗೇಣಿದಾರ ರೈತರು ಭತ್ತ ಕೊಯ್ಲಿಗೆ ಹೋದರು. ಭೂಮಾಲೀಕರ ಪರ ಮಧ್ಯ ಪ್ರವೇಶಿಸಿದ ಪೋಲಿಸರು ಆ ರೈತರನ್ನು ಬಂಧಿಸಿ ಪೋಲಿಸ್ ಠಾಣೆಗೆ ತಂದರು. ಈ ಬಂಧನ ವಿರೋಧಿಸಿ ಗೇಣಿದಾರರ ಭೂಮಿ ಹಕ್ಕಿಗಾಗಿ ತೀರ್ಥಹಳ್ಳಿ ಪೋಲಿಸ್ ಸ್ಟೇಷನ್ ಮೆಟ್ಟಿಲ ಮೇಲೆ ಸತ್ಯಾಗ್ರಹ ಆರಂಭಿಸಿದೆವು. ತಮ್ಮೊಂದಿಗೆ ವಾಗ್ವಾದ ಮಾಡುತ್ತ ಮೈಮೇಲೆ ಬರುತ್ತಿದ್ದ ಪೋಲಿಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್‌ನನ್ನು ರೈತರು ಹಿಂದಕ್ಕೆ ದಬ್ಬಿದರು. ಪ್ರತಿಭಟನಾರ್ಥವಾಗಿ ಪೋಲಿಸ್ ಠಾಣೆಯ ಮೇಲೆ ಕೆಂಪು ಬಾವುಟ ಹಾರಿಸಲಾಯಿತು. ಆಗ ಗರುಡಾಚಾರ್ ಅವರು ಶಿವಮೊಗ್ಗ ಜಿಲ್ಲಾ ಎಸ್.ಪಿ. ಆಗಿದ್ದರು. ಈ ಎಲ್ಲ ಹೋರಾಟಗಳ ಫಲವಾಗಿ ರೈತರಿಗೆ ಗೇಣಿ ಹಕ್ಕು ಉಳಿಯಿತು. ನಂತರ ರೈತಸಂಘದ ಜಿಲ್ಲಾ ಸಮ್ಮೇಳನ ನಡೆಯಿತು. ಎ.ಕೆ. ಗೋಪಾಲನ್ ಬಂದಿದ್ದರು.

ತೀರ್ಥಹಳ್ಳಿ ತಾಲ್ಲೂಕಿನ ಸಾಲೂರು ಗ್ರಾಮದಲ್ಲಿ ಪ್ರಾಂತ ರೈತಸಂಘದ ರಾಜ್ಯಮಟ್ಟದ ತರಬೇತಿ ಶಾಲೆಯನ್ನು ಸಂಘಟಿಸಿದ್ದೆವು. ಎಂಟು ದಿನಗಳ ಈ ಶಾಲೆಯಲ್ಲಿ ನಾನಾ ಜಿಲ್ಲೆಗಳ 60–70 ಪ್ರತಿನಿಧಿಗಳು ಪಾಲ್ಗೊಂಡಿದ್ದರು.

ಭೂ ಸುಧಾರಣಾ ಕಾಯ್ದೆಗಾಗಿ ರಾಜ್ಯದಾದ್ಯಂತ ಚಳುವಳಿ ಬಲಗೊಂಡಿತು. ರೈತಸಂಘದಿಂದ ರಾಜ್ಯದ ರಾಜಧಾನಿಗೆ ಕಾಲ್ನಡಿಗೆ ಜಾಥಾಗಳನ್ನು ಸಂಘಟಿಸಲಾಗಿತ್ತು. ಮಂಗಳೂರಿನಿಂದ ಎಂ.ಎಚ್. ಕೃಷ್ಣಪ್ಪ, ಕೋಲಾರದಿಂದ ಎಚ್.ಎಸ್.ರಾಮರಾವ್, ಚಿತ್ರದುರ್ಗದಿಂದ ಹನುಮಂತರೆಡ್ಡಿಯವರ ನೇತೃತ್ವದಲ್ಲಿ ಜಾಥಾಗಳು ನಡೆದವು. ಈ ಚಳುವಳಿ ಸಂದರ್ಭದಲ್ಲಿ ಬೆಂಗಳೂರಿಗೆ ಪಿ.ರಾಮಮೂರ್ತಿ ಬಂದಿದ್ದರು ಎಂದು ನೆನಪು.

ಈ ಎಲ್ಲ ಒಟ್ಟು ಚಳುವಳಿಗಳ ಪರಿಣಾಮವಾಗಿ ವ್ಯಾಪಕವಾಗಿ ರೈತರ ಗೇಣಿ ಹಕ್ಕು ಉಳಿಯಿತು. ಆ ನಂತರ ಭೂಸುಧಾರಣಾ ಕಾಯ್ದೆ ಬಂತು. ಆ ಸಂದರ್ಭದಲ್ಲಿ ಸಹಸ್ರಾರು ರೈತರು ಅರ್ಜಿ ಹಾಕಿ ಭೂಮಿಯ ಮೇಲಿನ ಹಕ್ಕು ಪಡೆದರು. ಅಪ್ಪಣ್ಣ ಹೆಗಡೆ ವಕೀಲರಾಗಿ ಸಹ ಸಹಸ್ರಾರು ರೈತರ ಅರ್ಜಿ ತುಂಬಿಸಿಕೊಟ್ಟರು. ತಹಸೀಲ್ದಾರ್ ಕೋರ್ಟ್ ಹಾಗೂ ಟ್ರಿಬ್ಯೂನಲ್ ಕೋರ್ಟ್‌ಗಳಲ್ಲಿ ವಾದಿಸಿ ರೈತರಿಗೆ ಭೂಮಿ ಹಕ್ಕು ದೊರೆಯಲು ಶ್ರಮಿಸಿದರು.

**ಚುನಾವಣಾ ಹೋರಾಟ**

1972 ರ ವಿಧಾನಸಭಾ ಚುನಾವಣೆ. ತೀರ್ಥಹಳ್ಳಿ ಕ್ಷೇತ್ರದಿಂದ ಸಿಪಿಐ(ಎಂ) ಪಕ್ಷದ ಪರವಾಗಿ ಅಪ್ಪಣ್ಣ ಹೆಗಡೆ ಅಭ್ಯರ್ಥಿ. ಕಾಂಗ್ರೆಸ್‌ನಿಂದ ದಾನಮ್ಮ, ಸಮಾಜವಾದಿ ಪಕ್ಷದಿಂದ ಕೋಣಂದೂರು ಲಿಂಗಪ್ಪ. ಕೋಣಂದೂರಿನಲ್ಲಿ ಚುನಾವಣಾ ಪ್ರಚಾರದ ಉದ್ಘಾಟನೆಗೆ ಎ.ಕೆ. ಗೋಪಾಲನ್, ಸಮಾರೋಪಕ್ಕೆ ಇಎಂಎಸ್ ಬಂದಿದ್ದರು. ತಾಲ್ಲೂಕಿನ ಎಲ್ಲ ಕಡೆಯಿಂದ ದೊಡ್ಡ ಸಂಖ್ಯೆಯಲ್ಲಿ ಸಭೆಗೆ ಜನರು ಬಂದಿದ್ದರು. ನೂರಕ್ಕೂ ಹೆಚ್ಚಿನ ಎತ್ತಿನ ಬಂಡಿಗಳಲ್ಲಿ ಆಗುಂಬೆ ಕಡೆಯಿಂದ, ಮಂಡಗದ್ದೆ, ಹಾರಗದ್ದೆ ಮುಂತಾದ ಕಡೆಯಿಂದ ನಡೆದು-ಕೊಂಡು ಸಹ ಜನರು ಬಂದಿದ್ದರು. ತೀರ್ಥಹಳ್ಳಿಯಲ್ಲಿ ಎಲ್ಲಿ ನೋಡಿದರೂ ಕೆಂಪು ಬಾವುಟಗಳು ಹಾರಾಡುತ್ತಿದ್ದವು. ಸಭೆ ತುಂಬಾ ಉತ್ಸಾಹದಿಂದ ನಡೆಯಿತು. ಚುನಾವಣೆಯಲ್ಲಿ ಬಹುತೇಕ ಸಿಪಿಐ(ಎಂ) ಗೆಲ್ಲುತ್ತದೆ ಅಂತ ಜನ ಮಾತಾಡುತ್ತಿದ್ದರು.

ಇದನ್ನೆಲ್ಲಾ ನೋಡಿ ಪ್ರತಿಗಾಮಿಗಳೆಲ್ಲಾ ಒಂದಾದರು. ರೈತ ಸಂಘದ ಸಾಲೂರು ಶಾಲೆ ಸಂದರ್ಭದಲ್ಲಿ ಪ್ರತಿನಿಧಿಗಳಿಗೆ ಡ್ರಿಲ್ ಮಾಡಿಸಲಾಗುತ್ತಿತ್ತು. ಆಗ 'ನಕ್ಸಲ್‌ಬಾರಿ'ಯಲ್ಲಿ ಎಡ ದುಸ್ಸಾಹ ವಾದಿ ಚಳುವಳಿ ಭುಗಿಲೆದ್ದಿತ್ತು. ನಕ್ಸಲ್‌ವಾದದ ಕುರಿತು ವ್ಯಾಪಕ ಚರ್ಚೆಗಳು ಮತ್ತು ಅದರ ಆಧಾರದಲ್ಲಿ ಸಿಪಿಐ(ಎಂ) ಬಗ್ಗೆಯೂ ಗುಮಾನಿ ಮೂಡಿಸುವ ಅಪಪ್ರಚಾರ ನಡೆಯುತ್ತಿದ್ದವು. ಶಿವಮೊಗ್ಗದಲ್ಲಿಯೂ ಪತ್ರಿಕೆಗಳಲ್ಲಿ ಇಂತಹ ಪ್ರಚಾರಗಳು ನಡೆದಿದ್ದವು. ಚುನಾವಣೆಯ ಪ್ರಚಾರ, ಬಹಿರಂಗ ಸಭೆಯಲ್ಲಿ ಸೇರಿದ್ದ ಬಾರಿ ಜನ ಇವನ್ನೆಲ್ಲಾ ನೋಡಿ ಹೆದರಿದ ಪ್ರತಿಗಾಮಿಗಳು ಸಿಪಿಐ(ಎಂ) ಬಗ್ಗೆ ಒಳಗಿಂದೊಳಗೆ ಕೆಟ್ಟ ಪ್ರಚಾರಗಳನ್ನು ನಡೆಸಿದರು. ಗೆಲ್ಲುತ್ತದೆ ಎಂದು ನಿರೀಕ್ಷಿಸಲಾದ ನಮ್ಮ ಪಕ್ಷ ಸುಮಾರು ಒಂದು ಸಾವಿರ ಮತಗಳ ಅಂತರದಲ್ಲಿ ಸೋಲು ಅನುಭವಿಸಿತು. ನಮ್ಮ ಪಕ್ಷ ಮೂರನೇ ಸ್ಥಾನ ಗಳಿಸಿತು.


**ಜನಶಕ್ತಿ: ಬೆಂಗಳೂರಿನಲ್ಲಿ ಕಮ್ಯೂನಿಸ್ಟ್ ಪಕ್ಷ ಮತ್ತು ಚಳುವಳಿ ಅನುಭವದ ಕುರಿತು ಹೇಳಿ.**

1963–64 ರಲ್ಲಿ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು ತೀವ್ರಗೊಂಡು ಪಕ್ಷ ವಿಭಜನೆಯಾಯಿತು. ಈ ಅವಧಿಯಲ್ಲಿ ಸುಲ್ತಾನ್ ಪೇಟೆ ಆಫೀಸ್‌ನಲ್ಲಿ ನಾನು ಮತ್ತು ಕುಟ್ಟಪ್ಪ ಇರುತ್ತಿದ್ದೆವು.

ಎಂ.ಎಚ್. ಕೃಷ್ಣಪ್ಪ, ಸೂರಿ, ಎಚ್. ಎಸ್. ರಾಮರಾವ್ ಅವರು ಪಕ್ಷದೊಳಗಿನ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳ ಹಿನ್ನೆಲೆಯಲ್ಲಿ ನಡೆದ ತೆನಾಲಿ ಸಭೆಯಲ್ಲಿ ಪಾಲ್ಗೊಳ್ಳಲು ಹೋಗಿದ್ದರು.

1965 ರಲ್ಲಿ ಭಾರತ–ಪಾಕಿಸ್ತಾನ ಯುದ್ಧ ನಡೆಯಿತು. ಈ ಅವಧಿಯಲ್ಲಿ ಸರ್ಕಾರ ಕಮ್ಯೂನಿಸ್ಟರನ್ನು ಬಂಧಿಸಲು ಆರಂಭಿಸಿತು. ಕೃಷ್ಣಪ್ಪ ಭೂಗತರಾಗಿದ್ದರು. ಕುಟ್ಟಪ್ಪ ಹೊರಗೆ ಇದ್ದರು. ಪಕ್ಷದ ನಿಲುವು ವಿವರಿಸಲು ಒಂದು ಸಣ್ಣ ಸಮಿತಿ ಮಾಡಿದ್ದರು–ಎಲ್ಲ ಜಿಲ್ಲೆಗಳಿಗೆ ಪಕ್ಷದ ನೀತಿ ನಿಲುವು ವರದಿ ಮಾಡಲು. ಅದರಲ್ಲಿ ನನಗೆ ಸಹ ಜವಾಬ್ದಾರಿ ಕೊಟ್ಟಿದ್ದರು. ಆಗ ಮಾರುಕಟ್ಟೆ ಪ್ರದೇಶದ ಬಾಳೆಕಾಯಿ ಮಂಡಿಯಲ್ಲಿ ಎಐಟಿಯ ಆಫೀಸ್ ಇತ್ತು. ಅದನ್ನು 'ಸೂರಿ ಆಫೀ ಅಂತ ಕರೆಯುವುದೇ ರೂಢಿಯಲ್ಲಿತ್ತು. ಸ ಮೊದಲೇ ಅರೆಸ್ಟ್ ಆಗಿದ್ದರು. ರಾಮ ಅಂತ ವಕೀಲರು, ಎಲ್.ಆರ್. ಭೂತೆ ನ ಆಗಿನ ಜೊತೆಗಾರರು. ಈ ಇಬ್ಬರ ಅ ಆಗಿತ್ತು. ನನ್ನ ಮೇಲೆ ಸಹ ವಾರ ಇತ್ತು. ನನಗೆ ಗೊತ್ತಾಯಿತು. ನಾನು ಪ ನಿರ್ದೇಶನದಂತೆ ಭೂಗತನಾದೆ. ಆಮೆ ಶಿಕ್ಷಣದ ಮುಂದುವರಿಕೆ ದೃಷ್ಟಿಯಿಂದ ಪ ನಿರ್ದೇಶನದಂತೆ ನಾನು ಶರಣಾದೆ. ನಾ ತಿಂಗಳು ಸೆಂಟ್ರಲ್ ಜೈಲಿನಲ್ಲಿ ಇಟ್ಟಿದ್ದ ಎನ್. ಎಲ್. ಉಪಾಧ್ಯಾಯ, ಅಪ್ಪಸ್ವಾಮಿ ರ ರಾಮರಾವ್ ಮತ್ತು ಮುಸ್ಲಿಂ ಮುಖಂಡ ಜೈಲಿನಲ್ಲಿದ್ದರು. ನಾಲ್ಕು ತಿಂಗಳ ನಂ ನಮ್ಮನ್ನು ಬೇರೆ ಬೇರೆ ಜೈಲಿಗೆ ಹಾಕಿದ ಸೂರಿಯವರನ್ನು ಮೊದಲೇ ಗುಲ್ಬ ಜೈಲಿಗೆ ಕಳುಹಿಸಿದ್ದರು. ಆ ನಂತರ ನನ್ನ ಗುಲ್ಬರ್ಗ ಜೈಲಿಗೆ ಕಳಿಸಿದರು. ಅಲ್ಲಿ ಅ ತಿಂಗಳು. ನನ್ನ ತಾಯಿಗೆ ಹುಷಾರಿಲ್ಲದ್ದರಿಂ ನಾನು ಪೆರೋಲ್ ಮೇಲೆ ಹೊರಬಂ ಆಮೇಲೆ ಬಿಡುಗಡೆಯೂ ಆಯ್ತು

ಇದಕ್ಕೆ ಮೊದಲೇ ಕಾ ಸಂಘಟನೆಗಳ ಜ ಸಮಾವೇಶವೊಂದು ಬಾಂಬೆಯ ನಡೆದಿತ್ತು. ಅಲ್ಲಿಗೆ ನಾನು ಹೋಗಿ ಪಶ್ಚಿಮ ಬಂಗಾಲದ ಬಾಲಸೂರ್‌ನ ಕಿಸಾನ್ ಸಮ್ಮೇಳನ ನಡೆಯಿತು. ಅ ರೀತಿ ಪಂಜಾಬ್‌ಗೆ ಸಹ ಹೋಗಿ ಆ ನಂತರ ನನ್ನನ್ನು ಪಕ್ಷ ರೈತ ರಂಗದಲ್ಲಿ ಕೆಲಸ ಮಾಡ ತೀರ್ಥಹಳ್ಳಿಗೆ ಕಳಿಸಿದ್ದು.



## ಪೋಲೀಸರ ದಮನ ಎದುರಿಸಿ ವಿಯೆಟ್ನಾಂ ಹೋರಾಟಕ್ಕೆ ಬೆಂಬಲ

**ಜನಶಕ್ತಿ: ಬೆಂಗಳೂರಿನಲ್ಲಿದ್ದಾಗಿನ ವಿದ್ಯಾರ್ಥಿ ಚಳುವಳಿಯ ಅನುಭವಗಳನ್ನು ಹೇಳಿ.**

ನಾನು ಬೆಂಗಳೂರಿಗೆ ಬಂದಾಗ ಅಲ್ಲೂ ನನಗೆ ಸ್ನೇಹಿತರಿದ್ದರು. ಕೋಲಾರದ ಯುವಕರು. ಅವರ ಮೇಲೆ ಕಮ್ಯೂನಿಸ್ಟ್ ಪಕ್ಷದ ಪ್ರಭಾವವಿತ್ತು. ಡಾ. ಲಕ್ಷ್ಮಣ ರೆಡ್ಡಿ, ವೆಂಕಟರಾಮರೆಡ್ಡಿ ಸಹೋದರರು, ರಿಸರ್ವ ಬ್ಯಾಂಕ್ ಉದ್ಯೋಗಿ ಗುಣಶೀಲ, ಬಂಗಾಳಿ ಅನಿಲ ಕುಮಾರ್ ದತ್ ಮುಂತಾದವರು ಜೊತೆಗಾರರರಾಗಿದ್ದರು. ಬೆಂಗಳೂರಿನ ಎಂಟಿಆರ್ ಬಳಿ ಮಾವಳ್ಳಿಯಲ್ಲಿ ಒಂದು ಲೈಬ್ರರಿ ಮಾಡಿದ್ದೆವು.

ಆಗ ಕಂಠಿ ವಿದ್ಯಾಮಂತ್ರಿ ಆಗಿದ್ದರು. ನಿಜಲಿಂಗಪ್ಪ ಮುಖ್ಯಮಂತ್ರಿ. ಸರ್ಕಾರ ವಿವಿಧ ಶಿಕ್ಷಣ ಶುಲ್ಕಗಳನ್ನು ಹೆಚ್ಚಳ ಮಾಡಿತು. ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ (ಎಐಎಸ್‌ಎಫ್)ನಿಂದ ನಾವು ಕರಪತ್ರ ಹಾಕಿ ತೀವ್ರವಾದ ಚಳುವಳಿ ನಡೆಸಿದೆವು. ಚಳುವಳಿ ರಾಜ್ಯದ ತುಂಬ ಹರಡಿತು. ಕಾಲೇಜ್ ಬಂದ್, ಮೆರವಣಿಗೆ, ಸರದಿ ಉಪವಾಸ ನಡೆಯಿತು. ಈ ಹೋರಾಟ ಸುಮಾರು ಹದಿನೈದು ಇಪ್ಪತ್ತು ದಿನದವರೆಗೆ ನಡೆಯಿತು. ಕೊನೆಗೆ ಸರ್ಕಾರ ಶುಲ್ಕಗಳನ್ನು ಕಡಿಮೆ ಮಾಡಿತು.

**ಅಮೆರಿಕದ ಆಕ್ರಮಣದ ವಿರುದ್ಧ ವಿಯೆಟ್ನಾಂ ಹೋರಾಟಕ್ಕೆ ಬೆಂಬಲ**

ಆಗ ಜಾನ್‌ಸನ್– ಅಮೆರಿಕದ ಅಧ್ಯಕ್ಷನಾಗಿದ್ದ. ಕಮ್ಯೂನಿಸಂ ಹರಡುವುದನ್ನು ತಡೆಯುವ ಹೆಸರಿನಲ್ಲಿ ವಿಯೆಟ್ನಾಂ ದೇಶದ ಮೇಲೆ ಅಮೆರಿಕ ಕ್ರೂರ ಆಕ್ರಮಣ

**ಪೆಟ್ಟು ತಿಂದವರು**



ರಾಮರಾವ್

ಗುಣಶೀಲ

ಮಾಡುತ್ತಿತ್ತು. ಈ ಕ್ರೂರ ಸಾಮ್ರಾಜ್ಯಶಾಹಿ ದಾಳಿಯನ್ನು ಖಂಡಿಸಿ ವಿಯೆಟ್ನಾಂ ಸೌಹಾರ್ದ ಪಾರಾಚರಣೆ ಮಾಡಬೇಕೆಂದು, ವಿಯೆಟ್ನಾಂ ಹೋರಾಟಕ್ಕೆ ನಿಧಿ ಸಂಗ್ರ ಮಾಡಬೇಕೆಂದು ಎಐಎಸ್‌ಎಫ್‌ನಿಂದ ಇ ಪಾರಾಚರಣೆಯ ಕಡೆ ದಿನ ಮೆರವಣಿ ಇತ್ತು. ಆಗ ಬೆಂಗಳೂರಿನ ಕಾರ್ಪೋರೇಷ ಕಚೇರಿ ಎದುರು ಅಮೆರಿಕದ ರಾಯಭಾ ಕಚೇರಿ ಇತ್ತು. ಅಲ್ಲಿ ನಾವು ಅಮೆ ಬಾವುಟ ತೆಗೆದು ಕೆಂಪುಬಾವುಟ ಹಾಕಿದೆ ಪೋಲಿಸರು ನಾವು ಮಾಡಬೇಕೆ ಭೂತದಹನಕ್ಕೆ ಅಡ್ಡಿ ಮಾಡಿದರು. ಕೆಂಪೇಗೌ ಸರ್ಕಲ್‌ನಲ್ಲಿ ನಮ್ಮ ಮೇಲೆ ದಾಳಿ ನಡೆಯಿ ತುಂಬಾ ಜನಕ್ಕೆ ಏಟು ಬಿತ್ತು. ಡಾ. ಲಕ್ಷ ರೆಡ್ಡಿ, ರಾಮರಾವ್, ಗುಣಶೀಲ ಮತ್ತೂ ವಿದ್ಯಾರ್ಥಿಗೆ ತುಂಬಾ ಏಟುಗಳು ಬಿದಿದ್ದ ಪೋಲೀಸರು ಮೊಕದ್ದಮೆ ಕೂಡ ಹಾಕಿದ ಕೇಸ್ ತುಂಬಾ ದಿನ ನಡೆಯಿತು.

ನಾನು ಎಐಎಸ್‌ಎಫ್‌ನ ಬೆಂಗಳೂ ಜಿಲ್ಲಾ ಕಾರ್ಯದರ್ಶಿಯಾಗಿ ಬೆಂಗಳೂರಿನ ಗಾಜಿನ ಮನೆಯಲ್ಲಿ ನಡ ಎಐಸಿಸಿ ಸಭೆಯ ಸಂದರ್ಭದಲ್ಲಿ ಕಾಂಗ್ರೆ ಪಕ್ಷದ ಜನವಿರೋಧಿತನವನ್ನು ಖಂಡ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿಯವ ವಿದ್ಯಾರ್ಥಿಗಳು ಕಪ್ಪುಬಾವುಟ ತೋರಿಸಿದೆ 10–12 ಜನ ಅರೆಸ್ಟ್ ಆಗಿದ್ದೆವು. ಮುಗಿಯುವವರೆಗೆ ಬಿಟ್ಟಿರಲಿಲ್ಲ. 4–5 ಕಾಲ ಬಸವನಗುಡಿ ಪೋಲಿಸ್ ಠಾಣೆಯ ಇಟ್ಟಿದ್ದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

# ರಾಜ್ಯದಾದ್ಯಂತ ಕಾರ್ಮಿಕರ ಯಶಸ್ವಿ ಮತ ಪ್ರದರ್ಶನ

ನೂತನ ರಾಜ್ಯ ಸರ್ಕಾರವು ನೂರು ದಿನಗಳನ್ನು ಪೂರೈಸಿದೆ. ಹಿಂದಿನ ಸರ್ಕಾರದ ಮುಂದೆ ಇರಿಸಿದ್ದ ಕಾರ್ಮಿಕರ ಹಾಗು ಜನ ಸಾಮಾನ್ಯರ ಬೇಡಿಕೆಗಳನ್ನು ಒಳಗೊಂಡ 20 ಬೇಡಿಕೆಗಳನ್ನು 2013 ಜೂನ್ 14 ರಂದು ರಾಜ್ಯಾದ್ಯಂತ ಪ್ರತಿಭಟನೆ ನಡೆಸಿ ಸಿಐಟಿಯು ರಾಜ್ಯ ಸರ್ಕಾರಕ್ಕೆ ಸಲ್ಲಿಸಿದೆ.

...ದುಡಿಯುವ ಜನರ ... ಪ್ರಶ್ನೆಗಳ ಕುರಿತು ... ಸರ್ಕಾರ ತನ್ನ ...ಲ್ಲಿ ಯಾವುದೆ ...ಪಗಳನ್ನು ...ಡಿಲ್ಲ. ರಾಜ್ಯವ್ಯಾಪಿ ...ನ ಕನಿಷ್ಠ ವೇತನ, ...ಗೆ ಕಾರ್ಮಿಕರು-...ನಿಗಳನ್ನು ...ಗೊಳಿಸಲು ಶಾಸನ ರೂಪಿಸುವ, ...ಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ...ಡಳಿಗೆ ಯೋಜನೆಗಳನ್ನು ರೂಪಿಸಿ-...ನುಭವಿಗಳನ್ನು ನೊಂದಾಯಿಸುವ ...ವುದೇ ಪ್ರಸ್ತಾಪವನ್ನು ಮಾಡಿಲ್ಲ. ...ಮಾತ್ರವಲ್ಲದೆ ಅಸಂಘಟಿತ ಕಾರ್ಮಿಕರ ...ಮಾಜಿಕ ಭದ್ರತಾ ಮಂಡಳಿಗೆ ಬಿಡಿಗಾಸನ್ನು ...ದೆ ಕೋಟ್ಯಾಂತರ ಅಸಂಘಟಿತ ...ರ್ಮಿಕರನ್ನು ವಂಚಿಸಿದೆ. ಮನೆ ...ಸಗಾರರು, ಬೀದಿಬದಿ ವ್ಯಾಪಾರಿಗಳು, ...ಟೋ-ಟ್ಯಾಕ್ಸಿ ಚಾಲಕರು ಮುಂತಾದ ...ಘಟಿತರಿಗೆ ಲಭ್ಯವಿರುವ ರಾಷ್ಟ್ರೀಯ ... ಬೀಮಾ ಯೋಜನೆಗೆ, ವಿಮಾ ... ಯೋಜನೆಗೆ ಅರ್ಜಿ ಸಲ್ಲಿಸಿ ಚಾತಕ ...ಗಳಂತೆ ಕಾಯುತ್ತಿದ್ದರು. ಅವರನ್ನು ...ನುಭವಿಗಳನ್ನಾಗಿಸಲು ಪ್ರಯತ್ನವನ್ನೆ ...ರ ಮಾಡುತ್ತಿಲ್ಲ.

ಅಂಗನವಾಡಿ ಕೇಂದ್ರಗಳ ಖಾಸಗೀಕರಣ, ...ಗಳ ಮಧ್ಯಾಹ್ನ ಬಿಸಿಯೂಟ ...ಜನೆಯ ಹೊರಗುತ್ತಿಗೆಕರಣಕ್ಕೆ ...ಂದಾಗಿರುವ ಸರ್ಕಾರ, ಆಶಾ ...ರ್ಯಕರ್ತರಿಗೆ ಕನಿಷ್ಠ ವೇತನ ನೀಡದೆ ...ಂದುವರಿದಿದೆ. ಸರ್ಕಾರದ ವಿವಿಧ ...ಖೆಗಳಲ್ಲಿ ಹೊರಗುತ್ತಿಗೆ ಆಧಾರದಲ್ಲಿ ...ಸ ಮಾಡುತ್ತಿರುವ ಬಿಬಿಎಮ್‌ಪಿ ...ಪ್ಯೂಟರ್ ಆಪರೇಟರ್‌ಗಳ ರೀತಿಯ ...ಕರರಿಗೆ ನಿಗದಿತ ಸಮಯಕ್ಕೆ ದುಡಿದ ವೇತನ ...ಡದೆ, ಪ್ರತಿಬಾರಿ ದುಡಿದ ವೇತನಕ್ಕಾಗಿ ...ಣಿ-ಹೋರಾಟ ನಡೆಸಬೇಕಾದಂತಹ ...ರ್ಬತೆ ಸೃಷ್ಟಿಸಿದೆ. ಗುತ್ತಿಗೆ ರದ್ದುಪಡಿಸಿ ...ರು ವರ್ಷಗಳು ದುಡಿದ ಕಾರ್ಮಿಕರನ್ನು ...ದಿಗೆ ತಳ್ಳುತ್ತಿದೆ.

ತಮ್ಮ ನ್ಯಾಯಯುತ ಬೇಡಿಕೆಗಳಿಗಾಗಿ ಹೋರಾಟ ನಡೆಸುವ ಕಾರ್ಮಿಕರಿಗೆ ನ್ಯಾಯ ಒದಗಿಸಬೇಕಾದ ಕಾರ್ಮಿಕ ಇಲಾಖೆ ಅನಗತ್ಯ ವಿಳಂಬ ಮಾಡಿ, ಮಾಲೀಕರಿಗೆ ಅನುಕೂಲ ಮಾಡುತ್ತಿದೆ. ಫೆದರ್‌ಲೈಟ್, ಹೆಚ್.ಎಮ್.ಜಿ, ಬಿಬಿಎಮ್‌ಪಿ ಕಂಪ್ಯೂಟರ್ ಆಪರೇಟರ್ಸ್, ವಿಪ್ರೋ ಟ್ರೈನಿಗಳು, 108 ನೌಕರರು ಮುಂತಾದ ಹೋರಾಟಗಳಲ್ಲಿ ಇದರ ನಗ್ನ ದರ್ಶನವನ್ನು ನೋಡಬಹುದಾಗಿದೆ. ಮಾಲೀಕರಿಗೆ ಅನುಕೂಲವಾಗುವಾಗ ಮುಷ್ಕರಗಳನ್ನು ನಿಷೇಧಿಸಲು ತುದಿಗಾಲಲ್ಲಿ ನಿಲ್ಲುವ ಇಲಾಖೆ,



ಬೆಂಗಳೂರು

ಕಾರ್ಮಿಕರಿಗೆ ಅನುಕೂಲವಾಗುವಂತೆ ಬೀಗಮುದ್ರೆ ನಿಷೇಧಿಸಲು, ಮಾಲೀಕರನ್ನು ದಂಡಿಸಲು ಅನುಮತಿಸಲು ಮೀನಾಮೇಷ ಏಣಿಸುತ್ತಿದೆ.

ಈ ನೀತಿಗಳ ವಿರುದ್ಧದ ಹೋರಾಟಗಳನ್ನು ಬಗ್ಗುಬಡಿಯಲು ಹಿಂದಿನ ಸರ್ಕಾರ 2009ರಲ್ಲಿ ರೂಪಿಸಿದ್ದ ಪೋಲಿಸ್ ನಿಯಮಾವಳಿಗಳನ್ನು ಬಳಸಿ ಪರವಾನಗಿ ನೆಪಮಾಡಿ, ಪ್ರತಿಭಟನೆ, ಮೆರವಣಿಗೆ, ಹೋರಾಟಗಳಿಗೆ ಅನುಮತಿ ನೀಡದೆ, ಪೋಲಿಸ್ ಇಲಾಖೆಯ ಮೂಲಕ ಲಾಠಿ ಪ್ರಹಾರ, ದಸ್ತಗಿರಿ, ಸುಳ್ಳು ಮೊಕದ್ದಮೆ ಹೂಡುವ ಯತ್ನಗಳು ಹೆಚ್ಚುತ್ತಿವೆ. ಇದೀಗ 2004ರಲ್ಲಿ ಲ್ಯಾಪ್ಸ್ ಆಗಿರುವ ಹೋರಾಟ-ಮುಷ್ಕರಗಳನ್ನು ಬಗ್ಗುಬಡಿಯುವ ಇಖಒಂ (ಎಸ್ಮಾ) ಕರಾಳ ಕಾಯ್ದೆಯನ್ನು ಮತ್ತೆ ಪುನರ್ ಅಂಗೀಕರಿಸುವುದಾಗಿ ಸಾರಿಗೆ ಸಚಿವರು ಪ್ರಕಟಿಸಿದ್ದಾರೆ.

ಬೆಲೆ ಏರಿಕೆ ನಿಯಂತ್ರಿಸದೆ, ಬಸ್‌ದರ, ಹಾಲಿನದರ ಏರಿಸಿ, ವಿದ್ಯುತ್‌ದರ, ಕುಡಿಯುವ ನೀರಿನ ದರಗಳ ಹೆಚ್ಚಿಸಲು ಹೊಂಚುಹಾಕಿ ಕುಳಿತಿದೆ. 1ರೂಗೆ ಅಕ್ಕಿ ನೀಡುವ ಯೋಜನೆ ಸ್ವಾಗತಾರ್ಹವಾದರೂ, ಎಪಿಎಲ್ ಕುಟುಂಬಗಳಿಗೆ ಆಹಾರ ಧಾನ್ಯ ನೀಡದೆ, ಸಾರ್ವತ್ರಿಕ ಪಡಿತರ ವ್ಯವಸ್ಥೆ ನೀಡುವುದಿಲ್ಲ ಎಂಬುದನ್ನು ತೋರಿದೆ. ವಸತಿ ರಹಿತರಿಗೆ ವಸತಿ ನೀಡದೆ ಮನೆ ಬಾಡಿಗೆ ನಿಯಂತ್ರಣಕ್ಕೆ ಕ್ರಮವಹಿಸದೆ, ದುಡಿಯುವ ಜನತೆಯ ಹೊರೆ ಹೆಚ್ಚಿಸುತ್ತಿದೆ.

ಈ ಎಲ್ಲಾ ರಾಜ್ಯ ಸರ್ಕಾರದ ನೀತಿಗಳ ಜೊತೆಯಲ್ಲಿ ಕೇಂದ್ರ ಸರ್ಕಾರವು ಸಹಾ ಕಾರ್ಮಿಕರ ಬೇಡಿಕೆಗಳ ಈಡೇರಿ-ಕೆಗೆ ಕ್ರಮವಹಿಸದೆ, ಕಣ್ಣೊರೆಸುವ ತಂತ್ರ ಅನುಸರಿಸುತ್ತಿದೆ. ಎಲ್ಲಾ ಕೇಂದ್ರ ಕಾರ್ಮಿಕ ಸಂಘಗಳ (ಜೆಸಿಟಿಯು) 10 ಬೇಡಿಕೆಗಳಿಗಾಗಿ 2013 ಫೆಬ್ರವರಿ 20, 21 ರ ಮುಷ್ಕರದ ನಂತರ, ಅವುಗಳ ಪರಿಶೀಲನೆಗೆ ರಚಿಸಿದ್ದ ಕೇಂದ್ರ ಸಚಿವರ ಸಮಿತಿ ಕ್ರಮವಹಿಸದೆ ಕುಳಿತಿದೆ. ಅದರ ವಿರುದ್ಧ ರಾಷ್ಟ್ರವ್ಯಾಪಿ ಹೋರಾಟ ಮತ್ತು ಡಿಸೆಂಬರ್ 12 ರಂದು ಸಂಸತ್ ಚಲೋಗೆ ಎಲಅಖಿಗ ಕರೆ ನೀಡಿದೆ.

ಈ ಹಿನ್ನೆಲೆಯಲ್ಲಿ ಸಿಐಟಿಯು ರಾಜ್ಯ ಸಮಿತಿಯು 2008ರಿಂದ ನಡೆಸಿರುವ ಕನಿಷ್ಠ ವೇತನ ಹಾಗು ಇತರೆ ಬೇಡಿಕೆಗಾಗಿನ ಚಳುವಳಿಯ ಮುಂದುವರಿದ ಭಾಗವಾಗಿ 2013 ಸೆಪ್ಟೆಂಬರ್ 20 ರಂದು ರಾಜ್ಯಾದ್ಯಂತ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆಗೆ ಕರೆ ನೀಡಿತ್ತು. ಸಿಐಟಿಯು ಕರೆಯನ್ನು ರಾಜ್ಯದಾದ್ಯಂತ ಕಾರ್ಮಿಕರು ಯಶಸ್ವಿಯಾಗಿ ಜಾರಿಗೊಳಿಸಿರುವ ಬಗ್ಗೆ ವರದಿಗಳು ಬರುತ್ತಿವೆ.

**ಬೆಂಗಳೂರು:ಮೊಳಗಿತು 'ಕಾರ್ಮಿಕ ಕಾನೂನುಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಿ' ಎಂಬ ಘೋಷಣೆ**

'ಕಾರ್ಮಿಕ ಕಾನೂನುಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಿ', 'ಕನಿಷ್ಠ ವೇತನ 15,000ಕ್ಕೆ ಏರಿಸಿ' ಎಂದು ಘೋಷಣೆಗಳನ್ನು ಕೂಗುತ್ತಾ ಸಿಐಟಿಯುವಿನ ಕೆಂಬಾವುಟವನ್ನು ಹಿಡಿದು ಬೆಂಗಳೂರಿನ ಟೌನ್‌ಹಾಲ್‌ನ ಮುಂಭಾಗದ ರಸ್ತೆಯಿಂದ ಸಾವಿರಾರು ಕಾರ್ಮಿಕರು ಮೆರವಣಿಗೆ ಹೊರಟು ಸ್ವಾತಂತ್ರ್ಯ ಉದ್ಯಾನವನ ತಲುಪಿ, ಅಲ್ಲಿಯೆ ಪಕ್ಕದ ರಸ್ತೆಯಲ್ಲಿ ಜ್ಹೋ ಎಂದು ಸುರಿವ ಮಳೆಯನ್ನು ಲೆಕ್ಕಿಸದೆ ಧರಣಿಗೆ ಕುಳಿತು ಕಾರ್ಮಿಕ ಮಂತ್ರಿಗಳು



ಬಳ್ಳಾರಿ

ಸ್ಥಳಕ್ಕೆ ಬಂದು ನಮ್ಮ ಬೇಡಿಕೆಗಳನ್ನು ಆಲಿಸಿ, ಈಡೇರಿಸಿಕೊಡಬೇಕೆಂದು ಪಟ್ಟು ಹಿಡಿದರು.

ಮಳೆಕಡಿಮೆ ಆಗುತ್ತಿದ್ದಂತೆ ರಸ್ತೆಯಲ್ಲೇ ಸಭೆ ಆರಂಭವಾಯಿತು. ಪ್ರತಿಭಟನೆಯಲ್ಲಿ, ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರಸನ್ನ ಕುಮಾರ್, ಮೀನಾಕ್ಷಿ ಸುಂದರಂ, ಕೆ.ಎನ್. ಉಮೇಶ, ಲೀಲಾವತಿ, ಕೆ. ಪ್ರಕಾಶ್ ಮುಂತಾದ ಸಿಐಟಿಯುವಿನ ಮುಖಂಡರು ಭಾಗವಹಿಸಿ ಮಾತನಾಡಿದರು. ಅಂಗವಿಕಲ ಕಾರ್ಮಿಕರು, ಬಿಸಿಯೂಟ, ಆಟೋಚಾಲಕ ಸಂಘದವರು, ಜೆ.ಎಸ್.ಎಂ.ಎಲ್. ಕಾರ್ಮಿಕ ಸಂಘ, ಟೈಕೋ ಎಲೆಕ್ಟ್ರಾನಿಕ್ ಎಂಪ್ಲಾಯೀಸ್ ಯೂನಿಯನ್, ಗಾರ್ಮೆಂಟ್ ಕಾರ್ಮಿಕರು, ಬೀಡಿಕಾರ್ಮಿಕರು, ಹಾಗೂ ಇನ್ನಿತರ ಸಂಘಟಿತ ಮತ್ತು ಅಸಂಘಟಿತ ವಲಯದ ಮಹಿಳಾ ಕಾರ್ಮಿಕರನ್ನು ಒಳಗೊಂಡು ಮೂರುಸಾವಿರ ಸಂಖ್ಯೆಯಲ್ಲಿ ಕಾರ್ಮಿಕರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ರಾಜ್ಯ ಕಾರ್ಮಿಕರಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಉಡುಪಿ ಜಿಲ್ಲೆಯಲ್ಲಿ ಹೋರಾಟದ ಕ-ರೆಗೆ ಭಾರಿ ಸ್ಪಂದನೆ ದೊರಕಿತು. ಸುಮಾರು ಆರು ಸಾವಿರ ಕಾರ್ಮಿಕರು ಜಿಲ್ಲಾ ಕೇಂದ್ರ ಉಡುಪಿಯಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು ಮತ್ತು ಜಿಲ್ಲಾಧಿಕಾರಿಗೆ ತಮ್ಮ ಲಿಖಿತ ಹಕ್ಕೊತ್ತಾಯವನ್ನು ಕೊಟ್ಟು ಜಾರಿಗೆ ಕ್ರಮವಹಿಸಲು ಆಗ್ರಹಿಸಿದರು. ಕಟ್ಟಡ ಕಾರ್ಮಿಕರು, ಗೋಡಂಬಿ ಕಾರ್ಮಿಕರು, ಅಕ್ಷರ ದಾಸೋಹ, ಆಶಾ, ಬೀಡಿ ಕಾರ್ಮಿಕರು ಮುಂತಾದವರು ಹೋರಾಟದಲ್ಲಿ ಉತ್ಸಾಹದಿಂದ ಪಾಲ್ಗೊಂಡಿದ್ದರು.

ಭಾರಿ ಮಳೆಯು ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಮಿಕರ ಉತ್ಸಾಹವನ್ನು ಕಡಿಮೆ ಮಾಡಲಿಲ್ಲ. ಜಿಲ್ಲಾ ಕೇಂದ್ರ ಮಂಗಳೂರಿನಲ್ಲಿ ಸು. ಮೂರು ಸಾವಿರ ಕಾರ್ಮಿಕರು ಜಿಲ್ಲಾಧಿಕಾರಿ ಕಚೇರಿಯ ಮುಂದೆ ಸುಮಾರು ಎರಡು ಗಂಟೆಗಳ ಕಾಲ ತೀವ್ರ ಪ್ರತಿಭಟನೆ ನಡೆಸಿದರು. ಈ ಪ್ರತಿಭಟನೆಯು ಮಂಗಳೂರಿನ ಜನರ ಗಮನವನ್ನು ಸೆಳೆಯಿತು. ಬೀಡಿ ಕಾರ್ಮಿಕರು, ಬೀದಿಬದಿ ವ್ಯಾಪಾರಿಗಳು, ಮೆಸ್ಕಾಂ ನೌಕರರು, ರಿಕ್ಷಾ ಚಾಲಕರು, ಹಮಾಲಿ, ಅಂಗನವಾಡಿ, ಬಿಸಿಯೂಟ ನೌಕರರು ಹೋರಾಟದಲ್ಲಿ ಪಾಲ್ಗೊಂಡಿದ್ದರು.

ಹಾಸನದಲ್ಲಿ ತೋಟ ಕಾರ್ಮಿಕರು, ಅಂಗನವಾಡಿ, ಬಿಸಿಯೂಟ ಕಾರ್ಮಿಕರು, ಸು. 2,000 ಕಾರ್ಮಿಕರು ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಬಳ್ಳಾರಿಯಲ್ಲಿ ಸಾವಿರಕ್ಕೂ ಹೆಚ್ಚು ಜನರು, ಬಾಗಲಕೋಟೆಯಲ್ಲಿ ಅಂಗನವಾಡಿ, ಬಿಸಿಯೂಟ, ಗ್ರಾಮ ಪಂಚಾಯತ್ ನೌಕರರು ಸೇರಿ ಸು. ಒಂದು ಸಾವಿರ ಜನರ ಪ್ರತಿಭಟನೆ ನಡೆಯಿತು. ಬೀದರ್‌ನಲ್ಲಿ ಸು. ಎಂಟುನೂರು ಜನರ ಪ್ರತಿಭಟನೆ ನಡೆದಿದೆ. ಗ್ರಾಮ ಪಂಚಾಯತ್, ಬಿಸಿಯೂಟ, ಅಂಗನವಾಡಿ ಮುಂತಾದ ವಲಯಗಳ ಕಾರ್ಮಿಕರು ಪಾಲ್ಗೊಂಡಿದ್ದರು. ಹುಬ್ಬಳ್ಳಿ, ಹಾವೇರಿ ಗದಗ್‌ಗಳಲ್ಲಿ ಹಾಗೆಯೇ ಕೊಡಗಿನ ಮಡಿಕೇರಿ, ಚಿತ್ರದುರ್ಗ, ದಾವಣಗೆರೆಗಳಲ್ಲಿ ಪ್ರತಿಭಟನೆಗಳು ನಡೆದಿವೆ. ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾಕೇಂದ್ರ ಕಾರವಾರದಲ್ಲಿ 600 ಕ್ಕೂ ಹೆಚ್ಚು ಕಾರ್ಮಿಕರು ಪ್ರತಿಭಟನೆ ನಡೆಸಿದರು

ಜನಶಕ್ತಿ
ಕನ್ನಡ ವಾರಪತ್ರಿಕೆ

# ಅನ್ಯಾಯದ ವಿರುದ್ಧ ಎಚ್ಚರಿಕೆ ಗಂಟೆ
# ಹಂತಕನ ಸೆರೆ: ಹೋರಾಟಕ್ಕೆ ಸಂದ ಜಯ

ಹೆಂಡತಿ ಸಿ.ಬಿ.ವೀಣಾ ಮತ್ತು ಎರಡು ವರ್ಷದ ಮಗು ದೀಪ್ತಿಯನ್ನು ಕೊಂದು ತಲೆಮರೆಸಿಕೊಂಡಿದ್ದ ಎಸ್.ಕೆ. ಸಂತೋಷ್‌ಕುಮಾರ್‌ನನ್ನು ಬಂಧಿಸಬೇಕೆಂದು ಕೋಲಾರದಲ್ಲಿ ನಡೆದ ಪ್ರಗತಿಪರ ಸಂಘಟನೆಗಳ ಹೋರಾಟಕ್ಕೆ ಜಯ ಸಿಕ್ಕಿದೆ. ಪುದುಚೇರಿಯಲ್ಲಿ ತಲೆಮರೆಸಿಕೊಂಡಿದ್ದ ಸಂತೋಷನನ್ನು ಸೆಪ್ಟೆಂಬರ್ 18ರಂದು, ಅಂದರೆ ಅನಿರ್ದಿಷ್ಟ ಧರಣಿಯ 29ನೇ ದಿನದಂದು ಬಂಧಿಸುವಲ್ಲಿ ಕೋಲಾರ ಪೊಲೀಸರ ಒಂದು ತಂಡ ಯಶಸ್ವಿಯಾಗಿದೆ. ಜುಲೈ 10ರಂದು ಕೋಲಾರದ ತನ್ನ ಮನೆಯಲ್ಲಿ ವರದಕ್ಷಿಣೆ ದಾಹಕ್ಕಾಕಿ ಮತ್ತು ಹೆಣ್ಣು ಮಗು ಜನಿಸಿದೆ ಎಂಬ ಕಾರಣಕ್ಕೆ ಹೆಂಡತಿ ಮತ್ತು ಮಗುವನ್ನು ಕೊಂದು ಪರಾರಿಯಾಗಿದ್ದ ಅರೋಪಿಯನ್ನು ಬಂಧಿಸುವಂತೆ ಆಗ್ರಹಿಸಿ ವೀಣಾಳ ತಂದೆ-ತಾಯಿ ಹಾಗೂ ಇತರ ಬಂಧುಗಳನ್ನು ಸೇರಿಸಿಕೊಂಡು ಜನವಾದಿ ಮಹಿಳಾ ಸಂಘಟನೆ ನೇತೃತ್ವದಲ್ಲಿ ಆಗಸ್ಟ್ 21ರಿಂದ ಕೋಲಾರ ಜಿಲ್ಲಾಧಿಕಾರಿ ಕಚೇರಿ ಮುಂದೆ ನಡೆದ ಅನಿರ್ದಿಷ್ಟ ಧರಣಿಗೆ ಸಿಪಿಐ (ಎಂ), ಸಿಐಟಿಯು, ಕೆಪಿಆರ್‌ಎಸ್, ಎಸ್‌ಎಫ್‌ಐ, ಡಿವೈಎಫ್‌ಐ ಮೊದಲಾದ ಸಂಘಟನೆಗಳಲ್ಲದೆ ದಸಂಸ, ಸಮತಾ ಸೈನಿಕ ದಳ ಮೊದಲಾದ ಸಂಘಟನೆಗಳೂ ಕೈಜೋಡಿಸಿದ್ದವು. ಪೊಲೀಸ್ ಹಾಗೂ ಜಿಲ್ಲಾಡಳಿತದ ನಿರ್ಲಕ್ಷ್ಯವನ್ನು ಖಂಡಿಸಿ ಹಲವು ರೀತಿಯ ಹೋರಾಟಗಳನ್ನು ನಡೆಸಲಾಗಿತ್ತು. ಜಿಲ್ಲಾ ಉಸ್ತುವಾರಿ ಸಚಿವ ಯು.ಟಿ. ಖಾದರ್ ಮತ್ತು ಜಿಲ್ಲೆಯ ಜನಪ್ರತಿನಿಧಿಗಳ ನಿರ್ಲಜ್ಜ ನಡೆಯನ್ನು ಖಂಡಿಸಲಾಗಿತ್ತು. ಕೊನೆಗೂ ಕೋಲಾರ ಮಾತ್ರವೇ ಅಲ್ಲದೆ ಇಡೀ ಕರ್ನಾಟಕದ ಪ್ರಗತಿಪರ ಚಳವಳಿಯಲ್ಲಿ ದಾಖಲಾಗುವಂಥ ಒಂದು ಮಹತ್ವದ ಜನ ಚಳವಳಿಯ ಒತ್ತಡಕ್ಕೆ ಮಣಿದ ಅಧಿಕಾರಿಗಳು ತಲೆಮರೆಸಿಕೊಂಡಿದ್ದ ಆರೋಪಿಯನ್ನು ಬಂಧಿಸಿದ್ದಾರೆ. ಇದು ಹೋರಾಟಕ್ಕೆ ಸಂದ ದೊಡ್ಡ ಜಯವೇ ಆಗಿದೆ.




ಈ ಹಿನ್ನೆಲೆಯಲ್ಲಿ, ಸೆಪ್ಟೆಂಬರ್ 20ರ
ಅಂದರೆ ಅನಿರ್ದಿಷ್ಟ ಧರಣಿಯ
ದಿನದಂದು ಧರಣಿ ಟೆಂಟ್‌ನಲ್ಲಿ ಸುದ್ದಿಗ
ಜತೆ ಮಾತನಾಡಿದ ಸಂಘಟನೆಗಳ ಪ್ರಮು
ಧರಣಿ ಮುಕ್ತಾಯವನ್ನು ಪ್ರಕಟಿಸಿ
ಆದರೆ, ಈ ಹೋರಾಟ ಇಲ್ಲಿಗೇ ನಿಲ್ಲು
ಎಂದೂ ಘೋಷಿಸಿದರು.

ಆರೋಪಿ ತಪ್ಪಿಸಿಕೊಳ್ಳಲು ಪ್ರ
ಕಾರಣರಾದ ಕೋಲಾರ ನಗರ ಸ
ಇನ್ಸ್‌ಪೆಕ್ಟರ್ ಕೆ.ಎನ್. ರಮೇಶ್
ಸೇವೆಯಿಂದ ಅಮಾನತು ಮಾಡಲೇ
ಎಂದು ಮುಖಂಡರು ಆಗ್ರಹಿಸಿ
ಚಾರ್ಜ್‌ಶೀಟ್ ಸಲ್ಲಿಸುವಾಗ ಆರ
ನುಣುಚಿಕೊಳ್ಳಲು ಆಗದ ರೀತಿ
ಸಂಬಂಧಿತ ಅಧಿಕಾರಿಗಳು ಎಚ್ಚರ
ನಡೆದುಕೊಳ್ಳಬೇಕು ಎಂದೂ ಸಂಘಟ
ಪ್ರಮುಖರಾದ ಜಿ.ಸಿ. ಬಯ್ಯಾರೆಡ್ಡಿ,
ಗೀತಾ, ಗಾಂಧಿನಗರ ನಾರಾಯಣಸ್ವಾಮಿ
ವಿಜಯಕುಮಾರ್, ಪಂಡಿತ್ ಮುನಿವೆಂ
ಮೊದಲಾದವರು ಹೇಳಿದರು.

ಮಹಿಳೆಯರ ಮೇಲೆ
ಎಸಗುವವರು ಹಾಗೂ ಅದಕ್ಕೆ
ಕೊಡುವ ಮತ್ತು ನಿರ್ಲಕ್ಷ್ಯ ತೋ
ಅಧಿಕಾರಿಗಳಿಗೆ ಈ ಯಶಸ್ವಿ ಹೋ
ಒಂದು ಎಚ್ಚರಿಕೆಯ ಗಂಟೆಯಾಗಿದೆ.

**ಸೆಪ್ಟೆಂಬರ್ 19ರಂದು ಹೋರಾಟದ**
**ಜಯವನ್ನು ಘೋಷಿಸಿದ ಮುಖಂಡರ**

## ಕೋಮುಧ್ರುವೀಕರಣ..........

**ಪುಟ 7 ರಿಂದ**

ಪ್ರವೇಶಕ್ಕೆ ಅವಕಾಶ ಕೊಡುವ ಕ್ಷೇತ್ರಗಳನ್ನು ವಿಸ್ತರಿಸಬೇಕೆಂದು ಪ್ರತಿಪಾದಿಸಲಾರಂಭಿಸಿದೆ. ಹೀಗೆ ಅದು ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ಹಿತಾಸಕ್ತಿಗಳ ಪರವಾಗಿ ಕೆಲಸ ಮಾಡುತ್ತಿದೆ. ಅದರ ಕೇಂದ್ರ ಅಜೆಂಡಾ ಆಗಿರುವ ಹಿಂದುತ್ವದ ಮೇಲಿನ ಅವಿರತ ಪ್ರಚಾರಗಳು "ರೊಚ್ಚಿಗೆದ್ದ ರಾಷ್ಟ್ರೀಯ (ಹಿಂದೂ ಎಂದು ಓದಿಕೊಳ್ಳಿ) ಭಾವನೆಗಳನ್ನು" ಸರಿಪಡಿಸುವ ಹೆಸರಿನಲ್ಲಿ ಕೋಮುವಾದಿ ಧ್ರುವೀಕರಣವನ್ನು ತೀಕ್ಷ್ಣಗೊಳಿಸುವುದನ್ನು ಮುಂದುವರೆಸುತ್ತಿದೆ. ಫ್ಯಾಸಿಸ್ಟ್ ವಿಧಾನಗಳೊಂದಿಗೆ ಎಂತಹ ಮೈನಡುಗಿಸುವಂತಹ ತಾದಾತ್ಮ್ಯ!

**ಬೆಂಕಿ ಹತ್ತಿಸಿದವರು**

ಚಾರಿತ್ರಿಕ ಆಕಸ್ಮಿಕಗಳ ಮೂಲಕ ಸಂದೇಶ ತಲುಪಿಸುವ ತನ್ನದೇ ದಾರಿಗಳು ಚರಿತ್ರೆಯ ಬಳಿ ಇವೆ. ಜರ್ಮನಿಯ ಅಧಿಕಾರದ ಕೇಂದ್ರವಾಗಿದ್ದ ರೈಶ್‌ಟಾಗ್‌ಗೆ ಬೆಂಕಿ ಹಚ್ಚಿದ್ದು 1933ರ ಫೆಬ್ರುವರಿ 27 ರಂದು. ಗುಜರಾತಿನ ಗೋಧ್ರಾದಲ್ಲಿ ಸಾಬರಮತಿ ಎಕ್ಸ್‌ಪ್ರೆಸ್‌ನ ಎಸ್-6 ಬೋಗಿ ಹತ್ತಿ ಉರಿದದ್ದು 2002ರ ಫೆಬ್ರುವರಿ 27ರಂದು. ಜರ್ಮನಿಯ ಬೆಂಕಿಯನ್ನು ಹಿಟ್ಲರ್ ಒಂದು ಹೀನ ಕಮ್ಯುನಿಸ್ಟ್-ವಿರೋಧಿ ದಮನವನ್ನು ಆರಂಭಿಸಲು, ಪ್ರಜಾಪ್ರಭುತ್ವ ಹಕ್ಕುಗಳನ್ನು ರದ್ದು ಮಾಡಲು, ವೈಮೆರ್ ಸಂವಿಧಾನವನ್ನು ಅಮಾನತುಗೊಳಿಸಲು ಮತ್ತು ನಾಝಿ ಫ್ಯಾಸಿಸಂನ್ನು ಕ್ರೋಡೀಕರಿಸುವತ್ತ ಸಾಗಲು ಬಳಸಿದ. ನಂತರ ರೈಶ್‌ಸ್ಟಾಗ್ ಬೆಂಕಿ ಫ್ಯಾಸಿಸ್ಟ್ ಶಕ್ತಿಗಳದ್ದೇ ಕೈವಾಡ ಎಂದು ಸಾಬೀತಾಯಿತು. ಇಷ್ಟೇ ಅಲ್ಲ, ಜನವರಿ 30, 1948ರಂದು ಮಹಾತ್ಮ ಗಾಂಧಿಯವರ ಹತ್ಯೆ ನಡೆಯಿತು. ಇತಿಹಾಸದ ವ್ಯಂಗ್ಯ ನೋಡಿ-ಅದಕ್ಕೆ ಸರಿಯಾಗಿ 15 ವರ್ಷಗಳ ಹಿಂದೆ 1933ರಲ್ಲಿ ಹಿಟ್ಲರ್ ಜರ್ಮನಿಯ ಛಾನ್ಸಲರ್(ಅಧ್ಯಕ್ಷ) ಆಗಿ ಪ್ರತಿಜ್ಞಾ ಸ್ವೀಕಾರ ಮಾಡಿದ್ದ.


ಈ ಪ್ರಧಾನಿ ಪಟ್ಟದ ಆಕಾಂಕ್ಷಿ ಸರ್ದಾರ್ ಪಟೇಲ್ ಅವರ 'ಐಕ್ಯತೆಯ ಪ್ರತಿಮೆ' ಸ್ಥಾಪಿಸಲು ರೈತರಿಂದ ಕಬ್ಬಿಣ ಸಂಗ್ರಹಿಸುವ ಒಂದು ರಾಷ್ಟ್ರವ್ಯಾಪಿ ಪ್ರಚಾರ ನಡೆಸುವುದಾಗಿ ಪ್ರಕಟಿಸಿದರು. "ಭಾರತದ ಕಬ್ಬಿಣದ ಮನುಷ್ಯನಿಗೆ ತಕ್ಕುದಾದ ಕಾಣಿಕೆಯಾಗಿ ಅವರ ಸ್ಮರಣೆಯ ಪುನಶ್ಚೈತನ್ಯಕ್ಕಾಗಿ ನಾವು, ನ್ಯೂಯಾರ್ಕಿನ ಸ್ವಾತಂತ್ರ್ಯ ಪ್ರತಿಮೆಯ ದುಪ್ಪಟ್ಟು ಎತ್ತರದ ಈ ಪ್ರತಿಮೆಯನ್ನು ಕಟ್ಟುತ್ತೇವೆ" ಎಂದರು. ಅಲ್ಲದೆ, ಈ ಪ್ರತಿಮೆ " ಭಾರತದ ಐಕ್ಯತೆ ಮತ್ತು ಸಮಗ್ರತೆ ಅದರ ಶ್ರಿಮಂತ ಸಂಸ್ಕೃತಿ ಹಾಗೂ ಪರಂಪರೆಯೊಂದಿಗೆ ಅಡಕಗೊಂಡಿರುವ" ಯೋಜನೆ ಎಂದೂ ಬಿಂಬಿಸಲಾಗುತ್ತಿದೆ. ಇದು ಅಯೋಧ್ಯೆಯ ವಿವಾದಿತ ಸ್ಥಳದಲ್ಲಿ ದೇವಸ್ಥಾನ ಕಟ್ಟಲು ಇಟ್ಟಿಗೆಗಳನ್ನು ಕಟ್ಟಲು ನಡೆಸಿದ ಪ್ರಚಾರವನ್ನು ಹೋಲುವಂತದ್ದು- ಅದು ಕೋಮುವಾದಿ ದ್ವೇಷವನ್ನು, ವಿನಾಶಲೀಲೆಯನ್ನು ಹರಡಿ ಹಲವಾರು ಜೀವಗಳನ್ನು ನುಂಗಿ ಹಾಕಿತು ಮತ್ತು ಕೇಂದ್ರದಲ್ಲಿ ಮೊತ್ತಮೊದಲ ಬಿಜೆಪಿ ನೇತೃತ್ವದ ಸರಕಾರವನ್ನು ಅಧಿಕಾರಕ್ಕೇರಿಸಿತು.

ಇದೇ ಸರ್ದಾರ್ ಪಟೇಲ್‌ರವರೇ ಮಹಾತ್ಮ ಗಾಂಧಿಯವರ ಹತ್ಯೆಯನ್ನು ಅನುಸರಿಸಿ ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ನಿಷೇಧಿಸಿದ್ದು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳುವ ಅಗತ್ಯವಿದೆ. ಈ ನಿಷೇಧವನ್ನು ಪ್ರಕಟಿಸುವ ಫೆಬ್ರುವರಿ 4, 1948ರ ಸರಕಾರೀ ಪ್ರಕಟಣೆ ಹೀಗಿತ್ತು: "ಆದ-ರೆ, ಸಂಘದ ಆಕ್ಷೇಪಾರ್ಹ ಮತ್ತು ಹಾನಿಕಾರಕ ಚಟುವಟಿಕೆಗಳು ತಗ್ಗದೆ ಮುಂದುವರೆದವು ಮತ್ತು ಸಂಘವು ಪ್ರಾಯೋಜಿಸಿದ ಮತ್ತು ಪ್ರೇರೇಪಿಸಿದ ಹಿಂಸಾಚಾರದ ಪಂಥ ಹಲವರನ್ನು ಬಲಿ ತೆಗೆದುಕೊಂಡಿದೆ. ಇತ್ತೀಚಿನ, ಮತ್ತು ಅತ್ಯಂತ ಅಮೂಲ್ಯವಾದ ಬಲಿಯೆಂದರೆ ಸ್ವತಃ ಗಾಂಧೀಜಿಯೇ." ಈ ಪ್ರಕಟಣೆಯನ್ನು ಸಿದ್ಧಪಡಿಸಿದವರು ಸರ್ದಾರ್ ಪಟೇಲ್‌ರವರೇ.

ಈ ರೀತಿಯ ಸರ್ದಾರ್ ಪಟೇಲ್‌ರ ದುರ್ವಿನಿಯೋಗ ಭಾರತದ ಇತಿಹಾಸವನ್ನು "ಹಿಂದೂರಾಷ್ಟ್ರ"ದ ವೈಭವೀಕರಣದ ಒಂದು ಅಖಂಡ ದಾಖಲೆಯೊಳಗೆ ತೂರಿಸಲಿಕ್ಕಾಗಿ ತಿದ್ದಿ ಬರೆಯುವ ಒಟ್ಟಾರೆ ಗುರಿಯ ಭಾ

'ಐಕ್ಯತೆಯ ಪ್ರತಿಮೆ'ಯೊಂದಿಗೆ 'ಸ್ವಾತಂ
ಪ್ರತಿಮೆ'ಯ ಹೋಲಿಕೆ ಕೆಲವು ದಶ
ಹಿಂದೆ ಅಮೇರಿಕಾ ನೇತೃತ್ವದ ವಿಯೆ
ಯುದ್ಧದ ವೇಳೆಯಲ್ಲಿ ಜನಜನಿತವಾ
ಒಂದು ಹಾಸ್ಯಪ್ರಸಂಗವನ್ನು ನೆನಪಿಗೆ ತರು
ಈ 'ಸ್ವಾತಂತ್ರ್ಯ ಪ್ರತಿಮೆ'ಯನ್ನು ಫ್ರ
ಅಮೆರಿಕಾಕ್ಕೆ ಫ್ರೆಂಚ್ ಕ್ರಾಂತಿಯ ಆದರ್ಶಗ
'ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರ
ಪ್ರತೀಕವಾಗಿ ಉಡುಗೊರೆ ನೀಡಿತು.
ಇದನ್ನು ನೋಡಲು ಬಂದಿದ್ದ
ಪ್ರವಾಸಿಗರ ಒಂದು ಗುಂಪಿನಲ್ಲಿದ್ದ ಒ
ಟಿಪ್ಪಣಿ ಮಾಡಿದನಂತೆ:" ಅಮೆರಿಕಾ
ಫ್ರೆಂಚರಂತೆ ಪ್ರತಿಮೆಗಳನ್ನು ನಿಲ್ಲಿಸಿ ಸತ್ತ
ತನ್ನವರನ್ನು ಗೌರವಿಸುತ್ತದೆ ಎಂದು
ಗೊತ್ತೇ ಇರಲಿಲ್ಲ!"

ಕೋಮು ಧ್ರುವೀಕರಣವ
ತೀಕ್ಷ್ಣಗೊಳಿಸುವುದು ಮತ್ತು 'ಐಕ್ಯತೆ
ಪ್ರತಿಮೆ'ಯ ಸುತ್ತ ಫ್ಯಾಸಿಸ್ಟ್ ಮಾ
ಪುಢಾರಿತನ ಮತ್ತು 'ಹಿಂದೂರಾಷ್ಟ್ರ'ದ ಆ
ಯೋಜನೆ ನಮ್ಮ ಗಣತಂತ್ರ ಸಂವಿಧಾನ
ಪ್ರತಿಷ್ಠಾಪಿಸಿರುವ ಆದರ್ಶಗಳ ಸಾ
ಸಂಕೇತವಾಗುತ್ತದೆ. ಆದ್ದರಿಂದ ಈಗ ಭಾ
ಐಕ್ಯತೆ ಮತ್ತು ಸಮಗ್ರತೆ, ಅದರ ಅ
ಶ್ರೀಮಂತ ಸಾಮಾಜಿಕ-ಸಾಂಸ್ಕೃತಿಕ- ಧಾ
ವಿವಿಧತೆಯನ್ನು ಕಾಪಾಡಿಕೊಳ್ಳುವುದು
ಶ್ರೀಮಂತಗೊಳಿಸುವುದು ಪಣಕ್ಕೊ
ಒಂದು ಉತ್ತಮ ಭಾರತದ ನಿರ್ಮಾಣ
ಹೋರಾಟಗಳನ್ನು ಮುಂದೊಯ್ಯಬೇಕ
ಇದಕ್ಕೆ ಅವಕಾಶ ನೀಡಬಾರದು.



## ರೋ ಬಿಕ್ಕಟ್ಟು......

02 ರಿಂದ

ಬರ್ ತಿಂಗಳು ಹಾಗೂ 2012ರ
ರಿ ತಿಂಗಳಿನಲ್ಲಿ ಯುರೋಪಿಯನ್
ಬ್ಯಾಂಕು ಅಲ್ಲಿನ ಒಟ್ಟು 800
ಗಳಿಗೆ ಸುಮಾರು 1333 ಬಿಲಿಯ
ರ್‌ಗಳಷ್ಟು (ಆಗಿನ ಲೆಕ್ಕದಲ್ಲಿ ಸುಮಾರು
ಲಕ್ಷ ಕೋಟಿ ರೂಪಾಯಿಗಳು)
ವನ್ನು ಮಂಜೂರು ಮಾಡಿದೆ. ಅದರಲ್ಲಿ
ರು ಅರ್ಧಕ್ಕೂ ಹೆಚ್ಚು ಭಾಗ ಗ್ರೀಸ್,
ರ್ಲೆಂಡ್, ಇಟಲಿ ಮತ್ತು ಸ್ಪೇನ್‌ನ
ಕುಗಳಿಗೆ ಸಂದಿದೆ. ಇಂತಹ ಸಾಲಕ್ಕೂ
ಜಾಮೀನುದಾರರಾಗಿ ನಿಂತಿದ್ದು
ರಗಳೇ.
ಭಬಡುಕ ಸಂಸ್ಥೆಗಳಿಗಾಗಿ ತಮ್ಮೆಲ್ಲಾ
ಮೂಲಗಳು ಮತ್ತು ಶಕ್ತಿಗಳನ್ನು
ವ ಅದೇ ಸರ್ಕಾರಗಳು, ಬರಿದಾಗಿದ್ದ
ಖಜಾನೆಗಳನ್ನು ತುಂಬಿಸಲು
ಮಾನ್ಯರ ಮೇಲಿನ ಹೊರೆಯನ್ನು
ದವು. ತೆರಿಗೆಗಳನ್ನು ಹೆಚ್ಚಿಸಲಾಯಿತು,
ಳನ್ನು ಏರಿಸಲಾಯಿತು, ಬೆಲೆಗಳು
ಂಡವು, ವೆಚ್ಚಗಳನ್ನು ಕಡಿಮೆ
ವ ನೆಪದಲ್ಲಿ ಉದ್ಯೋಗ ಕಡಿತ,
ಕಡಿತ, ಸೌಲಭ್ಯಗಳ ರದ್ದತಿ
ಲಾಯಿತು. ಸರಕಾರಿ ಸಂಸ್ಥೆಗಳನ್ನು
ೀಕರಣಗೊಳಿಸಲಾಯಿತು. ಸಾಮಾನ್ಯ
ಗೆ ಲಭ್ಯವಾಗಿದ್ದ ಸಾಮಾಜಿಕ ಭದ್ರತೆ,
ಯೋಗದ ಭದ್ರತೆಗಳು ಮಾಯವಾಗಿ
ಉಳ್ಳವರ ಲಾಭದ ಭದ್ರತೆ ಮತ್ತು
ಹಿತಾಸಕ್ತಿಗಳ ಭದ್ರತೆಯೇ ಸರಕಾರಗಳ
ಮಂತ್ರವಾಯಿತು.
ಹಜವಾಗಿಯೇ ಯೂರೋಪ್‌ನ ಜನ
ತ್ತಿದ್ದಾರೆ, 'ಯಾರ ಲಾಭಕ್ಕಾಗಿ ಯಾರು

ಬೆಲೆ ತೆರಬೇಕು?' ತಮ್ಮ ಪ್ರಶ್ನೆಗೆ ಉತ್ತರ ಬಯಸಿ ಜನ ಬೀದಿಗಿಳಿದಿದ್ದಾರೆ. 'ಸರಕಾರ ತಮಗೋಸ್ಕರವೇ ಕೆಲಸ ಮಾಡುತ್ತಿದೆ' ಎಂಬ ಭ್ರಮೆಯಿಂದ ಜನ ಹೊರಬರುತ್ತಿದ್ದಾರೆ. 'ಸರಕಾರದ ನೀತಿಗಳು ಬದಲಾಗಬೇಕು' ಎಂದು ಹೇಳುವಷ್ಟರ ಮಟ್ಟಿಗೆ ಜನಚಿಂತನೆ ಮೂಡಿ ಬಂತು. ಅದರಂತೆಯೇ ಸರಕಾರಗಳು ಉರುಳಿವೆ. ಹೊಸ ಸರಕಾರಗಳು ಬಂದಿವೆ. ಆದರೆ ಪರಿಸ್ಥಿತಿ ಬದಲಾಗುವ ಸೂಚನೆಗಳೇ ಇಲ್ಲ. ನಿಧಾನವಾಗಿ 'ಸರಕಾರಗಳಲ್ಲ, ವ್ಯವಸ್ಥೆಯೇ ಬದಲಾಗ ಬೇಕು' ಎಂಬ ಭಾವನೆ ಮೂಡುತ್ತಿದೆ. ಸುಧಾರಣಾವಾದೀ ಕಾರ್ಮಿಕ ಸಂಘಟನೆಗಳನ್ನು ಧಿಕ್ಕರಿಸಿ, ತಿರಸ್ಕರಿಸಿ ಕಾರ್ಮಿಕರು ಧೀಮಂತ ಹೋರಾಟ ನಡೆಸಿದ್ದಾರೆ. 'ನಾವು ಶೇ. 99 ರಷ್ಟಿದ್ದೇವೆ; ನೀವು (ಅಂದರೆ ಸರ್ಕಾರಗಳು) ಶೇ. 1 ರಷ್ಟಿರುವವರ ಪರವಾಗಿದ್ದೀರಿ' ಎಂದು ಅಮೇರಿಕಾದಲ್ಲಿ ಮೊಳಗಿಬಂದ ಘೋಷಣೆ ಯೂರೋಪನ್ನೂ ಆವರಿಸಿದೆ.

ನಿಜಕ್ಕೂ ಸಂಪತ್ತನ್ನು ಉತ್ಪಾದಿಸುವ ದುಡಿಯುವ ಜನರನ್ನು ವಂಚಿಸಿ ಅವರ ದುಡಿಮೆಯ ಫಲವನ್ನು ಕೊಳ್ಳೆಹೊಡೆಯುವ ಲಾಭಬಡುಕ-ಲೂಟಿಕೋರ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಇಂತಹ ಬಿಕ್ಕಟ್ಟುಗಳಿಗೆ ಕೊನೆಯೇ ಇಲ್ಲ. ಭ್ರಮಾತ್ಮಕ ತೋರಿಕೆಯ ಅಭಿವೃದ್ಧಿಯ ಬದಲಾಗಿ ಕೃಷಿ, ಕೈಗಾರಿಕೆಗಳಲ್ಲಿ ನಿಜವಾದ ಉತ್ಪಾದನೆ ಮತ್ತು ಸಮೃದ್ಧಿಗಾಗಿ ಸಾರ್ವಜನಿಕ ಹೂಡಿಕೆ ಮಾಡುವುದು, ವ್ಯಾಪಕವಾಗಿ ಉದ್ಯೋಗವನ್ನು ಸೃಷ್ಟಿಸುವುದು, ಶ್ರೀಮಂತರ, ಬಂಡವಾಳಿಗರ ಲಾಭದ ಪಾಲಿಗೆ ಕತ್ತರಿ ಹಾಕಿ ದುಡಿಯುವ ಜನರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವುದು, ಅವರ ಬದುಕನ್ನು ಉತ್ತಮ ಪಡಿಸುವುದೊಂದೇ ಈ ಬಿಕ್ಕಟ್ಟಿನಿಂದ ಚೇತರಿಸಿಕೊಳ್ಳುವ ದಾರಿ. ದುಡಿಯುವ ಜನತೆಗೆ ತಮ್ಮ ಬೆವರಿನ ಗರಿಷ್ಟ ಫಲವನ್ನು ನೀಡುವ ವ್ಯವಸ್ಥೆಯೇ ರೋಗಗ್ರಸ್ಥ ಬಂಡವಾಳಶಾಹಿ ವ್ಯವಸ್ಥೆಗೆ ಪರ್ಯಾಯ. ಅದಲ್ಲದೇ ಇರುವ ಬೇರೆ ಯಾವ ಪರಿಹಾರಗಳೂ ತಾತ್ಕಾಲಿಕ.

'ಸಮೃದ್ಧಿ ಹಾಗೂ ಶ್ರೀಮಂತಿಕೆ'ಯ ಕನಸಿನ ಹುಸಿ ಭರವಸೆಗಳನ್ನು ನಂಬಿ ದುಡಿದ ವಿಶಾಲ ಜನ ಸಮೂಹ ಇಂದು ಅತೀವ ಅಸಮಾನತೆ, ಉಲ್ಬಣಗೊಳ್ಳುತ್ತಿರುವ ಸಾಮಾಜಿಕ ವೈಪರೀತ್ಯಗಳು, ನಲುಗುತ್ತಿರುವ ವರ್ತಮಾನದ ಬದುಕು ಹಾಗೂ ಮಂಕಾಗಿರುವ ಭವಿಷ್ಯದ ವಿಷ ವರ್ತುಲದಲ್ಲಿ ಸಿಲುಕಿದೆ.

ಕೆಟ್ಟ ನೀತಿಗಳ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದವರನ್ನು ಹತ್ತಿಕ್ಕಲು ಸದಾಕಾಲ ನಿರತವಾಗಿದ್ದ ಗ್ರೀಸಿನ ಪೋಲೀಸರೇ ಇಂದು ತಮ್ಮ ಉದ್ಯೋಗಗಳ ಕಡಿತದ ವಿರುದ್ಧ ಬೀದಿಗಿಳಿದಿದ್ದಾರೆ. ವ್ಯವಸ್ಥೆಯಲ್ಲಿ ಶಿಸ್ತು ಮತ್ತು ಕಾನೂನು ಪಾಲನೆಯ ರಕ್ಷಣೆಯ ಹೊರೆ ಹೊತ್ತಿದ್ದ ಜನಗಳೇ ಅದೇ ವ್ಯವಸ್ಥೆ ತಂದೊಡ್ಡಿರುವ ದುರವಸ್ಥೆಯ ವಿರುದ್ಧ ದನಿ ಮಾತ್ರವಲ್ಲ ಮುಷ್ಟಿಯನ್ನೂ ಎತ್ತುತ್ತಿದ್ದಾರೆ.

ಇತಿಹಾಸದ ಸಂಧಿಕಾಲದಲ್ಲಿಂದು ಯೂರೋಪಿಯನ್ ಸಮುದಾಯ ಬಂದು ನಿಂತಿದೆ. ಜನತೆಯಿಂದಲೇ ದುಡಿಮೆ ಮತ್ತು ದುಡಿಮೆಯಿಂದಲೇ ಲಾಭ. ಆದುದರಿಂದ ಜನ ಮತ್ತು ಅವರ ದುಡಿಮೆ ಮುಖ್ಯವೇ ಹೊರತು ಲಾಭ ಮಾತ್ರವೇ ಅಲ್ಲ. ಇದು ನಿಸರ್ಗದ ನಿಯಮ. ನಿಲ್ಲಲು ಅಣಿಯಾಗಿರುವ ಜನ ಮಾತ್ರವೇ ಗೆಲ್ಲಲು ಸಾಧ್ಯ. ಇದು ಇತಿಹಾಸದ ಪಾಠ. ಇತಿಹಾಸದ ವಿರೋಚಿತ ಹೊಸ ಅಧ್ಯಾಯಗಳನ್ನು ಬರೆಯುವಲ್ಲಿ ಯುರೋಪಿನ ದುಡಿಯುವ ಜನತೆ ಸಫಲರಾಗುತ್ತಾರೆ ಎಂದು ಆಶಿಸೋಣ. ●

## ಅಡಿಕೆ ಬೆಳೆಗಾರರಿಗೆ.....

ಪುಟ 12 ರಿಂದ

ಸಮಸ್ಯೆಗಳ ಬಗ್ಗೆ ವಿಶಾಲ ರೀತಿಯ ಚಳುವಳಿ ನಡೆಸುವ ಉದ್ದೇಶದಿಂದ, ಬೆಳೆಗಾರರ ವಿವಿಧ ಸಂಘಟನೆಗಳನ್ನು ಸೇರಿಸಿಕೊಂಡು ಕೇಂದ್ರ ರಾಜ್ಯ ಸರಕಾರಗಳನ್ನು ಒತ್ತಾಯಿಸುವ ಕಾರ್ಯದಲ್ಲಿ ಮುಂದಾಗಿದೆ. ಇಂತಹ ಸಂಕಷ್ಟಗಳಿಗೆ ಬಲಿಯಾಗುತ್ತಿರುವ ಅಡಿಕೆ ಬೆಳೆಗಾರರಿಗೆ ಭದ್ರತೆ ಸಿಗುವಂತೆ ತೀವ್ರ ಹೋರಾಟಕ್ಕೆ ಮುಂದಾಗುವುದು ಬಹಳ ಅಗತ್ಯ.

**ಆದುದರಿಂದ ಅಡಿಕೆ ಬೆಳೆಗಾರರ ಈ ಕೆಳಗಿನ ಬೇಡಿಕೆಗಳನ್ನು ಒತ್ತಾಯಿಸಿ ಹೋರಾಟ ನಡೆಸಬೇಕಾಗಿದೆ.**

1. ಪ್ರಾಕೃತಿಕ ವಿಕೋಪದಿಂದ ಸಂಭವಿಸುವ ಕೃಷಿ ಹಾನಿಗೆ ಸೂಕ್ತ ವೈಜ್ಞಾನಿಕ ಪರಿಹಾರ ನೀಡಬೇಕು.
2. ಸಂಕಷ್ಟದಲ್ಲಿರುವ ಬೆಳೆಗಾರರ ಸಾಲ ಮನ್ನಾ ಮಾಡಬೇಕು ಮತ್ತು ಹೊಸ ಸಾಲ ನೀಡಬೇಕು.
3. ಅಡಿಕೆ ಅಭಿವೃದ್ಧಿ ಮಂಡಲಿ ಸ್ಥಾಪನೆ ಮಾಡಬೇಕು ಮತ್ತು ಪರ್ಯಾಯ ಬೆಳೆಗೆ ಅಡಿಕೆ ಬೆಳೆಗಾರರಿಗೆ ಪ್ರೋತ್ಸಾಹಿಸಿ ಅದಕ್ಕಾಗಿ ವಿಶೇಷ ಪ್ಯಾಕೇಜ್ ನೀಡಬೇಕು.
4. ಅಡಿಕೆ ಬೆಳೆಗಳಿಗೆ ಉತ್ಪಾದನಾ ವೆಚ್ಚ ಆಧರಿಸಿ ವೈಜ್ಞಾನಿಕವಾಗಿ ಬೆಲೆ ನಿಗದಿ ಮಾಡಬೇಕು. ಮತ್ತು ವಿದೇಶಗಳಿಂದ ಅಡಿಕೆ ಆಮದಾಗುವುದನ್ನು ನಿಷೇಧಿಸಬೇಕು.

ಈ ಎಲ್ಲಾ ಬೇಡಿಕೆಗಳನ್ನು ಕೇಂದ್ರ, ರಾಜ್ಯ ಸರಕಾರಗಳು ಜಾರಿಗೊಳಿಸಲು ಒತ್ತಾಯಿಸಿ ಅಡಿಕೆ ಬೆಳೆಗಾರರು ವಿಶಾಲ ರೀತಿಯ ಚಳವಳಿಗೆ ಸಜ್ಜಾಗಬೇಕು. ●

## ರ್ಪೊರೇಟ್ ಧೂರ್ತರ...

5 ರಿಂದ

ಳನ್ನು ಸ್ವಲ್ಪವಾದರೂ ಪರಿಗಣನೆಗೆ
ಕೊಂಡು ಅನೇಕ ಜನಪ್ರಿಯ
ರ್ಯಕ್ರಮಗಳನ್ನು ರೂಪಿಸಿ ಅದ-
ವನ್ನು ಸಂಗ್ರಹಿಸಲು ಕಾರ್ಪೊರೇಟ್
ತೆರಿಗೆ ವಿನಾಯತಿಗಳನ್ನು
ಮಾಡುವ ಪ್ರಸಂಗ ಬರುತ್ತಿತ್ತು. ಕೆಲ
ಚಾರ ಪ್ರಸಂಗಳ ಮೇಲೆ ಕಠಿಣ ಕ್ರಮ,
ಕಾನೂನುಗಳ ರಚನೆ, ಕಾರ್ಪೊರೇಟ್
ಯದ ಮೇಲೆ ಹೆಚ್ಚು ತನಿಖೆ, ಇವು
ದರೂ ಸಾಧ್ಯವಾಗುತ್ತಿದ್ದ ಕ್ರಮಗಳು.
ವಿಷಯಗಳು ಚರ್ಚೆಗೆ ಬಂದ-
ಆಗ ಇವುಗಳಿಂದ ರೋಸಿಹೋದ
-ಮುಖ್ಯವಾಗಿ ಬಡಜನತೆ ರೈತರು,
ಕಾರರು, ದಲಿತರು, ಹಿಂದುಳಿದ
ಗಳ ಜನತೆ, ಅಲ್ಪ ಸಂಖ್ಯಾತರ ಒಳಗಿನ
ಹೊರಬಂದು 1967ರಲ್ಲಿ, 1977ರಲ್ಲಿ,
ರಲ್ಲಿ, 1989ರಲ್ಲಿ, 1996ರಲ್ಲಿ 2004ರಲ್ಲಿ
ದಂತೆ ಇರುವ ಸರ್ಕಾರವನ್ನು
ರಿಸುತ್ತಿತ್ತು. ಒಂದು ಬಾರಿ ಬಿಟ್ಟರೆ
ತ ಸಮಯದಲ್ಲಿಯೂ ಮುಂದಿನ
ಅಭ್ಯರ್ಥಿ ಯಾರು ಎಂಬ
ಉದ್ಭವಿಸಿರಲಿಲ್ಲ. ಕಾಂಗ್ರೆಸಿಗೆ
ಂದು ಜಾತ್ಯಾತೀತವಾದ
ರ್ಯಾಯ ರೂಪುಗೊಳ್ಳುತ್ತದೆಂಬ ಭರವಸೆ
ೂ ಬಹಳ ಸಂದರ್ಭಗಳಲ್ಲಿ ಇರಲಿಲ್ಲ.

ಜನ ತಮ್ಮ ಓಟಿನಿಂದಲೇ ಪರ್ಯಾಯವನ್ನು ರೂಪಿಸಿದ್ದರು. ಮತ್ತೆ ಹೀಗಾಗಬಹುದೆಂಬ ಭಯವೇ ಕಾರ್ಪೊರೇಟ್ ಕುಳಗಳನ್ನು ಮೋದಿಯತ್ತ ಓಡುವಂತೆ ಮಾಡಿದ್ದು. ಈ ಐದು ವರ್ಷಗಳ ಕಾಂಗ್ರೆಸಿನ ಆಡಳಿತ ಅಥವಾ ದುರಾಡಳಿತ ಕರ್ನಾಟಕದಲ್ಲಿ ಬಿಜೆಪಿಯ ಆಡಳಿತದ ಬಗ್ಗೆ ಹುಟ್ಟಿಸಿದ ಅಸಹ್ಯವನ್ನೇ ಜನರಲ್ಲಿ ಹುಟ್ಟಿಸಿದೆ. ಕಾಂಗ್ರೆಸ್ ಸೋಲುವ ಪ್ರಸಂಗದಲ್ಲಿ ಮುಂದೆ ಬರುವ ಸರ್ಕಾರ ನಮಗೆ ಎಲ್ಲಾ ರೀತಿಯಲ್ಲೂ ಅನುಕೂಲವಾಗಿರಬೇಕು ಎಂಬ ಲೆಕ್ಕಾಚಾರ ಇದರಲ್ಲಿದೆ ಎಂದು ಯಾರು ಬೇಕಾದರೂ ಊಹಿಸಬಹುದು.

ಆದರೆ ಕಾರ್ಪೊರೇಟ್ ಕುಳಗಳ ಲೆಕ್ಕಾಚಾರ ಅಷ್ಟಕ್ಕೆ ಸೀಮಿತವಾಗಿಲ್ಲ. ಮೋದಿಯನ್ನು ಪ್ರಧಾನಿ ಅಭ್ಯರ್ಥಿ ಎಂದು ಘೋಷಿಸಿದ ಕೂಡಲೇ ಮೇಲೆ ಹೇಳಿದ ಭ್ರಷ್ಟಾಚಾರ, ಬೆಲೆ ಏರಿಕೆ, ತೆರಿಗೆ ವಿನಾಯತಿ ಮುಂತಾದವೆಲ್ಲಾ ಮರೆಯಾಗಿ ಅದರಿಂದ ಕಾರ್ಪೊರೇಟ್ ಕುಳಗಳಿಗೆ ಆಗಬಹುದಾದ ಆಪತ್ತು ಮರೆಯಾಗಿ ಗುಜರಾತ್ ನರಮೇಧ, ಕೋಮುವಾದ,ಗೋಹತ್ಯೆ,ರಾಮಜನ್ಮಭೂಮಿ, ಜಮ್ಮುಕಾಶ್ಮೀರ, ಪಾಕ್ ವಿರುದ್ಧ ದ್ವೇಷ ಇಂತಹುವುಗಳೇ ವಿಜೃಂಭಿಸುತ್ತವೆ. ಆಗ ಸರಿಸುಮಾರು ಕಾಂಗ್ರೆಸ್‌ನಿಂದ ದೂರ ಸರಿಯುತ್ತಿರುವ ಎಲ್ಲ ಅಲ್ಪ ಸಂಖ್ಯಾತರು, ಬಹುತೇಕ ದಲಿತರು ಮುಂತಾದ ಬಡವರು, ಜಾತ್ಯಾತೀತ, ಪ್ರಜಾಪ್ರಭುತ್ವ ಮನೋಭಾವದ ಜನರು ಮತ್ತೆ ಕಾಂಗ್ರೆಸ್ ತೆಕ್ಕೆಗೆ ಮರಳುತ್ತಾರೆ. ರಾಜಕೀಯ ಕಾಂಗ್ರೆಸ್ ಇಲ್ಲಾ ಬಿಜೆಪಿ ಎಂದು ಧೃವೀಕರಣಗೊಳ್ಳುತ್ತದೆ. ಆಗ ಕಾರ್ಪೊರೇಟ್ ವಲಯ ಇಬ್ಬರಲ್ಲಿ ಯಾರಾದರೂ ಬರಲಿ, ನಮ್ಗೆ ಅನುಕೂಲವೇ. ಎಂದು ಆರಾಮಾಗಿ ನೈಸರ್ಗಿಕ ಸಂಪತ್ತಿನ, ಬಜೆಟ್‌ನ ಲೂಟಿಯನ್ನು, ಬೆಲೆ ಏರಿಕೆ, ಖಾಸಗೀಕರಣದ ಮೂಲಕ ಜನರ ಲೂಟಿಯನ್ನು ಮುಂದುವರೆಸಬಹುದು ಎಂಬುದು ಕಾರ್ಪೊರೇಟ್ ಧೂರ್ತರ ಲೆಕ್ಕಾಚಾರ.

ಅನಂತಮೂರ್ತಿಯವರು ಹಾಗೂ ಹಾಗೆ ಯೋಚಿಸುತ್ತಿರುವ ಅನೇಕ ಸಾಹಿತಿ ಕಲಾವಿದರು ಕಾರ್ಪೊರೇಟ್ ಧೂರ್ತರು ತೋಡಿದ ಖೆಡ್ಡಾಕ್ಕೆ ಬೀಳಬೇಕೆ? ನೈಸರ್ಗಿಕ ಸಂಪತ್ತಿನ ಅಪಾರ ಲೂಟಿ, ತೆರಿಗೆ ಲೂಟಿ, ಪರಿಸರ ನಾಶ, ಪ್ರಕೃತಿ ವಿಕೋಪಗಳ ನಿರ್ವಹಣೆ, ರೈತರ ಆತ್ಮಹತ್ಯೆ ನಿರುದ್ಯೋಗ, ಇತ್ಯಾದಿಗಳನ್ನು ಕೇವಲ ಪಿಕ್ ಪಾಕೆಟ್ ಎಂದು ಹಗುರವಾಗಿ ಕಂಡರೆ ಲಕ್ಷಾಂತರ ರೈತರ ಆತ್ಮಹತ್ಯೆಯಿಂದ ನರಳುತ್ತಿರುವ ಕುಟುಂಬಗಳ ಕಷ್ಟ ಬಗೆಹರಿದೀತೇ? ಹಾಗೆಂದ ಮಾತ್ರಕ್ಕೆ ಕೆಲ ಪ್ರಗತಿಪರರೂ ಹೇಳುತ್ತಿರುವಂತೆ ಮೋದಿ ಬರಲಿ ಬಿಡಿ, ಪ್ರಜಾಪ್ರಭುತ್ವದಲ್ಲಿ ಅದಕ್ಕೂ ಅವಕಾಶವಿರಬೇಕಲ್ಲ ಎಂಬ ವಿರುದ್ಧ ದಿಕ್ಕಿನ ಹಗುರವಾಗಿ ಕಾಣುವ ಪ್ರವೃತ್ತಿಯನ್ನು ಸೂಚಿಸುತ್ತಿಲ್ಲ. ಮೋದಿಯ ಅಧಿಕಾರವೆಂದರೆ, ಆರೆಸ್ಸೆಸ್ ಅಧಿಕಾರದ ಅಪಾಯದ ತೀವ್ರತೆಯ ಬಗ್ಗೆ ಅನಂತ ಮೂರ್ತಿಯವರು ಹೇಳಿದ್ದನ್ನು ಪೂರ್ಣವಾಗಿ ಒಪ್ಪಿಕೊಳ್ಳುತ್ತಲೇ ಕಾಂಗ್ರೆಸ್‌ನ ಆಡಳಿತ ಜನರಿಗೆ ತಂದೊಡ್ಡಿದ ಸಂಕಷ್ಟಗಳ ಬಗ್ಗೆ ಹಗುರ ಭಾವನೆ ಜನತೆಯನ್ನೇ ಹಗುರವಾಗಿ ಕಂಡಂತೆ ಎಂಬುದನ್ನು ಅವರೆಲ್ಲರೂ ಮನಗಾಣಬೇಕು ಎಂದು ನನ್ನ ವಿನಮ್ರ ಮನವಿ. ಜನರ ಸಂಕಷ್ಟಗಳನ್ನು ಕೋಮುವಾದಷ್ಟೇ ತೀವ್ರವಾಗಿ ಚರ್ಚೆಗೆ ತರಬೇಕು.

ಕಾಂಗ್ರೆಸ್‌ಗೆ ಬದಲಾಗಿ ಮೋದಿ, ಬಿಜೆಪಿ ಎನ್ನುವುದು ಎಷ್ಟು ಜನಹಿತಕ್ಕೆ, ದೇಶದ ಹಿತಕ್ಕೆ ವಿರೋಧವೋ- ಆರೆಸ್ಸೆಸ್, ಮೋದಿಯ ಅಪಾಯವನ್ನು ತಪ್ಪಿಸಲು ಕಾಂಗ್ರೆಸ್ ಪರ್ಯಾಯ ಎಂಬ ಮಾತೂ ಅಷ್ಟೇ ಅಪಾಯಕಾರಿ. ಬಿಜೆಪಿ-ಕಾಂಗ್ರೆಸ್ ರಹಿತವಾದದ್ದು ಎಷ್ಟೇ ಸಮಸ್ಯಾಕರವೆನಿಸಿದರೂ ಅದೇ ಇಂದಿನ ಪರ್ಯಾಯ. ಅಂತಹುದೊಂದು ರಾಜಕೀಯ ಪರ್ಯಾಯವೂ ಕೂಡ ಇಂದು ದಕ್ಷಿಣ ಅಮೇರಿಕದಲ್ಲಾಗುತ್ತಿರುವಂತೆ ಜಾಗತೀಕರಣ, ಖಾಸಗೀಕರಣಗಳಿಗೆ ಪರ್ಯಾಯವಾದ ನೀತಿಗಳ ಸಮುಚ್ಚಯವನ್ನೇ ರೂಪಿಸಿ ಜಾರಿಗೆ ತರುವಂತೆ ಒತ್ತಡ ಹಾಕಬೇಕಾದದ್ದು ಇಂದಿನ ಸಂದರ್ಭದಲ್ಲಿ ಅವಶ್ಯ. ಈ ಬಗ್ಗೆ ಎಲ್ಲರೂ ಆಳವಾಗಿ ಯೋಚಿಸತೊಡಗಬೇಕು. ಕಾರ್ಪೊರೇಟ್ ದೊರೆಗಳು ತೋಡಿದ ಖೆಡ್ಡಾಕ್ಕೆ ಬೀಳಬಾರದು ಎಂದು ನನ್ನ ಮನವಿ. ●

JANASHAKTHI KANNADA VARA PATRIKE SEP 25, 2013
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO Licensed



# 'ಆತ್ಮಸಾಕ್ಷಿ ರಾಯಭಾರಿ' ಮಲಾಲಾ ಅಂತಾಳೆ !

## 'ಹೆಣ್ಣು ಮಕ್ಕಳ ಸಮಸ್ಯೆಗೆ...ಶಿಕ್ಷಣ...ಸಮಾಜವಾದ...ಒಂದೇ ಪರಿಹಾರ'


ಪಾಕಿಸ್ತಾನದಲ್ಲಿ (ಅದರಲ್ಲೂ ವಿಶೇಷವಾಗಿ ಗಡಿಪ್ರದೇಶಗಳಲ್ಲಿ) ತಾಲಿಬಾನ್ ಮತ್ತು 'ಅವರ ಬೇಟೆಯಾಡುತ್ತೇವೆ' ಎಂದು ಹೇಳಿಕೊಳ್ಳುವ ಅಮೆರಿಕದ ಡ್ರೋನ್ ವಿಮಾನಗಳ ದಾಳಿ ನಡುವೆ ಸಿಕ್ಕು ಹೆಣ್ಣು ಮಕ್ಕಳ ಸ್ಥಿತಿ ಇನ್ನಷ್ಟು ದುರ್ಭರವಾಗಿದೆ. ಜಗತ್ತಿನ ಎಲ್ಲೇ ಆಗಲಿ ಯಾವುದೇ ಯುದ್ಧ, ಅಂತರ್ಯುದ್ಧ ಮತ್ತು ದಂಗೆಗಳಲ್ಲಿ ಮೊದಲು ಮತ್ತು ಅತ್ಯಂತ ತೀವ್ರವಾಗಿ ಬಲಿಯಾಗುವವಳು ಮಹಿಳೆ. ಈಗಾಗಲೇ ದುಸ್ಥಿತಿಯಲ್ಲಿದ್ದ ಹೆಣ್ಣು ಮಕ್ಕಳ ಶಿಕ್ಷಣ ಈ ಯುದ್ಧದ ಅತಿ ದೊಡ್ಡ ಬಲಿ. ಇದರ ವಿರುದ್ಧ ದನಿ ಎತ್ತಿ ತಾಲಿಬಾನ್ ದಾಳಿಗೆ ಗುರಿಯಾದ ಹದಿ ಹರೆಯದ ಮಲಾಲಾ ಯೂಸುಫ್ ಝೈಗೆ ಈಗ ಅಮ್ನೆಸ್ಟಿ ಇಂಟರ್‌ನ್ಯಾಶನಲ್ 'ಆತ್ಮಸಾಕ್ಷಿ ರಾಯಭಾರಿ' ಪ್ರಶಸ್ತಿ ಕೊಡಲಾಗಿದೆ.

ಕಳೆದ ಅಕ್ಟೋಬರಿನಲ್ಲಿ ಪಾಕಿಸ್ತಾನದ ಗಡಿ ಪ್ರದೇಶವಾದ ಸ್ವಾತ್‌ನಲ್ಲಿ ದಾಳಿಗೊಳಗಾದ ಮಲಾಲಾ ಚಿಕಿತ್ಸೆಗಾಗಿ ಬ್ರಿಟನಿನ ಬರ್ಮಿಂಗ್ ಹ್ಯಾಮಿಗೆ ತೆರಳಿ ಈಗ ಅಲ್ಲಿ ನೆಲೆಸಿದ್ದು ತನ್ನ ಶಿಕ್ಷಣ ಮುಂದುವರೆಸುತ್ತಿದ್ದಾಳೆ. ಹೆಣ್ಣು ಮಕ್ಕಳ ಶಿಕ್ಷಣದ ಬಗ್ಗೆ ಅಂತರ್‍ರಾಷ್ಟ್ರೀಯ ಪ್ರಚಾರ-ಪ್ರಕ್ಷೋಭೆಯಲ್ಲಿ ತೊಡಗಿದ್ದಾಳೆ. ಆಕೆಯ ಹುಟ್ಟಿದ ದಿನ ಜುಲೈ 12 ನ್ನು ಇನ್ನು ಮುಂದೆ ಸಾರ್ವತ್ರಿಕ ಶಿಕ್ಷಣದ ಆವಶ್ಯಕತೆ ಬಗ್ಗೆ ಪ್ರಚಾರ ಮಾಡಲು 'ಮಲಾಲಾ ದಿನ' ಎಂದು ಆಚರಿಸಲು ವಿಶ್ವಸಂಸ್ಥೆ ನಿರ್ಧರಿಸಿದೆ. ಆಕೆಯನ್ನು ವಿಶ್ವಸಂಸ್ಥೆಯ ಯುವ ಅಸೆಂಬ್ಲಿ ಮತ್ತು ಜನರಲ್ ಅಸೆಂಬ್ಲಿಗೆ ಗೌರವ ಅತಿಥಿಯಾಗಿ ಆಹ್ವಾನಿಸಲಾಗಿತ್ತು. ತಾಲಿಬಾನ್ ಭಯೋತ್ಪಾದನೆ ಎದುರಿಸಿದ ಮಲಾಲಾ ಕೆಚ್ಚು, ಈ ಪ್ರಚಾರ ಕಾರ್ಯದಲ್ಲಿ ಹಲವು ಕಡೆ ಆಕೆಯ ಮಾರ್ಮಿಕ ಮಾತುಗಳು ಮಹಿಳಾ ಚಳುವಳಿಕಾರರಿಗೆ ಸ್ಫೂರ್ತಿದಾಯಕವಾಗಿವೆ.

'ಆತ್ಮಸಾಕ್ಷಿ ರಾಯಭಾರಿ' ಪ್ರಶಸ್ತಿ ಸ್ವೀಕರಿಸಿದಾಗ, ವಿಶ್ವಸಂಸ್ಥೆ ಜನರಲ್ ಅಸೆಂಬ್ಲಿಯಲ್ಲಿ ಮಾಡಿದ ಭಾಷಣಗಳ ಮತ್ತು ಪಾಕಿಸ್ತಾನದ ಎಡಪಕ್ಷವೊಂದರ ಸಮ್ಮೇಳನಕ್ಕೆ ಕಳಿಸಿದ ಸಂದೇಶದ ಕೆಲವು ಗಮನಾರ್ಹ ಮಾತುಗಳು ಇಲ್ಲಿವೆ. ಹೆಣ್ಣು ಮಕ್ಕಳ ಸಮಸ್ಯೆಗೆ ಶಿಕ್ಷಣ ಮತ್ತು ಸಮಾಜವಾದ 'ಒಂದೇ ಪರಿಹಾರ' ಅಂತಾಳೆ ಮಲಾಲಾ ! ಮಲಾಲಾ ಮಾತುಗಳಲ್ಲೇ ಅದನ್ನು ಕೇಳೋಣ!

**ವಿಶ್ವಸಂಸ್ಥೆ ಜನರಲ್ ಅಸೆಂಬ್ಲಿಯಲ್ಲಿ:**

ಮಲಾಲಾ ದಿನ ನನ್ನ ದಿನ ಅಲ್ಲ. ತಮ್ಮ ಹಕ್ಕುಗಳ ಬಗ್ಗೆ ತಮ್ಮ ದನಿ ಎತ್ತರಿಸಿದ ಪ್ರತಿ ಮಹಿಳೆಯ, ಪ್ರತಿ ಹುಡುಗನ, ಪ್ರತಿ ಹುಡುಗಿಯ ದಿನ. ನೂರಾರು ಮಾನವ ಹಕ್ಕುಗಳ ಮತ್ತು ಸಾಮಾಜಿಕ ಕಾರ್ಯಕರ್ತರು ಮಾನವ ಹಕ್ಕುಗಳ ಬಗ್ಗೆ ಬರಿಯ ಮಾತುಗಳನ್ನಾಡುತ್ತಿಲ್ಲ. ಶಿಕ್ಷಣ, ಶಾಂತಿ ಮತ್ತು ಸಮಾನತೆಯ ತಮ್ಮ ಉದ್ದೇಶಗಳಿಗಾಗಿ




ಹೋರಾಡುತ್ತಿದ್ದಾರೆ. ಸಾವಿರಾರು ಇಂತಹ ಕಾರ್ಯಕರ್ತರನ್ನು ಭಯೋತ್ಪಾದಕರು ಕೊಲೆ ಮಾಡಿದ್ದಾರೆ. ಲಕ್ಷಾಂತರ ಕಾರ್ಯಕರ್ತರು ಗಾಯಗೊಂಡಿದ್ದಾರೆ. ನಾನು ಅವರಲ್ಲಿ ಒಬ್ಬಳಷ್ಟೇ !..

..ಅಕ್ಟೋಬರ್ 9, 2012ರಂದು ನನ್ನ ಹಣೆಯ ಎಡಭಾಗಕ್ಕೆ ತಾಲಿಬಾನಿಯೊಬ್ಬ ಗುಂಡು ಹಾರಿಸಿದ. ಅವರು ನನ್ನ ಸ್ನೇಹಿತರ ಮೇಲೂ ಗುಂಡು ಹಾರಿಸಿದರು. ಗುಂಡುಗಳಿಂದ ನಮ್ಮ ಬಾಯಿ ಮುಚ್ಚಿಸಬಹುದು ಎಂಬುದು ಅವರ ಎಣಿಕೆಯಾಗಿತ್ತು. ಆದರೆ ಅವರು ಅದರಲ್ಲಿ ವಿಫಲರಾದರು. ಆ ಮೌನದಿಂದ ಸಾವಿರಾರು ದನಿಗಳು ಎದ್ದು ಬಂದವು. ನಮ್ಮ ಉದ್ದೇಶಗಳನ್ನು ಬದಲಿಸಬಹುದು ಆಕಾಂಕ್ಷೆಗಳನ್ನು ಬತ್ತಿಸಬಹುದು ಎಂದು ಅವರು ಲೆಕ್ಕಾಚಾರ ಹಾಕಿದ್ದರು. ಆದರೆ ನನ್ನ ಬದುಕಿನಲ್ಲಿ ಆದ ಬದಲಾವಣೆ ಇಷ್ಟೇ: ದುರ್ಬಲತೆ, ಭಯ ಮತ್ತು ನಿರಾಶೆ ಸತ್ತು ಹೋದವು. ಬಲ, ಶಕ್ತಿ ಮತ್ತು ಧೈರ್ಯ ಹುಟ್ಟಿದವು. ನಾನು ಅದೇ ಮಲಾಲ. ನನ್ನ ಆಕಾಂಕ್ಷೆಗಳು ಅವೇ. ನನ್ನ ಆಸೆಗಳು ಅವೇ. ನನ್ನ ಕನಸುಗಳು ಅವೇ...

..ಕತ್ತಲಲ್ಲಿ ನಮಗೆ ಬೆಳಕಿನ ಮಹತ್ವ ಅರ್ಥವಾಗುತ್ತದೆ. ನಮ್ಮನ್ನು ಮೌನಕ್ಕೆ ಗುರಿ ಮಾಡಿದಾಗ ನಮಗೆ ಮಾತಿನ ಮಹತ್ವ ತಿಳಿಯುತ್ತದೆ. ಅದೇ ರೀತಿಯಲ್ಲಿ, ನಾವು ಉತ್ತರ ಪಾಕಿಸ್ತಾನದ ಸ್ವಾತ್‌ನಲ್ಲಿ ಇದ್ದಾಗ, ಗನ್ನುಗಳನ್ನು ನೋಡಲಾರಂಬಿಸಿದಾಗ ನಮಗೆ ಪೆನ್ನು ಪುಸ್ತಕಗಳ ಮಹತ್ವದ ಅರಿವಾಯಿತು.

'ಪೆನ್ನು ಖಡ್ಗಕ್ಕಿಂತ ಶಕ್ತಿಶಾಲಿಯಾದ್ದು' ಎಂಬ ಮಾತು ಅಕ್ಷರಶಃ ನಿಜ. ತಾಲಿಬಾನಿಗಳು ಪುಸ್ತಕ ಮತ್ತು ಪೆನ್ನಿಗೆ ಹೆದರುತ್ತಾರೆ. ಶಿಕ್ಷಣದ ಶಕ್ತಿ ಅವರಲ್ಲಿ ಬೆದರಿಕೆ ಉಂಟು ಮಾಡುತ್ತದೆ. ಅವರಿಗೆ ಮಹಿಳೆಯರನ್ನು ಕಂಡರೆ ಭಯ. ಮಹಿಳೆಯರ ದನಿಯ ಶಕ್ತಿ ಅವರಲ್ಲಿ ನಡುಕ ಹುಟ್ಟಿಸುತ್ತದೆ. ಆದ್ದರಿಂದಲೇ ಇತ್ತೀಚೆಗೆ ಅವರು 14 ಅಮಾಯಕ ಮೆಡಿಕಲ್ ವಿದ್ಯಾರ್ಥಿಗಳನ್ನು ಕೊಂದರು. ಖೈಬರ್ ಪಕ್ತೂನ್ ಖ್ವಾ ಮತ್ತು ಫಾತಾಗಳಲ್ಲಿ ಹಲವಾರು ಮಹಿಳಾ ಶಿಕ್ಷಕರನ್ನೂ ಪೋಲಿಯೋ ಕಾರ್ಯಕರ್ತರನ್ನು ಸಾಯಿಸಿದರು. ಆದ್ದರಿಂದಲೇ ಅವರು ಪ್ರತಿ ದಿನ ಒಂದಲ್ಲ ಒಂದು ಕಡೆ ಸ್ಕೂಲುಗಳನ್ನು ಬಾಂಬಿನಿಂದ ಉಡಾಯಿಸುತ್ತಿದ್ದಾರೆ. ನಾವು ಸಮಾಜದಲ್ಲಿ ತರುವ ಬದಲಾವಣೆ ಮತ್ತು ಸಮಾನತೆ ಊಹಿಸಿದರೂ ಅವರಿಗೆ ಪ್ರಾಣಭಯ.

ನಮ್ಮ ಸ್ಕೂಲಿನಲ್ಲಿ ಒಬ್ಬ ಹುಡುಗನನ್ನು ಪತ್ರಕರ್ತನೊಬ್ಬ "ತಾಲಿಬಾನಿಗಳು ಶಿಕ್ಷಣವನ್ನು ಯಾಕೆ ವಿರೋಧಿಸುತ್ತಾರೆ?' ಅಂತ ಕೇಳಿದ. ಅವನು ತನ್ನ ಒಂದು ಪುಸ್ತಕವನ್ನು ತೋರಿಸುತ್ತಾ ಸರಳ ಉತ್ತರ ಕೊಟ್ಟ "ಈ ಪುಸ್ತಕದಲ್ಲಿ ಏನು ಬರೆದಿದೆ ಅಂತ ತಾಲಿಬಾನಿಗೆ ಗೊತ್ತಿಲ್ಲ"

**'ಮಾನ್ಯ ಮಹಾಕಾರ್ಯದರ್ಶಿಗಳೇ, ಶಿಕ್ಷಣಕ್ಕೆ ಶಾಂತಿ ಆವಶ್ಯಕ..'**

ನಾವು ಜಾಗತಿಕ ನಾಯಕರನ್ನು ಸರ್ಕಾರಗಳನ್ನು ಒತ್ತಾಯಿಸುತ್ತೇವೆ...ನಿಮ್ಮ ವ್ಯೂಹ ನೀತಿಗಳನ್ನು ಶಾಂತಿ ಮತ್ತು ಸಮೃದ್ಧಿಯತ್ತ ಬದಲಾಯಿಸಿ...., ಮಹಿಳೆ ಮತ್ತು ಮಕ್ಕಳನ್ನು ರಕ್ಷಿಸುವ ಶಾಂತಿ ಒಪ್ಪಂದಗಳನ್ನು ಮಾಡಿ. ಮಹಿಳೆಯರ ಘನತೆ ಮತ್ತು ಹಕ್ಕುಗಳ ವಿರುದ್ಧ ಹೋಗುವ ಶಾಂತಿ ಒಪ್ಪಂದಗಳು ನಮಗೆ ಬೇಡ!...ನಿಮ್ಮ ದೇಶಗಳಲ್ಲಿ ಪ್ರತಿ ಮಗುವಿಗೂ ಉಚಿತ ಕಡ್ಡಾಯ ಶಿಕ್ಷಣ ಕೊಡಿ..

ನಿರಕ್ಷರತೆ, ಬಡತನ ಮತ್ತು ಭಯೋತ್ಪಾದನೆಗಳ ವಿರುದ್ಧ ಜಾಗತಿಕ ಸಮರ ಸಾರಲು ನಮ್ಮ ಪುಸ್ತಕ ಮತ್ತು ಪೆನ್ನುಗಳನ್ನು ಎತ್ತಿಕೊಳ್ಳೋಣ. ಒಂದು ಮಗು, ಒಂದು ಶಿಕ್ಷಕಿ ಮತ್ತು ಒಂದು ಪುಸ್ತಕ ಜಗತ್ತನ್ನು ಬದಲಿಸಬಲ್ಲುದು.

**ಶಿಕ್ಷಣ ಒಂದೇ ಪರಿಹಾರ ! ಶಿಕ್ಷಣಕ್ಕೆ ಮೊ ಆದ್ಯತೆ**

**ಪಾಕಿಸ್ತಾನದ ಎಡಪಕ್ಷವೊಂ ಮಹಾಧಿವೇಶನಕ್ಕೆ (ಮಾರ್ಚ್ 2013 ಕಳಿಸಿದ ಸಂದೇಶದಲ್ಲಿ :**

ಕಳೆದ ಬೇಸಗೆಯಲ್ಲಿ ಸ್ವಾತ್‌ನಲ್ಲಿ ನಿ ಸಂಘಟಿಸಿದ ಮಾರ್ಕ್ಸ್‌ವಾದಿ ಅಧ್ಯ ಶಿಬಿರದಲ್ಲಿ ಮಾರ್ಕ್ಸ್‌ವಾದ ಹಾ ಸಮಾಜವಾದದ ಪರಿಚಯ ಮಾಡಿಸಿ ಮತ್ತು ಮಾತನಾಡಲು ಅವಕಾಶ ನೀಡಿ ಕ್ಕೆ ನಾನು ನಿಮಗೆ ಆಭಾರಿಯಾಗಿದ್ದೆ ಪಾಕಿಸ್ತಾನದಲ್ಲಿ ಶಿಕ್ಷಣ ಮತ್ತು ಇ ಸಮಸ್ಯೆಗಳ ಬಗ್ಗೆ ಹೇಳುವುದಾದರೆ, ಸಮಸ್ಯೆಗಳ ಬಗ್ಗೆ ನಾವೇ ಕಾರ್ಯಾಚ ನಡೆಸಬೇಕು. ಬೇರೆ ಯಾರೋ ಬಂ ಇದನ್ನು ಮಾಡುತ್ತಾರೆ ಎಂದು ನಿರೀಕ್ಷಿಸುವ ಬೇಡ ಎಂದು ಹೇಳಬಯಸುತ್ತೇನೆ...

ನಿಮ್ಮ ಮಹಾಧಿವೇಶನಕ್ಕೆ ನನ್ನ ಮನದಾ ಶುಭಾಶಯಗಳು. ಸಮಾಜವಾದವೇ ನ ಸಮಸ್ಯೆಗಳಿಗೆ ಒಂದೇ ಪರಿಹಾರ ಎ ನನ್ನ ದೃಢ ನಂಬಿಕೆ. ಈ ಹೋರಾಟವ ವಿಜಯದತ್ತ ಮುನ್ನಡೆಸುವ ಹೋರಾಟ ತೊಡಗಬೇಕೆಂದು ಎಲ್ಲಾ ಸಂಗಾತಿಗ ನಾನು ವಿನಂತಿ ಮಾಡುತ್ತೇನೆ. ಇ ಮಾತ್ರವೇ ನಮ್ಮ ಕಂದಾಚಾರ ವ ಶೋಷಣೆಗಳ ಬೇಡಿಗಳನ್ನು ಕ ಹಾಕುವುದು.

**'ಆತ್ಮಸಾಕ್ಷಿ ರಾಯಭಾರಿ' ಪ್ರ ಸ್ವೀಕರಿಸಿದಾಗ :**

..ನಾನಿಲ್ಲಿ ನಾವು ಎದುರಿಸುತ್ತಿ ಸಮಸ್ಯೆಗಳನ್ನು ವಿವರಿಸಲು ಬಂ ಬದಲಾಗಿ ಅವಕ್ಕೆ ಪರಿಹ ಹುಡುಕಬೇಕಾಗಿದೆ.. ನನ್ನ ಪ್ರಕಾರ ಒ ಪರಿಹಾರ ಎಂದರೆ ಶಿಕ್ಷಣ.. ಶಿಕ್ಷ ಶಿಕ್ಷಣ..

ಈ ಪ್ರಬಲ ಆಯುಧದಿಂದ ನ ಹಿಂಸಾಚಾರ, ಭಯೋತ್ಪಾದನೆ, ಬ ಕಾರ್ಮಿಕ ಮತ್ತು ಅಸಮಾನತ ಸಮಸ್ಯೆಗಳ ವಿರುದ್ಧ ಹೋರಾಡಬ ನಮ್ಮ, ನಮ್ಮೆಲ್ಲರ ಉಜ್ವಲ ಭವಿಷ ಬೇಕಾದ್ದು, ನಮಗೆ ದಾರಿ ತೋರಿ ಬೇಕಾದ್ದು – ಒಂದು ಪೆನ್ನು, ಒಂದು ಪು – ಮಾತ್ರ..

ಇಂದು ಇಲ್ಲಿ ಬಂದ ಪ್ರತಿಯೊಬ್ಬ ಎಲ್ಲರೂ ಇವತ್ತಿನ ಸಭೆಯ ನ ಒಂದು ಸಣ್ಣ ಕೆಲಸ ಮಾಡಬೇಕು ಎ ಕೇಳಿಕೊಳ್ಳುತ್ತೇನೆ. ನಿಮ್ಮ ಸರ್ಕಾರ ಶಿಕ್ಷಣಕ್ಕೆ ಒತ್ತು ಕೊಡಬೇಕು ಎ ಪೇಪರಿನ ಮೇಲೆ ಪೆನ್ನು ಇಟ್ಟು ಕೇಳಿಕೆ ಈ ಬಗ್ಗೆ ನಿಜವಾದ ಕಾರ್ಯಾಚ ನಡಸಬೇಕೆನ್ನಿ. ಶಿಕ್ಷಣಕ್ಕೆ ಅತ್ಯಂತ ಹ ಪ್ರಾಶಸ್ತ್ಯ ಕೊಡಬೇಕು ಎಂದು ಒತ್ತಾಯಿ

..ಉಚಿತ ಕಡ್ಡಾಯ ಶಿಕ್ಷಣ ಮಕ್ಕಳಿಗೂ ಎಲ್ಲಾ ದೇಶಗಳಲ್ಲೂ ಸಿ ಜಗತ್ತಿನಲ್ಲಿ ನಾನು ಇರಬಯಸುತ್ತೇನೆ.

JANASHAKTHI KANNADA VARA PATRIKE: Printed by G.V.SRIRAMA REDDY, EMS Bhavana, No.37/A, 8th Cross, Mahalakshmi Layout, BANGALORE-560086Published by: G.V.SRIRAMA REDDY EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor NITHYANANDASWAMI EMS Bhavana, No.37/A, 8th Cross, Mahalakshmi Layout, BANGALORE-560086 Editor : NITHYANANDASWAMI